
ಸಂಪುಟ 23 ಸಂಚಿಕೆ 32-33
ಆಗಸ್ಟ್ 19, 2001 ಬೆಲೆ ರೂ. 3.00


ದುಡಿವ ಜನರ ಪ್ರಾಣಮಿತ್ರ

ಪಕ್ಷರಂಗ







ಕಾಶ್ಮೀರಿ ನಾಯಕ
ತರಿಗಾಮಿಯವರೊಂದಿಗೆ
ವಿಶೇಷ ಸಂದರ್ಶನ



ಬರ ಅಧ್ಯಯನ ಎಂಬ ಕಪಟ ನಾಟಕ



ಕಾಶ್ಮೀರ ದಳ್ಳುರಿ: ಇದೆ ಪರಿಹಾರ ದಾರಿ




ಅಡಿಕೆ ಬೆಳೆಗಾರನ ಆತ್ಮಹತ್ಯೆ



ಧೂಮಪಾನ ನಿಷೇಧ ಮತ್ತು ಬೀಡಿ ಕಾರ್ಮಿಕರು

ಜನವಿರೋಧಿ ರಾಜೀವ್ ಸರಕಾರ




ತನ್ನ ತಾಯಿ ಅನುಸರಿಸುತ್ತಿದ್ದ ನೀತಿಗಳಿಂದ ಒಂದಿಂಚು ಸರಿಯಲು ರಾಜೀವ್‌ಗಾಂಧಿ ಯಾವುದೇ ಪ್ರಯತ್ನ ಮಾಡಲಿಲ್ಲ. ಹಾಗೆ ನೋಡಿದರೆ, ಪ್ರಧಾನಿಯಾಗಿ ಅವರು ಮಾಡಿದ ಪ್ರಥಮ ಪತ್ರಿಕಾಗೋಷ್ಠಿಯಲ್ಲೇ ರಾಜೀವ್‌ಗಾಂಧಿ ತುರ್ತು ಪರಿಸ್ಥಿತಿಯನ್ನು ಸಮರ್ಥಿಸಿ ಕೊಂಡರು ಎಂಬುದು ನನ್ನ ನೆನಪು. ಪ್ರತಿಪಕ್ಷಗಳ ಬಗ್ಗೆಯೂ ಅವರು ಅಸಹನೆಯಿಂದ ಇದ್ದರು ಪಶ್ಚಿಮ ಬಂಗಾಳ ಮತ್ತು ತ್ರಿಪುರಾದಂಥ ರಾಜ್ಯಗಳ ಬಗೆಗಿನ ಪಕ್ಷಪಾತಿ ಧೋರಣೆ ಮುಂದುವರೆಯಿತು.

ತನ್ನ ಏಕಚಕ್ರಾಧಿಪತ್ಯವನ್ನು ಮುಂದುವರಿಸುವ ಗುರಿಯಿಂದ ಅವರು ಪಕ್ಷಾಂತರ ವಿರೋಧಿ ಕಾನೂನನ್ನು ರೂಪಿಸಿದರು. ಈ ಕಾನೂನಿಗೆ ನಮ್ಮ ವಿರೋಧ ಇರಲಿಲ್ಲ, ವಾಸ್ತವವಾಗಿ ಅದು ತಾತ್ವಿಕವಾಗಿ ಒಂದು ಒಳ್ಳೆಯ ಕ್ರಮವಾಗಿತ್ತು. ಆದರೆ, ಸಂಸದರು, ಶಾಸಕರ ಮಾರಾಟ ಕಾಂಗ್ರೆಸಿನದ್ದೇ ಸಂಸ್ಕೃತಿ ಎಂಬುದನ್ನು ಯಾರೂ ಮರೆಯಬಾರದು. ಸರಕಾರದ ಪ್ರಜಾಸತ್ತಾತ್ಮಕ ಕಾರ್ಯನಿರ್ವಹಣೆ ಪ್ರಕ್ರಿಯೆಯನ್ನು ಮರಳಿ ಸ್ಥಾಪಿಸಲು ಯಾವುದೇ ಗಂಭೀರ ಪ್ರಯತ್ನಗಳು ನಡೆಯಲಿಲ್ಲ.

ರಾಜೀವರ ಪ್ರಥಮ ಮುಂಗಡ ಪತ್ರವೇ ಕಣ್ಣು ತೆರೆಸುವಂತಿತ್ತು. 1985-86ರ ಬಜೆಟ್ ಜನತೆಯ ಮೇಲೆ 1900 ಕೋಟಿ ರೂಪಾಯಿ ತೆರಿಗೆ ಹೊರೆಯನ್ನು ಹೇರಿತು. ಕೊರತೆ 3985 ಕೋಟಿ ರೂ. ಆಯಿತು. ಅದು ಹಿಂದಿನ ಕೊರತೆಗಿಂತ ದುಪ್ಪಟ್ಟು ಆಗಿತ್ತು.

21ನೇ ಶತಮಾನದ ಮಂತ್ರ

21ನೇ ಶತಮಾನಕ್ಕೆ ಮುನ್ನಡೆಯುವ ಬಗ್ಗೆ ರಾಜೀವ್‌ಗಾಂಧಿ ಸಿಕ್ಕಾಪಟ್ಟೆ ಮಾತನಾಡಿದರು. ಇದರ ಜೊತೆಯಲ್ಲಿ ಉದಾರ ಆರ್ಥಿಕತೆ ಹಾಗೂ ತೀವ್ರ ಕೈಗಾರಿಕೀಕರಣದ ಬಗ್ಗೆ ಅವರು ಅತ್ಯುತ್ಸಾಹ ತೋರಿದರು. ಖಾಸಗಿ ರಂಗಕ್ಕೆ ಹೆಚ್ಚಿನ ಪ್ರಾಧಾನ್ಯ ಕೊಡಬೇಕು. ಹಾಗೂ ಬಹುರಾಷ್ಟ್ರೀಯ ಕಂಪೆನಿಗಳಿಗೆ ದೇಶದ ಮಾರುಕಟ್ಟೆಯನ್ನು ಮುಕ್ತಗೊಳಿಸಬೇಕು ಎಂದವರು ಪ್ರತಿಪಾದಿಸಿರು. ಎಂ.ಆರ್.ಟಿ.ಪಿ ಕಂಪೆನಿಗಳಿಗೆ ಆಗ ಇದ್ದ 20 ಕೋಟಿ ರೂಪಾಯಿ ಮಿತಿಯನ್ನು ತೆಗೆದುಹಾಕಿ 100 ಕೋಟಿ ರೂಪಾಯಿಗೆ ಏರಿಸಿದರು.



ಕೇಂದ್ರ ರಾಜ್ಯ ಸಂಬಂಧಗಳೂ ಹದಗೆಟ್ಟವು. ರಾಜೀವಗಾಂಧಿಯವರ ಹೇಳಿಕೆಯೊಂದು ವಿವಾದವನ್ನು ಸೃಷ್ಟಿಸಿದ್ದು ನನಗೆ ನೆನಪಿದೆ. ಕಲ್ಕತ್ತ ವಿಮಾನ ನಿಲ್ದಾಣದಿಂದ ವಿದೇಶಿ ವಿಮಾನಗಳ ಹಾರಾಟ ಸಂಖ್ಯೆ ಇಳಿಮುಖವಾದ ಬಗೆಗಿನ ಪೂರಕ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತ ರಾಜೀವ್ ರಾಜ್ಯ ಸಭೆಯಲ್ಲಿ ಹೀಗೆ ಹೇಳಿದ್ದರು. ಕಲ್ಕತ್ತವನ್ನು ಸಿಪಿಐ(ಎಂ) ಹಿಂಡಿ ಹಿಪ್ಪೆ ಮಾಡಿದೆ. ಸಾಯುತ್ತಿರುವ ನಗರವೊಂದರಿಂದ ಕಾರ್ಯನಿರ್ವಹಿಸುವಂತೆ ನಾವು ಯಾವುದೇ ವಿದೇಶಿ ಸಂಸ್ಥೆಗೆ ಹೇಳಲು ಆಗದು" ಇದು ಅವರ ಯಥಾವತ್ ಹೇಳಿಕೆ ಅಲ್ಲ, ಅವರ ಹೇಳಿಕೆಯ ಸಾರ ಇದು.

ಸದನದ ಕಲಾಪ 40 ನಿಮಿಷ ಸ್ಥಗಿತಗೊಂಡಿತ್ತು. ಪ್ರತಿಪಕ್ಷಗಳು ಸಭಾತ್ಯಾಗ ಮಾಡಿದೆವು. ಆದರೆ ಪ್ರಧಾನಿ ತನ್ನ ಹೇಳಿಕೆಯನ್ನು ವಾಪಸ್ ಪಡೆಯಲಿಲ್ಲ. ಕ್ಷಮೆಯನ್ನು ಕೋರಲಿಲ್ಲ. ಕಾರ್ಪೊರೇಶನ್ ಚುನಾವಣೆ ವೇಳೆ ಕಲ್ಕತ್ತದ ಜನರು ರಾಜೀವ್‌ಗೆ

ಬಜೆಟ್‌ನ ಮರುದಿನ ಅಂದರೆ 1985 ಮಾರ್ಚ್ 17 ರಂದು ಬ್ರಿಗೇಡ್ ಪರೇಡ್ ಮೈದಾನದಲ್ಲಿ ನಾವು ಬೃಹತ್ ರ‍್ಯಾಲಿ ನಡೆಸಿದೆವು. ಸರೋಜ್ ಮುಖರ್ಜಿ ಅಧ್ಯಕ್ಷತೆ ವಹಿಸಿದ್ದರು. ನಮ್ಮ ಕರ್ತವ್ಯವನ್ನು ಜನರಿಗೆ ವಿವರಿಸುವುದು ಅದರ ಉದ್ದೇಶವಾಗಿತ್ತು. ಕಾಂಗ್ರೆಸ್ ಪಕ್ಷವನ್ನು ಮತ್ತೆ ಚುನಾಯಿಸಿರುವುದು ತಪ್ಪು ಎಂಬುದು ಜನರಿಗೆ ಬಲು ಬೇಗನೆ ಗೊತ್ತಾಗುತ್ತದೆ ಎಂದು ನಾನು ರ‍್ಯಾಲಿಯಲ್ಲಿ ಹೇಳಿದ್ದನ್ನು ಮರೆತಿಲ್ಲ. ಕಾಂಗ್ರೆಸ್ ಸರಕಾರ ಪೂರ್ಣ ವಿಫಲಗೊಂಡಿದ್ದು ಕೇಂದ್ರ ಹಾಗೂ ರೈಲ್ವೆ ಬಜೆಟ್‌ನಲ್ಲಿ ಪ್ರತಿಫಲನಗೊಂಡಿತು. ಆದರೆ ಪತ್ರಿಕೆಗಳು ರಾಜೀವಗಾಂಧಿಯನ್ನು ಮೆರೆಸತೊಡಗಿದವು. ಅವರ 'ಪರಿಶುದ್ಧ' ವ್ಯಕ್ತಿತ್ವದ ಬಗ್ಗೆ ಪುಟಗಟ್ಟಲೆ ಬರೆದವು. ಏನಿದ್ದರೂ ಬೊಫೋರ್ಸ್ ಹಗರಣದ ಮೂಲಕ ಅದು ಠುಸ್ ಆಯಿತು.

ಪ್ರಮೋದ್ ದಾಸ್ ಗುಪ್ತ ನಿಧನ

1982ರ ನವೆಂಬರ್ 29 ರಂದು ಪಕ್ಷದ ರಾಜ್ಯ ಕಾರ್ಯದರ್ಶಿ ಹಾಗೂ ಪಾಲಿಟ್ ಬ್ಯೂರೋ ಸದಸ್ಯ ಕಾಮ್ರೇಡ್ ಪ್ರಮೋದ್ ದಾಸ್ ಗುಪ್ತರನ್ನು ನಾವು ಕಳೆದುಕೊಂಡೆವು. ಅಸ್ತಮಾ ಚಿಕಿತ್ಸೆಗಾಗಿ ಬೀಜಿಂಗ್ ತೆರಳಿದ್ದ ಕಾ। ಪ್ರಮೋದ್ ದಾಸ್‌ಗುಪ್ತ ಅಲ್ಲಿ ನಿಧನರಾದರು. ಬೀಜಿಂಗ್‌ನಲ್ಲಿ ಲಭ್ಯವಿರುದ ಆಕ್ಯುಪಾಕ್ಚರ್ ಚಿಕಿತ್ಸೆ ಪಡೆಯುವಂತೆ ಕಲ್ಕತ್ತದ ವೈದ್ಯರು ಅವರಿಗೆ ಸಲಹೆ ನೀಡಿದ್ದರು. ದಾಸ್‌ಗುಪ್ತರ ಜತೆ ಬುದ್ಧದೇವ ಭಟ್ಟಾಚಾರ್ಯ ತೆರಳಿದ್ದರು. ಆರಂಭದಲ್ಲಿ ಗುಪ್ತರ ಆರೋಗ್ಯ ಚೆನ್ನಾಗಿಯೇ ಇತ್ತು. ಆದರೆ ಹಠಾತ್ತನೆ ಅವರ ಸ್ಥಿತಿ ಬಿಗಡಾಯಿಸಿತು. ಕಾಮ್ರೇಡ್ ಬಸವಪುನ್ನಯ್ಯ ತಕ್ಷಣವೇ ಬೀಜಿಂಗ್‌ಗೆ ಧಾವಿಸಿದರು. ಚೀನಿ ವೈದ್ಯರು ಗರಿಷ್ಠ ಪ್ರಯತ್ನ ಮಾಡಿದರೂ, ಪಿಡಿಜಿಯವರನ್ನು ಉಳಿಸಿಕೊಳ್ಳಲಾಗಲಿಲ್ಲ.

ನಿಧನದ ವೇಳೆ ಕಾ. ಪಿ.ಡಿ.ಜಿ. ಎಡರಂಗದ ಅಧ್ಯಕ್ಷರಾಗಿದ್ದರು. ಅವರು ಯಾವತ್ತೂ ಮುಂಚೂಣಿಯಲ್ಲಿದ್ದು ಮುನ್ನಡೆಸುತ್ತಿದ್ದರು. ನಮ್ಮ ಹೋರಾಟದ ಆರಂಭಿಕ ದಿನಗಳಲ್ಲಿ ಅವರು ಸ್ಫೂರ್ತಿ ಹಾಗೂ ಪ್ರೇರಣೆಯ ಅಮೂಲ್ಯ ಮೂಲವಾಗಿದ್ದರು. ಅವರು 1942ರಲ್ಲಿ ಪ್ರಾಂತೀಯ ಸಮಿತಿಯ ಒಬ್ಬ ಸಂಘಟಿತರಾಗಿದ್ದರು. ನಾನು ಆಗ ರೈಲ್ವೆ ಕಾರ್ಮಿಕರ ನಡುವೆ ಕೆಲಸ ಆರಂಭಿಸಿದ್ದೆ ಅಷ್ಟೆ. ಆ ವೇಳೆಗೆ ಪಿಡಿಜಿ 'ಜ್ಞಾನಯುದ್ಧ'ದ ಮ್ಯಾನೇಜರ್ ಆಗಿದ್ದರು. ನಂತರ ಅವರು 'ಸ್ವಾಧೀನತಾ'ದ ಮುಖ್ಯಸ್ಥರಾದರು. ಎರಡೂ ಕಾರ್ಯಭಾರಗಳು ಶ್ರಮದಾಯಕವಾಗಿದ್ದವು.

1947ರಲ್ಲಿ ಪಕ್ಷದ ಪ್ರಾಂತೀಯ ಸಮ್ಮೇಳನ ನಡೆದ ನಂತರ ನಾವಿಬ್ಬರೂ ಈ ಸಮಿತಿಯ ಸದಸ್ಯರಾದೆವು. ಬಿ.ಸಿ.ರಾಯ್ ನಮ್ಮ ಪಕ್ಷವನ್ನು ಕಾನೂನು ಬಾಹಿರ ಎಂದು ಘೋಷಿಸಿದಾಗ ಪಿಡಿಜಿ ಬಂಧನದಿಂದ ತಪ್ಪಿಸಿಕೊಂಡು ಡಾಕ್ಸ್ ಲೇನಿನಲ್ಲಿರುವ ನಮ್ಮ ಪಕ್ಷದ ಕಚೇರಿಯಲ್ಲಿ ಇರುತ್ತಿದ್ದರು. ನಿಷೇಧವಿದ್ದರೂ ಪಕ್ಷದ ಪ್ರಕಟಣೆ ಕೆಲಸವನ್ನು ಅವರು ದೀರ್ಘಕಾಲ ನಿರ್ವಹಿಸಿದರು. 1952ರಲ್ಲಿ ನಾವು ತುಂಬಾ ನಿಕಟರಾದೆವು. 1961ರ ಬರ್ಧಮಾನ್ ಸಮ್ಮೇಳನದಲ್ಲಿ ಅವರು ಪಕ್ಷದ ರಾಜ್ಯ ಕಾರ್ಯದರ್ಶಿಯಾಗಿ ಆಯ್ಕೆಯಾದರು.

ಪಿಡಿಜಿ ಒಬ್ಬ ಉತ್ತಮ ಭಾಷಣಕಾರರೂ ಆಗಿದ್ದರು. ನಮ್ಮ ಸಿದ್ಧಾಂತದ ಬಗ್ಗೆ ಅವರ ವ್ಯಾಪಕ ಓದು ಎಷ್ಟಿತ್ತೆಂಬುದಕ್ಕೆ ಅದು ಸಾಕ್ಷಿಯಾಗಿತ್ತು.

ಚುನಾವಣೆ ಸಭೆಯಲ್ಲಿ ಭಾಗವಹಿಸಿದರು.

ಪಿಡಿಜಿ ಒಬ್ಬ ಮಹಾನ್ ಸಂಘಟಕರೂ ಆಗಿದ್ದರು. 1954ರಲ್ಲಿ ಪಕ್ಷದ ಒಳಗಡೆ ಎದ್ದ ಭಿನ್ನಮತದ ವೇಳೆ ಅವರು ಮಹತ್ವದ ರಚನಾತ್ಮಕ ಪಾತ್ರವನ್ನು ನಿರ್ವಹಿಸಿದರು. ನಾವು ನಕ್ಸಲೀಯರಿಂದ ಸೈದ್ಧಾಂತಿಕ ಸವಾಲನ್ನು ಎದುರಿಸಿದಾಗ ಅವರು ಮುಂಚೂಣಿಯಲ್ಲಿದ್ದರು. ಅವರ ಜನಪ್ರಿಯತೆ ಪಕ್ಷಕ್ಕೆ ಮಾತ್ರ ಸೀಮಿತವಾಗಿರಲಿಲ್ಲ. ಪಿಡಿಜಿಯವರ ಪಾರ್ಥಿವ ಶರೀರ ಬೀಜಿಂಗ್‌ನಿಂದ ಬಂದಾಗ ಕಂಬನಿ ಮಿಡಿಯಲು ಬೀದಿಗಳಲ್ಲಿ ನೆರೆದಿದ್ದ ಜನಸಾಗರವೇ ಅದಕ್ಕೆ ಸಾಕ್ಷಿಯಾಗಿತ್ತು. ಬ್ರಿಗೇಡ್ ಪರೇಡ್ ಮೈದಾನದಲ್ಲಿ ನಡೆದ ಸರ್ವಪಕ್ಷ ಸಂತಾಪಸೂಚಕ ಸಭೆಯಲ್ಲಿ ಪಕ್ಷಭೇದ ಮರೆತು ನಾಯಕರು ಶ್ರದ್ಧಾಂಜಲಿ ಅರ್ಪಿಸಿದರು. ಪಕ್ಷದ ಹೊಸ ಕಾರ್ಯದರ್ಶಿಯಾಗಿ ಕಾಮ್ರೇಡ್ ಸರೋಜ್ ಮುಖರ್ಜಿ ಆಯ್ಕೆಯಾದರು. ನಾಲ್ಕು ದಶಕಗಳ ವ್ಯಾಪಕ ಅನುಭವವುಳ್ಳ ಕಾಂ। ಮುಖರ್ಜಿಯವರ ಆಯ್ಕೆ ಸಹಜವಾಗಿಯೇ ಇತ್ತು.

ಎರಡನೇ ಪಂಚಾಯತ್ ಚುನಾವಣೆ

> **ಕಳೆದ ಸಂಚಿಕೆಯಲ್ಲಿ ಇಂದಿರಾಗಾಂಧಿ ಹತ್ಯೆ, ಸಿಖ್ಖರ ಮಾರಣಹೋಮ, ಐತಿಹಾಸಿಕ ಸೌಹಾರ್ದ ರ‍್ಯಾಲಿ, ಅನುಕಂಪದಲ್ಲಿ ಗೆದ್ದ ಕಾಂಗ್ರೆಸ್, ಎರಡನೇ ದೊಡ್ಡ ಪಕ್ಷವಾಗಿ ಸಿಪಿಐ(ಎಂ) ಆಡಳಿತ ಹಾಗೂ ಇತರ ರಂಗಗಳಲ್ಲಿ ನಮ್ಮ ವಿಫಲತೆ ಬಗ್ಗೆ ಓದಿರುವಿರಿ. ಈ ಸಂಚಿಕೆಯಲ್ಲಿ ರಾಜೀವ್ ಗಾಂಧಿಯವರಿಂದ ತುರ್ತುಪರಿಸ್ಥಿತಿ ಸಮರ್ಥನೆ, 21 ಶತಮಾನದ ಮಂತ್ರ, ಕಾಮ್ರೇಡ್ ಪ್ರಮೋದ್ ದಾಸ್ ಗುಪ್ತ ನಿಧನ, ಕಾರ್ಯದರ್ಶಿಯಾಗಿ ಕಾಂ. ಸರೋಜ್ ಮುಖರ್ಜಿ ಆಯ್ಕೆ. 2ನೇ ಪಂಚಾಯತ್ ಚುನಾವಣೆ - ಮತ್ತೆ ಎಡರಂಗದ ವಿಜಯ ದುಂಧುಬಿ**

1983 ಮೇ 31 ರಂದು ಪಂಚಾಯತ್ ಚುನಾವಣೆ ನಡೆಯಿತು. 55,495 ಸ್ಥಾನಗಳಿಗೆ ಮೂರು ಹಂತದಲ್ಲಿ ಮತದಾನ ನಡೆಯಿತು. ಇದೇ ಪ್ರಥಮ ಬಾರಿಗೆ ಮತದಾರರ ಪಟ್ಟಿಯನ್ನು ಗ್ರಾಮಗಳ ಬದಲಿಗೆ ಬೂತ್ (ಮತಗಟ್ಟೆ) ಆಧಾರದಲ್ಲಿ ಸಿದ್ಧಪಡಿಸಲಾಯಿತು.

ಪರಿಸ್ಥಿತಿ ಹಿಂದಿನ ಚುನಾವಣೆಗಳಿಗಿಂತ ಭಿನ್ನವಾಗಿತ್ತು. ಪಂಚಾಯತ್ ಪ್ರಯೋಗ ತುಂಬಾ ಯಶಸ್ವಿಯಾಗಿತ್ತು ಹಾಗೂ ಆ ಬಗ್ಗೆ ಯಾವುದೇ ಅನುಮಾನ ಉಳಿದಿರಲಿಲ್ಲ. ಉದಾಹರಣೆಗೆ, 1981-82ರಲ್ಲಿ ಎರಡು ಕೋಟಿ ಮಾನವ ದಿನಗಳನ್ನು ಸೃಷ್ಟಿಸಲಾಯಿತು. 1978ರಿಂದ ಈ ಪ್ರಮಾಣ ಅದ್ಭುತವಾಗಿತ್ತು. 'ಕೂಲಿಗಾಗಿ ಕಾಳು' ಕಾರ್ಯಕ್ರಮ ಒಂದರ ಮೂಲಕವೇ 15 ಕೋಟಿ ಮಾನವ ದಿನ ಸೃಷ್ಟಿಸಲಾಗಿತ್ತು. ಪಂಚಾಯತಿಗಳು 12 ಲಕ್ಷಕೂಡ ಹೆಚ್ಚು ಬಡಜನರ ಪಟ್ಟಿ ಮಾಡಿದವು. ವಸತಿರಹಿತರಿಗಾಗಿ ಒಟ್ಟು 83,000 ಮನೆಗಳನ್ನು ಕಟ್ಟಲಾಯಿತು. ಇದೊಂದು ಅಭೂತಪೂರ್ವ ಜನತಾ ಎಚ್ಚರವಾಗಿತ್ತು. ಗ್ರಾಮೀಣ ಜನತೆಯಲ್ಲಿ ಅದಮ್ಯ ಆತ್ಮವಿಶ್ವಾಸ ಚಿಮ್ಮಿತು. ಹಾಗಂತ ಎಲ್ಲವೂ ಹೂವಿನ ಹಾಸಿಗೆಯಾಗಿತ್ತು ಎಂದು ಅರ್ಥವಲ್ಲ. ಉದಾಹರಣೆಗೆ, ಬರಗಾಲದ ಬೇಗೆಯ ವೇಳೆ 74.18 ಕೋಟಿ ರೂಪಾಯಿ ನೆರವನ್ನು ರಾಜ್ಯ ಸರಕಾರ ಕೋರಿತು. ಆದರೆ ಕೇಂದ್ರ ಸರಕಾರ ಕೊಟ್ಟದ್ದು ಕೇವಲ 24.77 ಕೋಟಿ ರೂ. ಅನಂತರ ನಾವು 205.39 ಕೋಟಿ ರೂಪಾಯಿಗೆ ಮನವಿ ಸಲ್ಲಿಸಿದಾಗ ಕೇಂದ್ರ ಸರಕಾರದಿಂದ ಸಿಕ್ಕಿದ್ದು ಅತ್ಯಲ್ಪ ಹಣ ಕೇವಲ 52.50 ಕೋಟಿ ರೂ. ಕೊಟ್ಟಿತ್ತು. ಅದರಲ್ಲಿ ಮೂರು ಕೋಟಿ ರೂಪಾಯಿಯನ್ನು ಸಾಲವಾಗಿ ನೀಡಿತು! ಇದು ಕಟು ವಾಸ್ತವವಾಗಿತ್ತು.!!

ಪ್ರಥಮ ಪಂಚಾಯತಿ ಚುನಾವಣೆ ನಡೆದಾಗ ಕಾಂಗ್ರೆಸ್ ಪಕ್ಷ ಕೆಟ್ಟ ಸ್ಥಿತಿಯಲ್ಲಿತ್ತು. ಹೀಗಾಗಿ ಅದಕ್ಕೆ ಹೆಚ್ಚಿನ ಹೋರಾಟ ನೀಡಲು ಆಗಲಿಲ್ಲ. ಆದರೆ ಈ ಬಾರಿ ಇಂದಿರಾಗಾಂಧಿ ಸಾಧ್ಯವಾದ ಎಲ್ಲವನ್ನೂ ಮಾಡಲು ನಿಶ್ಚಯಿಸಿದ್ದರು. ಕಾಂಗ್ರೆಸ್ (ಐ)ನಲ್ಲಿ ಕಾಂಗ್ರೆಸ್ (ಎಸ್) ವಿಲೀನಗೊಂಡಿತು.

ಜನತೆಯ ಕಲ್ಯಾಣ ಯಾವುದೇ ಚುನಾವಣೆಯ ಮೂಲ ಉದ್ದೇಶವಾಗಿರಬೇಕು. ಇದು ರಾಜಕೀಯದ ಸಹಜಧರ್ಮ. ಆದರೆ ಇಂದಿರಾಗಾಂಧಿ ಮತ್ತು

ಆಕೆಯ ಪಕ್ಷಕ್ಕೆ ಈ ಬಾರಿ ಗ್ರಾಮೀಣ ಪ್ರದೇಶದಲ್ಲಿ ಏನಾದರೂ ಮಾಡಿ ಅಧಿಕಾರ ಕಸಿದುಕೊಳ್ಳಬೇಕು ಎಂಬುದೇ ಏಕೈಕ ಗುರಿಯಾಯಿತು. ಎಡರಂಗದ ಬಲವನ್ನು ಕುಂದಿಸುವುದು ಧ್ಯೇಯವಾಯಿತು. ನಮ್ಮನ್ನು ಸೋಲಿಸಿ ಅಧಿಕಾರದಿಂದ ಓಡಿಸುವ ಏಕೈಕ ಉದ್ದೇಶದಿಂದ ಎಲ್ಲ ಸ್ಥಾಪಿತ ಹಿತಾಸಕ್ತರು ಮತ್ತು ಬಂಡವಾಳಶಾಹಿಗಳು ಕಾಂಗ್ರೆಸ್ ಪಕ್ಷಕ್ಕೆ ಬೆಂಬಲ ನೀಡಿದವು.

ಗ್ರಾಮ ಪಂಚಾಯತಿಗಳ 46153 ಸ್ಥಾನಗಳು, ಪಂಚಾಯತ್ ಸಮಿತಿಗಳ 8664 ಹಾಗೂ ಜಿಲ್ಲಾಪರಿಷತ್‌ನ 678 ಸ್ಥಾನಗಳಿಗೆ ಚುನಾವಣೆ ನಡೆಯಿತು. ಒಟ್ಟು 1,61,849 ಅಭ್ಯರ್ಥಿಗಳು ಸ್ಪರ್ಧಿಸಿದರು. ವ್ಯಾಪಕ ಮಾತುಕತೆಯ ನಂತರ ನಮ್ಮ ಪಕ್ಷದ 3,200 ಅಭ್ಯರ್ಥಿಗಳು ಕಣದಿಂದ ಹಿಂದೆ ಸರಿದರು.

ರಾಜ್ಯ ನಾಯಕತ್ವದ ಮಟ್ಟದಲ್ಲಿ ನಮ್ಮಲ್ಲಿ ಒಗ್ಗಟ್ಟು ಇದ್ದರೂ ರಂಗದ ಅಂಗ ಪಕ್ಷಗಳಲ್ಲಿ ಕೆಳಹಂತದಲ್ಲಿ ಪೂರ್ಣ ಒಗ್ಗಟ್ಟು ಈ ಬಾರಿ ಕಂಡು ಬರಲಿಲ್ಲ. 1983ರ ಏಪ್ರಿಲ್ 12 ರಂದು ನಮ್ಮ ಪ್ರಣಾಳಿಕೆ ಪ್ರಕಟವಾಯಿತು. ಗಲಭೆ ಹುಟ್ಟಿಸಿ ಅಧಿಕಾರ ಕಬಳಿಸುವ ಉದ್ದೇಶ ಹೊಂದಿರುವ ಕಾಂಗ್ರೆಸ್‌ಗೆ ಬೆಂಬಲ ನೀಡಿರುವುದಕ್ಕಾಗಿ ಪ್ರಣಾಳಿಕೆ ಮೇಲ್‌ವರ್ಗಗಳನ್ನು ದೂಷಿಸಿತು.

ವಿಜಯ ದುಂಧುಬಿ

ಎಲ್ಲಾ ಮೂರು ಹಂತಗಳಲ್ಲಿ ಎಡರಂಗ ವಿಜಯ ದುಂಧುಬಿ ಮೊಳಗಿಸಿತು.

1982ರ ವಿಧಾನಸಭೆ ಚುನಾವಣೆಗಳಲ್ಲಿ 14 ಜಿಲ್ಲೆಗಳಲ್ಲಿ ಕಲ್ಕತ್ತ ಮತ್ತು ಡಾರ್ಜಿಲಿಂಗ್ ಹೊರತುಪಡಿಸಿ, ಎಡರಂಗ 52.94 ಶೇಕಡ ಮತಗಳನ್ನು ಗಳಿಸಿತ್ತು.

1983ರ ಈ ಪಂಚಾಯತ್ ಚುನಾವಣೆಗಳಲ್ಲಿ ರಂಗದ ಮತಗಳಿಕೆ ಶೇ. 53.47 ಆಯಿತು. ಕಾಂಗ್ರೆಸ್‌ನ ಮತ ಗಳಿಕೆ ಕೇವಲ ಶೇಕಡ 0.58 ರಷ್ಟು ಹೆಚ್ಚಾಯಿತು.

(ಮುಂದುವರಿಯುವುದು)

ವಿಷಾದ

ಹಣಕಾಸಿನ ತೊಂದರೆಗಳಿಂದಾಗಿ ಕಳೆದ ವಾರ ಪತ್ರಿಕೆ ಪ್ರಕಟವಾಗಲಿಲ್ಲ. ಅದಕ್ಕಾಗಿ ವಿಷಾಧಿಸುತ್ತೇವೆ. ಏಜೆನ್ಸಿದಾರರು ತಮ್ಮ ಬಾಕಿ ಹಣವನ್ನು ಕೂಡಲೇ ಸಂದಾಯಿಸಬೇಕು

- ಸಂ.

ಬೀದಿ ಪಾಲಾಗಲಿರುವ ಬೀಡಿ ಕಾರ್ಮಿಕರು: ಹೋರಾಟದ ಕಣಕ್ಕೆ

ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನವನ್ನು ನಿಷೇದಿಸಿ ಕರ್ನಾಟಕ ರಾಜ್ಯ ಸರ್ಕಾರ ಆಜ್ಞೆಯನ್ನು ಹೊರಡಿಸಿದೆ. ಇದರಿಂದ ಬೀಡಿ ಉದ್ಯಮದ ಮೇಲೆ ಪರಿಣಾಮ ಉಂಟುಮಾಡಿ, ಲಕ್ಷಾಂತರ ಕಾರ್ಮಿಕರ ಉದ್ಯೋಗಕ್ಕೆ ಜೀವನ ನಿರ್ವಹಣೆಗೆ ಹಾನಿಯಾಗಲಿದೆಯೆಂದು ಆತಂಕಗೊಂಡು ಎಲ್ಲಾ ಸಂಘಟನೆಗಳೂ ಜಂಟಿಯಾಗಿ ಪ್ರತಿಭಟನೆಗಳಿಂದ ವರದಿಗಳು ಇಲ್ಲಿವೆ.


ಬೀಡಿ ಕೈಗಾರಿಕೆಯ ತವರು ಅವಿಭಾಜಿತ ದಕ್ಷಿಣ ಕನ್ನಡ ಜಿಲ್ಲೆ ಬೀಡಿ ಕೈಗಾರಿಕೆ ಎದುರಿಸುತ್ತಿರುವ ಹತ್ತು ಹಲವು ಸಮಸ್ಯೆಗಳ ಬಗ್ಗೆ ಇಲ್ಲಿನ ಕಾರ್ಮಿಕರು ಹಲವು ಸಮರಧೀರ ಹೋರಾಟ ಗಳನ್ನು ನಡೆಸಿದ್ದಾರೆ, ಈ ಮೂಲಕ ಕಾರ್ಮಿಕ ಚಳುವಳಿಗೆ ಕ್ರಾಂತಿಕಾರಿ ಸ್ವರೂಪವನ್ನೇ ನೀಡಿದ್ದಾರೆ. ಆದರೂ ಬೀಡಿ ಕೈಗಾರಿಕೆ ಸಮಸ್ಯೆ ಯಿಂದೇನೂ ಮುಕ್ತವಾಗಿಲ್ಲ. ಬೀಡಿ ಕಾರ್ಮಿಕರು ತಮ್ಮ ದೈನಂದಿನ ಬದುಕಿಗೆ ಇದನ್ನೇ ತಮ್ಮ ಆದಾಯ ಮೂಲವನ್ನಾಗಿ ಅವಲಂಬಿಸಿದ್ದಾರೆ.

ಆದರೆ WTO ಒತ್ತಡಕ್ಕೆ ಮಣಿಯುತ್ತಿರುವ ಕೇಂದ್ರ ಮತ್ತು ರಾಜ್ಯ ಸರಕಾರಗಳು ಜಾರಿಗೆ ತರುತ್ತಿರುವ ಒಂದೊಂದು ಕಾರ್ಮಿಕ ವಿರೋಧಿ ಮಸೂದೆಗಳೂ ಬೀಡಿ ಕಾರ್ಮಿಕರ ಪಾಲಿಗೆ ಕರಿ ಮೋಡಗಳಾಗಿ ಪರಿಣಮಿಸುತ್ತಿವೆ. ಸಾರ್ವಜನಿಕ ಸ್ಥಳದಲ್ಲಿ ಧೂಮಪಾನ ನಿಷೇದಿಸಲು ಸರಕಾರ ನಿರ್ಧರಿಸಿರುವುದರಿಂದ ಬೀಡಿ ಕಾರ್ಮಿಕರ ಬಾಳಿಗೆ ಅಂತಿಮ ಪ್ರಹಾರವಾಗಿ ಪರಿಣಮಿಸಿದೆ. ಇದನ್ನು ಜಿಲ್ಲೆಯ ಕಾರ್ಮಿಕರು ಒಂದಾಗಿ ಪ್ರತಿಭಟಿಸಲು ನಿರ್ಧರಿಸಿರುವುದು ಐತಿಹಾಸಿಕ ಚಳುವಳಿಯೊಂದು ರೂಪುಗೊಳ್ಳಲು ಕಾರಣವಾಯಿತು.

ಆಗಸ್ಟ್ 9 ರಂದು ಬೆಳಿಗ್ಗೆ ಸಾವಿರಾರು ಸಂಖ್ಯೆಯಲ್ಲಿ ಎಲ್ಲಾ ಕಾರ್ಮಿಕ ಸಂಘಟನೆಗಳ ಕಾರ್ಮಿಕರು ಮಂಗಳೂರಿನ ಬೀದಿಗಳಲ್ಲಿ ನೆರೆದು ಪ್ರತಿಭಟನೆ ನಡೆಸಿದರು.

ಸಿಐಟಿಯು, ಹೆಚ್‌ಎಂಎಸ್, ಎಐಟಿಯುಸಿ, ಬಿಎಂಎಸ್ ಹಾಗೂ ಬೀಡಿ ಕಾಂಟ್ರಾಕ್ಟ್‌ದಾರರು ಕೈಜೋಡಿಸಿ ಬಾವುಟ ಗುಡ್ಡದಿಂದ ಜಿಲ್ಲಾಧಿಕಾರಿ ಕಛೇರಿಯವರೆಗೆ ಬೃಹತ್ ರ್‍ಯಾಲಿಯನ್ನು ನಡೆಸಿದರು.

ಬೃಹತ್ ಪ್ರದರ್ಶನವನ್ನು ಉದ್ದೇಶಿಸಿ ಬೀಡಿ ಕೈಗಾರಿಕೆ ಸಂರಕ್ಷಣಾ ಸಮಿತಿ ಸಂಚಾಲಕ ಕೆ. ಆರ್.ಶ್ರೀಯಾನ್ ಮಾತನಾಡುತ್ತಾ ಸುಮಾರು 4ಲಕ್ಷ ಹಾಗೂ ದೇಶದಾದ್ಯಂತ ಸುಮಾರು 3 ಕೋಟಿ ಬಿಡಿ ಕಾರ್ಮಿಕರ ಪಾಲಿನ ಅನ್ನವನ್ನು ಕಸಿಯಲು ಈ ಸರಕಾರಗಳು ಮುಂದಾಗಿರುವುದನ್ನು ಖಂಡಿಸಿದರು.



ಮಂಗಳೂರು: 30 ಸಾವಿರಕ್ಕೂ ಹೆಚ್ಚು ಸೇರಿದ ಕಾರ್ಮಿಕರು

ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದೆ ಎಂಬ ಕಾರಣ ನೀಡಿ ನಿಷೇಧ ಕಾಯ್ದೆ ಜಾರಿಗೆ ತರಲಾಗುತ್ತಿವೆ. ಆರೋಗ್ಯದ ಬಗ್ಗೆ ಕಾಳಜಿ ಇರುವ ಸರಕಾರ ಈ ದೇಶದಲ್ಲಿ ಜನರ ಆರೋಗ್ಯದ ಮೇಲೆ ದಾಳಿ ಮಾಡುವ ಹಲವು ಕ್ರಮಗಳನ್ನು ಜಾರಿಗೆ ತರುತ್ತಿದೆ ಎಂದು ಟೀಕಿಸಿದರು.

ಆರೋಗ್ಯದ ಬಗ್ಗೆ ಮೊಸಳೆ ಕಣ್ಣೀರು ಸುರುಸುತ್ತಿರುವ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಸಾಮಾಜಿಕ ಸ್ವಾಸ್ಥ್ಯ ಕೆಡಿಸುವ ಮದ್ಯ ಸರಾಯಿ ಅಂಗಡಿಗಳಿಗೆ ಬೇಕಾಬಿಟ್ಟಿ ಪರವಾನಿಗೆ ನೀಡುವುದನ್ನು ಟೀಕಿಸಿದ ಶ್ರೀಯಾನ್, ನಿಷೇದ ಕಾಯ್ದೆ ಹಿಂತೆಗೆದುಕೊಳ್ಳದಿದ್ದಲ್ಲಿ ಉಗ್ರ ಹೋರಾಟ ರೂಪಿಸುವುದಾಗಿ ಎಚ್ಚರಿಕೆ ನೀಡಿದರು. ಪ್ರತಿಭಟನಾಕಾರರನ್ನು ಉದ್ದೇಶಿಸಿ ಅಖಿಲ ಭಾರತ ಬೀಡಿ ಕಾರ್ಮಿಕರ ಒಕ್ಕೂಟದ ಕಾರ್ಯದರ್ಶಿ ಚಂದಪ್ಪ ಅಂಚನ್, ಬಿ.ಎಂ.ಎಸ್. ನಾಯಕ ವಿಶ್ವನಾಥ್ ಶೆಟ್ಟಿ, ಹೆಚ್.ಎಂ.ಎಸ್. ನಾಯಕ ಎಮ್. ಸುರೇಶ್ಚಂದ್ರ ಶೆಟ್ಟಿ, ದಕ್ಷಿಣ ಕನ್ನಡ ಜಿಲ್ಲಾ ಬೀಡಿ ಗುತ್ತಿಗೆದಾರರ ಸಂಘದ ಅಧ್ಯಕ್ಷ ಶಂಭು ನಾಯಕ್, ಸಜೀರ್ ಉಳ್ಳಾಲ್ ಮೊದಲಾದವರು ಮಾತನಾಡಿದರು.

ವೇದಿಕೆಯಲ್ಲಿ ಸಿಐಟಿಯು, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ. ಮಾಧವ, ಎಸ್.ಕೆ. ಬೀಡಿ ವರ್ಕರ್ಸ್ ಫೆಡರೇಶನ್ ಕಾರ್ಯದರ್ಶಿ ಜೆ. ಬಾಲಕೃಷ್ಣ ಶೆಟ್ಟಿ ಎಐಟಿಯುಸಿ ನಾಯಕ ಬಿ. ವಿಶ್ವನಾಥ್‌ನಾಯಕ್ ಬೀಡಿ ಗುತ್ತಿಗೆದಾರರ ಸಂಘದ ಅಧ್ಯಕ್ಷ ಜೆ. ಇಬ್ರಾಹಿಂ, ಬಿ.ಎಂ.ಎಸ್. ನಾಯಕ ರಾಚಯ್ಯ ಹಾಗೂ ಯಾದವಶೆಟ್ಟಿ ಮೊದಲಾದವರು ಉಪಸ್ಥಿತರಿದ್ದರು. ಕೆ. ಬಾಲಕೃಷ್ಣ ಶೆಟ್ಟಿ ಪ್ರಸ್ತಾವನೆ ಗೈದು ವಿಶ್ವನಾಥನಾಯಕ ಧನ್ಯವಾದ ವಿತ್ತರು.

ಉಡುಪಿಯಲ್ಲಿಯೂ ಭಾರಿ ಪ್ರತಿಭಟನೆ

ಉಡುಪಿಯಲ್ಲಿಯೂ ಭಾರೀ ಪ್ರತಿಭಟನೆ ನಡೆದಿರುವುದು ವರದಿಯಾಗಿದೆ. ಈ ಪ್ರದರ್ಶನದಲ್ಲಿ ಸುಮಾರು 15 ಸಾವಿರಕ್ಕೂ ಅಧಿಕ ಸಂಖ್ಯೆಯಲ್ಲಿ ನೆರೆದ ಬೀಡಿ ಕಾರ್ಮಿಕರು, ಸಣ್ಣ ಉದ್ಯಮ ಗಳು, ವಿವಿಧ ಸಂಘಟನೆಗಳ ನೇತೃತ್ವದಲ್ಲಿ ಮೆರವಣಿಗೆ ನಡೆಸಿದರು. ಬಹಿರಂಗ ಸಭೆ ನಡೆದಿದೆ. ಸಿಐಟಿಯುವಿನ ರಾಜ್ಯ ಮುಂದಾಳು, ಬೀಡಿ ಕೆಲಸಗಾರರ ಸಂಘದ ಕಾರ್ಯದರ್ಶಿ ಕೆ. ಶಂಕರ್, ಮುಂತಾದವರು ಬಹಿರಂಗ ಸಭೆಯನ್ನುದ್ದೇಶಿಸಿ ಮಾತನಾಡಿದ್ದಾರೆ.

- ಯಾದವಶೆಟ್ಟಿ ಕೆ.

ಇನ್ನು ಶಿಕ್ಷಕರಿಗೂ ಪರೀಕ್ಷೆ ಜ್ವರ

ಶಿಕ್ಷಣ ರಂಗದಲ್ಲಿ ಅಡಿಮೇಲಾಗಿಸುವ ಸುಧಾರಣೆಗಳನ್ನು ತರುವುದಾಗಿ ಶಿಕ್ಷಣ ಸಚಿವ ವಿಶ್ವನಾಥ್ ದಿನ ಬೆಳಗಾದರೆ ಹೇಳುತ್ತಿದ್ದಾರೆ. ಈಗ ಶಿಕ್ಷಕರಿಗೂ ಪರೀಕ್ಷೆ ನಡೆಸುವುದು ಅವರ ಹೊಸ ಸ್ಕೀಮು. ಅದನ್ನು ಮೊದಲು ಮೈಸೂರು ಜಿಲ್ಲೆಯಿಂದಲೇ ಆರಂಭಿಸುವರಂತೆ. ಶಿಕ್ಷಕರಿಗೆ ಶಿಕ್ಷಣ ಅಗತ್ಯವಿದೆಯಾದರೂ ಈ ಪಾಸು-ಫೇಲಿನ ವರಸೆ ಎಷ್ಟು ಸಾರ್ಥಕ ತಂದೀತು? ಬಳಸಿ ಬಿಸಾಡುವ ಉದಾರೀಕರಣದ ಈ ದಿನಗಳಲ್ಲಿ ಶಿಕ್ಷಕರನ್ನು ಕಿತ್ತೆಸೆಯುವುದಿಲ್ಲ ಎಂಬ ಗ್ಯಾರಂಟಿ ಏನು? ಈ ಪರೀಕ್ಷೆ ಪರಿಪಾಟ ಏನನ್ನು ತಂದೀತು ಎಂಬ ಬಗ್ಗೆ ಒಂದು ಒಳನೋಟವನ್ನು ಲೇಖಕರು ನೀಡಿದ್ದಾರೆ.

ಪರೀಕ್ಷೆ ಎಂದ ಕೂಡಲೇ ವಿದ್ಯಾರ್ಥಿಗಳಿಗೆ ಜ್ವರ ಬರುವುದುಂಟು. ಇದು ಭಾಗಶಃ ಬಹುತೇಕ ಪೋಷಕರಿಗೂ ವ್ಯಾಪಿಸುವುದನ್ನು ಕಾಣುತ್ತೇವೆ. ಪರೀಕ್ಷೆಯ ನಡೆಸುವ, ಮೌಲ್ಯಮಾಪನ ಮಾಡುವ ಸ್ಥಾನದಲ್ಲಿ ಶಿಕ್ಷಕರಿರುತ್ತಾರೆ. ಆದರೆ ಶಿಕ್ಷಣ ಇಲಾಖೆಯ ಹೇಳಿಕೆ ಪ್ರಕಾರ ಪ್ರಸ್ತುತ ಶಿಕ್ಷಕರೂ ಪರೀಕ್ಷೆಗೆ ಹಾಜರಾಗಬೇಕಾಗುತ್ತದೆ. ಪರೀಕ್ಷೆ ಎಂದ ಕೂಡಲೇ ಮುಂದಿನದನ್ನು ಯೋಚಿಸಬಹುದು.

ಪರಿಹಾರ ಹುಡುಕುವ ಪ್ರಯತ್ನಗಳು

ಸ್ವಾತಂತ್ರ್ಯಾನಂತರ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ವಿವಿಧ ಯೋಜನೆಗಳ ಮೂಲಕ ಪ್ರಾಥಮಿಕ ಶಿಕ್ಷಣ ಎಲ್ಲ ಮಕ್ಕಳಿಗೂ ದೊರೆಯಬೇಕೆಂಬ ಪ್ರಯತ್ನ ನಡೆಸುತ್ತಾ ಬಂದಿವೆ. ಇದರ ಪರಿಣಾಮವಾಗಿ ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ ಹಂತ ಹಂತವಾಗಿ ಸುಧಾರಣೆಯಾಗುತ್ತಿರುವುದನ್ನು ನಾವು ಕಾಣುತ್ತೇವೆ. ಇಷ್ಟೆಲ್ಲ ಪ್ರಯತ್ನಗಳ ನಡುವೆಯೂ ಶಾಲೆಗೆ ದಾಖಲಾಗದ, ಅರ್ಧದಲ್ಲಿ ಶಾಲೆ ಬಿಡುವ, ಗೈರು ಹಾಜರಾಗುವ ಮಕ್ಕಳನ್ನು ನಾವು ಕಾಣುತ್ತೇವೆ. ಇದಕ್ಕೆ ಕಾರಣಗಳು ಹಲವಿದ್ದರೂ ಆಕರ್ಷಕ ಬೋಧನೆ, ಶಿಕ್ಷಕರ ಪಾತ್ರ ಮುಖ್ಯವೆಂದು ಅಧ್ಯಯನಗಳು ಹೇಳುತ್ತವೆ. ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನೆಯ ನಂತರ ಈ ಪ್ರಶ್ನೆಗಳಿಗೂ ಪರಿಹಾರ ಹುಡುಕುವ ಪ್ರಯತ್ನ ಸಾಗಿದೆ.

ಪರೀಕ್ಷೆ: ಎಷ್ಟು ಪ್ರಾಯೋಗಿಕ

ಸಚಿವ ಎಚ್. ವಿಶ್ವನಾಥ್‌ರವರು ರಾಜ್ಯದ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಾದ ನಂತರ ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಿಸಿ ಸಾಕಷ್ಟು ಹೇಳಿಕೆ ನೀಡಿರುವುದನ್ನು ಕಾಣುತ್ತೇವೆ. ಈ ಹೇಳಿಕೆಗಳು ಹಾಗೂ ತೀರ್ಮಾನಗಳಲ್ಲಿ ಕೆಲವು ಶಿಕ್ಷಣದ ಸಾರ್ವತ್ರೀಕರಣಕ್ಕೆ ಪರವಾಗಿಯೂ ಕೆಲವು ವಿರೋಧಾಭಾಸಗಳಿಂದ ಕೂಡಿರುವುದನ್ನೂ ನಾವು ಕಾಣುತ್ತೇವೆ.

ಶಿಕ್ಷಕರ ಸಾಮರ್ಥ್ಯವನ್ನು ಅಳೆದು, ಅದರಲ್ಲಿ ಕೊರತೆಯಿದ್ದರೆ ಸರಿಪಡಿಸುವ ಉದ್ದೇಶ ಇಟ್ಟುಕೊಂಡು ಶಿಕ್ಷಕರುಗಳಿಗೆ ಪರೀಕ್ಷೆ ನಡೆಸುವುದಾಗಿ ಸಚಿವರು ಹೇಳುತ್ತಿದ್ದಾರೆ. ಇದು ಎಷ್ಟರಮಟ್ಟಿಗೆ ಪ್ರಾಯೋಗಿಕ ಎಂಬುದನ್ನು ನಾವು ಆಲೋಚಿಸಬೇಕಾಗಿದೆ. ಮಕ್ಕಳನ್ನು ಪರೀಕ್ಷೆಗೆ ತಯಾರು ಮಾಡುವ ಬದಲು ತಾವೇ ಪರೀಕ್ಷೆಗೆ ತಯಾರಾಗಬೇಕಾದ ಸಂದರ್ಭ ಶಿಕ್ಷಕರಿಗಂತೂ ಬರಬಾರದಾಗಿತ್ತು, ಬಂದಿದೆ.

ಪರೀಕ್ಷೆಯ ಫಲಿತಾಂಶ :

ಪರೀಕ್ಷೆಯ ಫಲಿತಾಂಶ ಹೊರಬಂದು ನಪಾಸಾದವರಿಗಂತೂ ಯಾವುದಾದರೂ ಕ್ರಮ ಇದ್ದೇ ಇರಬಹುದು. ಇಲ್ಲದಿದ್ದಲ್ಲಿ ಪರೀಕ್ಷೆ ನಡೆಸುವುದಕ್ಕೆ ಅರ್ಥವೇ ಇರುವುದಿಲ್ಲ, ನಪಾಸಾದ ಶಿಕ್ಷಕರು ಪಾಠ ಬೋಧನೆಯಲ್ಲಿ ಹಿಂದುಳಿದಿರುತ್ತಾರೆ ಎಂಬುದನ್ನು ಹೇಗೆ ಹೇಳುವುದು? ಒಂದು ವೇಳೆ ಪರೀಕ್ಷೆಯಲ್ಲಿ ಉತ್ತಮ ಅಂಕಗಳಿಸಿದ ಶಿಕ್ಷಕ ಶಾಲೆಗೇ ಗೈರುಹಾಜರಾಗುತ್ತಿದ್ದರೆ ಏನು ಮಾಡುವುದು? ಪಾಸಾದ ಶಿಕ್ಷಕರೆಲ್ಲ ಉತ್ತಮ ಶಿಕ್ಷಕರೋ? ಈ ರೀತಿಯ ಅನೇಕ ಪ್ರಶ್ನೆಗಳು ನಮಗೆ ಎದುರಾಗುತ್ತವೆ.

ಮಕ್ಕಳಿಗೆ ಮುಂದಿನ ಜೀವನ ಎದುರಿಸುವ ಕೌಶಲ್ಯ ಬೆಳೆಸಬೇಕಾದದ್ದು ಶಿಕ್ಷಕನ ಹಾಗೂ ಶಿಕ್ಷಣದ ಕೆಲಸ.

ಪುಟ 9 ಕ್ಕೆ

ಎಲ್ಲರೂ 'ತಲೆದೂಗಿ'ದ ವಿವಿ ಮಸೂದ !

ತೀವ್ರ ವಿವಾದಗ್ರಸ್ತವಾದ ಕರ್ನಾಟಕ ವಿಶ್ವವಿದ್ಯಾಲಯಗಳ ಮಸೂದೆ-2000 ಕೊನೆಗೂ ವಿಧಾನಸಭೆಯಲ್ಲಿ ಅಂಗೀಕಾರವಾಗಿದೆ. (ಈ ಮಸೂದೆಯ ಜನವಿರೋಧಿ ಅಂಶಗಳೇನೆಂದು ಹಿಂದಿನ ಐಕ್ಯರಂಗ ಸಂಚಿಕೆಯಲ್ಲಿ ಓದಿರುವಿರಿ) ಈ ಮಸೂದೆಯನ್ನು ವಿರೋಧಿಸಿದ್ದ ವಿರೋಧ ಪಕ್ಷಗಳೆಲ್ಲವೂ ವಿಧಾನಸಭೆಯಲ್ಲಿ ಉನ್ನತ ಶಿಕ್ಷಣ ಸಚಿವರ ಉತ್ತರ ಕೇಳಿ ತಲೆದೂಗಿ ಬಿಟ್ಟರಂತೆ. ವಿಧಾನ ಸಭಾಧ್ಯಕ್ಷರು ಶಿಕ್ಷಣ ಸಚಿವರಿಗೆ ನೂರಕ್ಕೆ ನೂರು ಅಂಕ ಕೊಟ್ಟುಬಿಟ್ಟರಂತೆ. ವಿರೋಧ ಪಕ್ಷಗಳ ಸಲಹೆ ಸೂಚನೆ-ಟೀಕೆಗಳನ್ನು ಮುಕ್ತವಾಗಿ ಸ್ವೀಕರಿಸಿದರಂತೆ ಶಿಕ್ಷಣ ಸಚಿವರು.

ಎಲ್ಲರನ್ನು ಮೂಕ ವಿಸ್ಮಿತಗೊಳಿಸಿದ ಈ ಮಸೂದೆಯಲ್ಲಿ ಕೊನೆಗೂ ಸೆನೆಟ್‌ಗೆ ಅವಕಾಶವಿಲ್ಲ. ಸೆನೆಟನ್ನು ರದ್ದುಪಡಿಸಲಾಗಿದೆ. ವಿಶ್ವ ವಿದ್ಯಾಲಯಗಳ ಉಪಕುಲಪತಿ ಸ್ಥಾನಕ್ಕೆ ಶಿಕ್ಷಣದ ಕುರಿತು ಕನಸುಳ್ಳವರು, ಪ್ರಗತಿಯ ಕಣ್ಣೋಟದವರು, ಸ್ವಚ್ಛ ಚಾರಿತ್ರ್ಯ ಹೊಂದಿರುವವರು ಬರುವಂತೆ ಮಾಡಲು ಬೇಕಾದ ಅಗತ್ಯಗಳೆಂದೂ ಯಾರೂ ಚರ್ಚಿಸಲಿಲ್ಲ. ಉಪ ಕುಲಪತಿಯನ್ನು ಸರ್ಕಾರ ನೇಮಿಸಬೇಕೋ, ರಾಜ್ಯಪಾಲರೋ ಎಂಬ ವಿಚಾರಗಳೇ ಮಸೂದೆಯ ಮೂಲಭೂತ ವಿವಾದ ಎಂಬಂತೆ ಚರ್ಚಿಸಿ ಈಗ ಅಡ್ಡಗೋಡೆಯ ಮೇಲೆ ದೀಪವಿಟ್ಟಂತೆ ಶೋಧನಾ ಸಮಿತಿ ಸೂಚಿಸಿದ ಹೆಸರಿನಲ್ಲಿ ಒಂದು ಹೆಸರನ್ನು ಆರಿಸಿ ಸರ್ಕಾರದ ಒಪ್ಪಿಗೆ ಪಡೆದು ರಾಜ್ಯಪಾಲರು ನೇಮಿಸುವುದಂತೆ. ಇದೇ ಆಗಿರುವ ಮಹಾ ಬದಲಾವಣೆ.

ಮಸೂದೆಯಲ್ಲಿರುವ ರಾಜ್ಯದ ಕಾಲೇಜುಗಳ ಯಾವುದೇ ವಿದೇಶಿ ವಿಶ್ವವಿದ್ಯಾಲಯಕ್ಕೆ ಸೇರ್ಪಡೆ ಹೊಂದಲು ಅವಕಾಶ ನೀಡುವ ವಿಚಾರ, ವಿಶ್ವ ವಿದ್ಯಾಲಯದ ನೀತಿ ನಿರೂಪಿಸುವ ಪ್ರಕ್ರಿಯೆಯನ್ನು ಅರ್ಥಪೂರ್ಣ ಪ್ರಜಾಪ್ರಭುತ್ವೀಕರಣಕ್ಕೆ ಒಳಪಡಿಸುವುದು ಹೇಗೆ ಎಂಬ ಪ್ರಶ್ನೆ, ಶಿಕ್ಷಕ-ವಿದ್ಯಾರ್ಥಿಗಳ ಮೇಲಿನ ಶಿಸ್ತು ಕ್ರಮ ಪ್ರಸ್ತಾವ, ಕಾಲೇಜುಗಳಿಗೆ ಸ್ವಯಂ ಮುಚ್ಚುವಿಕೆಗೆ ಮುಕ್ತ ಅವಕಾಶ ಇಂತಹ ಗಂಭೀರ ವಿಚಾರಗಳಾದವು, ಚರ್ಚೆಯಲ್ಲಿ ಮಹತ್ವ ಪಡೆದಂತೆ ತೋರುವುದಿಲ್ಲ.

ಇದೊಂದು ಪ್ರಗತಿಪರ ಮಸೂದೆ ಎಂದು ಬೇರೆ ಕರೆಯಲಾಗುತ್ತಿದೆ. 'ಪ್ರಗತಿ-ಪರತೆ' ಎನಿದೆಯೋ ಇದರಲ್ಲಿ! ಶಿಕ್ಷಕರು-ವಿದ್ಯಾರ್ಥಿಗಳು-ಶಿಕ್ಷಣ ಪ್ರೇಮಿಗಳು-ಪ್ರಜ್ಞಾವಂತರು ಇಂತಹ ಮಸೂದೆಯನ್ನು ಖಂಡಿತ ಒಪ್ಪಲು ಸಾಧ್ಯವಿಲ್ಲ.

ಜುಲೈ 27 ರಂದು ರಾಜ್ಯಾದ್ಯಂತ ಸಹಸ್ರಾರು ವಿದ್ಯಾರ್ಥಿಗಳು ಈ ಮಸೂದೆಯ ವಿರುದ್ಧ ಪ್ರತಿಭಟನೆ ನಡೆಸಿದ್ದಾರೆ. ಆಗಸ್ಟ್ 9 ರಂದು ರಾಜ್ಯಾದ್ಯಂತ ಕಾಲೇಜು ಶಿಕ್ಷಕರು ಪ್ರತಿಭಟನೆ ವ್ಯಕ್ತಪಡಿಸಿದ್ದಾರೆ. ವಿಧಾನ ಪರಿಷತ್ತಿನಲ್ಲಿ ಮಸೂದೆಯ ಕುರಿತು ಚರ್ಚೆ ನಡೆದಿದೆ. ರಾಜ್ಯಪಾಲರ ಅಂಗೀಕಾರ ಮಸೂದೆಗೆ ಬೇಕಾಗಿದೆ.

ನಮ್ಮ ಶಿಕ್ಷಣ ಮಂತ್ರಿಗಳು ವಿರೋಧ



ಪಕ್ಷದವರೆಲ್ಲಾ ಬೆಕ್ಕಸಬೆರಗಾಗಿ ತಲೆದೂಗುವಂತಹ ಉತ್ತರಗಳನ್ನು ಕೊಡಬಲ್ಲರಾದರೆ, ಇಂತಹ ಗಂಭೀರ ಮಸೂದೆಯನ್ನು ಗುಟ್ಟು ಗುಟ್ಟಾಗಿ ಏಕೆ ತರಲು ಯತ್ನಿಸಲಾಯಿತು. ಯಾಕೆ ಶಿಕ್ಷಕರು-ವಿದ್ಯಾರ್ಥಿಗಳು, ಶಿಕ್ಷಣ ತಜ್ಞರೊಂದಿಗೆ ಚರ್ಚೆ ನಡೆಸುವ ಅವಕಾಶವನ್ನೇ ಕೊಡಲಿಲ್ಲ. ಈ ಪ್ರಶ್ನೆಗೂ ಸರ್ಕಾರ- ಮಂತ್ರಿಗಳಿಂದ ಎಲ್ಲರೂ ತಲೆದೂಗುವಂತಹ ಉತ್ತರ ಸಿಗುವುದೇ?

ಬರ ಅಧ್ಯಯನ ಎಂಬ ಈ ಕಪಟ ನಾಟಕ ಸಾಕು ಮಾಡಿ

ಅಲ್ಲಲ್ಲಿ ತುಂತುರು ಮಳೆಹನಿ ಉದುರಿದರೂ ಬರದ ಬೇಗೆ ತಣಿದಿಲ್ಲ. ಬವಣೆಯಲ್ಲಿ ಬೆಂಡಾದ ಜನ-ದನಗಳಿಗೆ ಪರಿಹಾರ ಕಾರ್ಯ ತಲುಪಲಿಲ್ಲ. ಆದರೆ ಬರದ ಅಧ್ಯಯನದ ಭರಾಟೆ ಇಳಿದಿಲ್ಲ. ರಾಜ್ಯ ಸರ್ಕಾರ 904 ಕೋಟಿ ನೆರವು ಕೋರಿದರೆ, ವಾಜಪೇಯಿ 29 ಕೋಟಿ ಮಾತ್ರ ನೀಡಿ ಕೈ ತೊಳೆದುಕೊಂಡಿದ್ದಾರೆ. ಈ ಕಪಟ ನಾಟಕವನ್ನು ಬಯಲಿಗೆಳೆದ ಹಾಗೂ ಬರದ ಧಾರುಣ ಸ್ಥಿತಿ ಚಿತ್ರಣದ ಲೇಖನಗಳು ಇಲ್ಲಿವೆ

ಜಿ.ಎನ್.ನಾಗರಾಜ್

ಈಗ ಆಗಸ್ಟ್ ತಿಂಗಳಲ್ಲಿ ಕಾಲಿರಿಸಿದ್ದೇವೆ. ಮೇ ಮೊದಲ ದಿನಗಳಲ್ಲೇ ಬರಬೇಕಾಗಿದ್ದ ಮಳೆ ಮತ್ತು ಆರಂಭವಾಗಬೇಕಾಗಿದ್ದ ಉಳುಮೆ ರಾಜ್ಯದ ಹಲವು ಭಾಗಗಳಲ್ಲಿ ಇನ್ನೂ ನಡೆದಿಲ್ಲ. ರಾಜ್ಯದ ಹತ್ತು ಕೃಷಿ ವಲಯಗಳಲ್ಲಿ ಮೂರು ವಲಯಗಳ ಹೊರತಾಗಿ ಉಳಿದ ವಲಯಗಳಲ್ಲಿ ಭೀಕರ ಬರಗಾಲ, ಈ ಬಗ್ಗೆ ರಾಜ್ಯದ ಹಲವು ಪತ್ರಿಕೆಗಳು, ಮಾಧ್ಯಮಗಳು ವಿವರವಾದ ಚಿತ್ರಗಳನ್ನು ಜನರ ಮುಂದಿಟ್ಟಿವೆ. ಹೀಗೆ ಮಳೆಯ ಆರಂಭ ಮೂರು ತಿಂಗಳು ತಡವಾಗಿ ಹೋಗಿದೆ. ರಾಜ್ಯದ ವಿಸ್ತಾರ ಪ್ರದೇಶಗಳಲ್ಲಿ ಮುಂಬಾರ ಬೆಳೆ ಬೆಳೆಯುವ ಎಳ್ಳು, ಹೆಸರು, ಶೇಂಗಾ ಮುಂತಾದವುಗಳನ್ನು ಬಿತ್ತುವ ಪರಿಸ್ಥಿತಿಯೇ ಉದ್ಭವಿಸಿಲ್ಲ. ಉತ್ತರ ಕರ್ನಾಟಕದ ಕೆಂಪು ಮಣ್ಣು (ಮಸಾರಿ) ಪ್ರದೇಶದಲ್ಲಿ ಇನ್ನೂ ಯಾವ ಬೆಳೆಯನ್ನು ಬಿತ್ತುವ ಅವಕಾಶವಿಲ್ಲ. ಕೋಟ್ಯಾಂತರ ರೈತರು ಮುಗಿಲ ಕಡೆಗೆ ಕಣ್ಣು ನೆಟ್ಟು ಕುಳಿತು ಮೂರು ತಿಂಗಳಾಯಿತು.. ಈಗ ಜುಲೈ ಕೊನೆಯ ವಾರದಲ್ಲಿ ಕೇಂದ್ರದ ಬರ ಅಧ್ಯಯನ ತಂಡವೆಂಬುದು ಕರ್ನಾಟಕದಲ್ಲಿ ಧೂಳೆಬ್ಬಿಸುತ್ತಾ, ಹಲವು ಜಿಲ್ಲೆಗಳಲ್ಲಿ ಓಡಾಡಿದೆ. ಬರಗಾಲಕ್ಕೆ ತುತ್ತಾಗುವ ಜೀವಗಳು ಮುಂದೆ ಎಷ್ಟೋ? ಆದರೆ ಬರ ಅಧ್ಯಯನ ತಂಡದ ರಭಸಕ್ಕೆ ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲೂಕಿನ ಬಾಲಕಿಯೋರ್ವಳು ತುತ್ತಾಗಿ ಆಸ್ಪತ್ರೆಯಲ್ಲಿದ್ದಾಳೆ.

ಕೇಂದ್ರ ಸರ್ಕಾರ ಕಳುಹಿಸಿದ ಈ ಬರ ಅಧ್ಯಯನ ತಂಡ ಕೇಂದ್ರ ಸರ್ಕಾರಕ್ಕೆ ಇನ್ನೆರಡು ವಾರಗಳಲ್ಲಿ ತಮ್ಮ ವರದಿಯನ್ನು ಸಲ್ಲಿಸಲಿದೆಯಂತೆ. ನಂತರ ಕೇಂದ್ರ ಸರ್ಕಾರ ಕರ್ನಾಟಕ ರಾಜ್ಯಕ್ಕೆ 894 ಕೋಟಿ ರೂ.ಬೇಡಿಕೆ ಬಗ್ಗೆ ತನ್ನ ತೀರ್ಮಾನ ತೆಗೆದುಕೊಳ್ಳಲಿದೆ. ಇದಾಗುವ ವೇಳೆಗೆ ಸೆಪ್ಟೆಂಬರ್ ತಿಂಗಳು ಹೆಜ್ಜೆ ಇಟ್ಟಿರುತ್ತದೆ. ನಂತರ ಬಲಗಾಲ ಪರಿಹಾರ ಕ್ರಮಗಳು ಆರಂಭವಾಗುತ್ತವೆ. ಆ ವೇಳೆಗೆ ಸಾಮಾನ್ಯವಾಗಿ ಸೆಪ್ಟೆಂಬರ್‌ನಲ್ಲಿ ಧಾರಾಕಾರ ಸುರಿಯಬೇಕಾದ ಮಳೆ ಒಂದೆರಡು ತುಂತುರು ಹನಿಗಳನ್ನು ಉದುರಿಸಿದರೆ ಸಾಕು ಈ ಬರ ಪರಿಹಾರ ಕ್ರಮಗಳು ಅಲ್ಲಲ್ಲೇ ಸ್ಥಗಿತಗೊಳ್ಳುತ್ತವೆ.

ಕೇಂದ್ರ ಸರ್ಕಾರದ ಬರ ಪರಿಹಾರ ಅಧ್ಯಯನ ತಂಡಕ್ಕೆ ಮೊದಲೇ ರಾಜ್ಯ ಸರ್ಕಾರ ಐಎಎಸ್ ಅಧಿಕಾರಿಗಳ ದೊಡ್ಡ ತಂಡವನ್ನು ಹಲವು ಜಿಲ್ಲೆಗಳಿಗೆ ಕಳುಹಿಸಿತ್ತು. ಅವರು ಕೂಡ ಹಲವಾರು ಹಳ್ಳಿಗಳಿಗೆ ಭೇಟಿ ನೀಡಿ ರಾಜ್ಯ ಸರ್ಕಾರಕ್ಕೆ ವರದಿ ಸಲ್ಲಿಸಿದರು. ಅದಕ್ಕೆ ಮೊದಲೇ ಜಿಲ್ಲಾಧಿಕಾರಿಗಳು, ಕೃಷಿ ಇಲಾಖೆ ಹಾಗೂ ಅಂಕಿ ಸಂಖ್ಯೆಗಳ ಇಲಾಖೆ ಪ್ರತಿ ವಾರವು ತಮ್ಮ ತಮ್ಮ ಜಿಲ್ಲೆಗಳ ಮಳೆ ಹಾಗೂ ಬೆಳೆ ಪರಿಸ್ಥಿತಿಯ ಬಗ್ಗೆ ವರದಿಗಳನ್ನು ಕಳುಹಿಸುತ್ತಲೇ ಇದ್ದಾರೆ. ಹೀಗೆ ಬರ ಪರಿಸ್ಥಿತಿಯ ಬಗ್ಗೆ ಅಧ್ಯಯನ ಮಾಡುವ ಮತ್ತೆ ಅಧ್ಯಯನ ಮಾಡುವ, ಇನ್ನೊಮ್ಮೆ ಅಧ್ಯಯನ ನಡೆಯುತ್ತಲೇ ಇದೆ. ಈ ಎಲ್ಲವುಗಳ ನಂತರ ಕರ್ನಾಟಕದ ಮುಖ್ಯಮಂತ್ರಿಗಳು ತಮ್ಮ ಪಾದಾರವಿಂದಗಳನ್ನು ಒಂದೆರಡು ಜಿಲ್ಲೆಗಳಿಗೆ ಬೆಳೆಸಿ, ಜಿಲ್ಲಾಧಿಕಾರಿಗಳ ಹವಾನಿಯಂತ್ರಿತ ಕೊಠಡಿಗಳಲ್ಲಿ ಕುಳಿತು ವರದಿ ಪಡೆದಿದ್ದಾರೆ.

ಮಾಹಿತಿ ತಂತ್ರಜ್ಞಾನ ಯಾರಿಗಾಗಿ?

ಹೀಗೆ ಈ ಅಧ್ಯಯನ ಮಾಡುವುದಕ್ಕೆ ಮೂರು ತಿಂಗಳು ಬೇಕಾಗಿದೆಯೇ? ಕರ್ನಾಟಕದ ಎಲ್ಲಾ ಜಿಲ್ಲಾ ಕೇಂದ್ರಗಳು ಹಾಗೂ ತಾಲ್ಲೂಕು ಕೇಂದ್ರಗಳು ವಿಧಾನ ಸೌಧಕ್ಕೆ ನೇರ ಹಾಗೂ ನಿರಂತರ ಸಂಪರ್ಕವಿರುವಂತೆ ಕಂಪ್ಯೂಟರ್ ಜಾಲವನ್ನು ಸ್ಥಾಪಿಸಿದ್ದೇವೆ. ಯಾವ ಜಿಲ್ಲೆಯ ಯಾವ ಸಮಸ್ಯೆಯಾದರೂ ಕ್ಷಣದಲ್ಲಿ ಮಾಹಿತಿಯನ್ನು ಪಡೆಯುತ್ತೇವೆ. ಮತ್ತು ಅತ್ಯಂತ ವೇಗವಾಗಿ ಸಮಸ್ಯೆಗಳ ಪರಿಹರಿಸಲೆಂದೆ ಈ ಜಾಲ ಸ್ಥಾಪಿಸಿದ್ದೇವೆ ಎಂದೆಲ್ಲಾ ಹೈಟೆಕ್ ಮುಖ್ಯಮಂತ್ರಿಗಳು ಕೊಚ್ಚಿಕೊಂಡಿದ್ದು ಈಗ ಎಲ್ಲಿ ಹೋಯಿತು. ಬರಗಾಲದ ವರದಿಗಳನ್ನು ಕಳುಹಿಸಲು ಈ ಕಂಪ್ಯೂಟರ್ ಜಾಲ ನಿರಾಕರಿಸಿತ್ತೇ? ಈ ವರದಿಗಳ ಮೇಲೆ ಕರ್ನಾಟಕ ಸರ್ಕಾರ ಏಕೆ ಕ್ರಮ ಕೈಗೊಳ್ಳಲಿಲ್ಲ.

ಈ ಎಲೆಕ್ಟ್ರಾನಿಕ್ ಆಡಳಿತದ ವೇಗವೆಲ್ಲವು ಸಿರಿವಂತರ ಸಮಸ್ಯೆಗಳನ್ನು ಪರಿಹರಿಸಲು ಮಾತ್ರ ಇದೆಯೇ? ಕರ್ನಾಟಕ ಜನ ಕೋಟಿಯ ಅತ್ಯಂತ ಸಂಕಷ್ಟದ ಗಳಿಗೆಯಲ್ಲಿ ಕೆಲಸಕ್ಕೆ ಬಾರದ ಈ ಎಲೆಕ್ಟ್ರಾನಿಕ್ ಆಡಳಿತ ಯಾರಿಗಾಗಿ?

ಕೇಂದ್ರ ಸರ್ಕಾರದ ಕಪಟ ನಾಟಕ

ಕರ್ನಾಟಕದ ಬರ ಪರಿಸ್ಥಿತಿಯ ಅಧ್ಯಯನಕ್ಕೆಂದು ಬಂದವರು ಕೇಂದ್ರದ ಕೃಷಿ ಸಚಿವಾಲಯದ ಅಧಿಕಾರಿಗಳು. ಈ ಅಧಿಕಾರಿಗಳ ಕಾಲ ಬುಡದಲ್ಲಿಯೇ ಕೇಂದ್ರದ ಕೃಷಿ ಮಂತ್ರಿ ಹಾಗೂ ಪ್ರಧಾನ ಮಂತ್ರಿಗಳ ಕಾಲಬುಡದಲ್ಲಿಯೇ ಇಡೀ ಭಾರತದ ಬೆಳೆ ಹಾಗೂ ಮಳೆ ಪರಿಸ್ಥಿತಿಯ ಅತ್ಯಂತ ಸೂಕ್ಷ್ಮ ಹಾಗೂ ನಿಖರ ವರದಿಗಳು ಚೆಲ್ಲಾಡುತ್ತಾ ಬಿದ್ದಿವೆ. ಭಾರತದ ಹೆಮ್ಮೆಯ ಸಾಧನೆ ಎಂದು ಬಣ್ಣಿಸಿದ ಉಪಗ್ರಹಗಳ ಉಡಾವಣೆಗಳು ಭಾರತದ ವಿವಿಧ ಭಾಗಗಳ ಸೂಕ್ಷ್ಮ ಚಿತ್ರಗಳನ್ನು ಸೆರೆಹಿಡಿದು ರವಾನಿಸುತ್ತಿವೆ. ಈ ಚಿತ್ರಗಳನ್ನು ಬಳಸಿಕೊಳ್ಳುವುದರ ಜೊತೆಗೆ ವಿಶ್ವ ಸಂಸ್ಥೆಯ ಅಡಿಯಲ್ಲಿರುವ ಆಹಾರ ಮತ್ತು ಕೃಷಿ ಸಂಸ್ಥೆ (FAO) ಅಂತರರಾಷ್ಟ್ರೀಯ ಕಾರ್ಯಕ್ರಮವೊಂದರ ಅಡಿಯಲ್ಲಿ ಅಭಿವೃದ್ಧಿ ಹೊಂದಿದ ದೇಶಗಳು ಬಾಹ್ಯಾಕಾಶದಲ್ಲಿ ಇಟ್ಟಿರುವ ಉಪಗ್ರಹಗಳ ಮೂಲಕ ತೆಗೆಯುತ್ತಿರುವ ಇನ್ನೂ ಸೂಕ್ಷ್ಮವಾದ ಚಿತ್ರಗಳನ್ನು ಭಾರತ ಸರ್ಕಾರಕ್ಕೆ ಒದಗಿಸುತ್ತಿದೆ. ಈ ಎಲ್ಲಾ ಛಾಯಾಚಿತ್ರಗಳನ್ನು ಬಳಸಿಕೊಂಡು ಬರ ಪರಿಸ್ಥಿತಿಯ ಬಗ್ಗೆ ಮಾಹಿತಿ ಸಂಗ್ರಹಿಸಲು ಭಾರತ ಸರ್ಕಾರ ಕೃಷಿ ಸಚಿವಾಲಯದ ಅಡಿಯಲ್ಲಿ ರಾಷ್ಟ್ರೀಯ ಕೃಷಿ, ಬರಗಾಲ ನಿಷ್ಕರ್ಷಣೆ ಮತ್ತು ಉಸ್ತುವಾರಿ ವ್ಯವಸ್ಥೆ ಎಂಬ ವಿಭಾಗವನ್ನೇ ಸೃಷ್ಟಿಸಿತು. 1987 ರಿಂದ ಕಾರ್ಯನಿರ್ವಹಿಸುತ್ತಿರುವ ಈ ಯೋಜನೆಯಿಂದಾಗಿ ಭಾರತದ ಯಾವ ಯಾವ ಭಾಗಗಳಲ್ಲಿ ಬಿತ್ತಲ್ಪಟ್ಟ ಭೂಮಿ ಎಷ್ಟು, ಬಿತ್ತಲಾಗದ ಭೂಮಿ ಎಷ್ಟು ಮತ್ತು ಬಿತ್ತಲ್ಪಟ್ಟ ಭೂಮಿಯಲ್ಲಿ ಯಾವ ಬೆಳೆಗಳನ್ನು ಬಿತ್ತಲಾಗಿದೆ ಮತ್ತು ಆ ಬೆಳೆಗಳ ಹಿಂದಿನ ಸ್ಥಿತಿ ಏನು? ಎಲೆಗಳು ನೀರಿನ ಅಭಾವ ದಿಂದಾಗಿ ಬಾಡಿವೆಯೇ, ಒಣಗಿವೆಯೇ?, ಮಣ್ಣಿನಲ್ಲಿರುವ ತೇವಾಂಶ ಎಷ್ಟು? ಇಷ್ಟೆಲ್ಲ ಮಾಹಿತಿಗಳನ್ನು ಈ ಛಾಯಾಚಿತ್ರಗಳ ಮೂಲಕ ಸಂಗ್ರಹಿಸುತ್ತಿದೆ.

ಭಾರತದ ತುಂಬೆಲ್ಲಾ ಸಾವಿರಾರು ಅಧಿಕಾರಿಗಳ ತಂಡಗಳು ಹತ್ತಾರುಸಾವಿರ ಕಿ.ಮಿ. ಅಲೆದಾಡಿದರೂ ಸಂಗ್ರಹಿಸಲು ಸಾಧ್ಯವಾಗದ ಮಾಹಿತಿಯ ಮಹಾಪೂರವೇ ಈ ಯೋಜನೆಗಳಿಂದ ಸರ್ಕಾರಕ್ಕೆ ದೊರಕುತ್ತಿದೆ.

ಅಂದರೆ ಮೇ ಮೊದಲ ವಾರದಲ್ಲಿ ಮಳೆ ಆರಂಭವಾಗಬೇಕಾದ ಕಾಲದಿಂದ ಭಾರತದ ಯಾವ ಯಾವ ಭಾಗಗಳಲ್ಲಿ ಮಳೆಯಾಗಿಲ್ಲ. ಜಮೀನಿನ ಉಳುಮೆಯಾಗಿಲ್ಲ. ಎಲ್ಲಿ ಬಿತ್ತಲಾಗಿದೆ, ಎಲ್ಲಿ ಬಿತ್ತಲಾಗಿಲ್ಲ. ಬಿತ್ತಿದ ಯಾವ ಬೆಳೆಗಳು ಒಣಗಿವೆ ಎಂಬೆಲ್ಲಾ ಮಾಹಿತಿಯು ಭಾರತ ಸರ್ಕಾರಕ್ಕೆ ದಿನಂಪ್ರತಿ ಸಿಗುತ್ತಿದೆ. ಆದರೂ ಈ ಯಾವುದು ತಮಗೆ ಗೊತ್ತೆ ಇಲ್ಲವೆಂಬಂತೆ ಬರಗಾಲದಿಂದ ತತ್ತರಿಸಿ ಜನ ಕಂಗಾಲಾದ ಮೂರು ತಿಂಗಳ ನಂತರ ಈ ಅಧಿಕಾರಿಗಳ ಹರಿದಾಟ ಏಕೆ ಬೇಕಾಯಿತು? ಬ್ರಿಟಿಷರ ಕಾಲದಲ್ಲಿ ಯಾವ ಉಪಗ್ರಹ ತಂತ್ರಜ್ಞಾನ, ಮಾಹಿತಿ ತಂತ್ರಜ್ಞಾನದ ಸೌಲಭ್ಯಗಳು ಇಲ್ಲವಾದ ದಿನಗಳಲ್ಲಿ ಆರಂಭವಾದ ಅಧಿಕಾರಿಗಳ ತಂಡಗಳನ್ನು ಬರ ಅಧ್ಯಯನಕ್ಕೆ ಏಕೆ ಮುಂದುವರಿಸಿಕೊಂಡು ಬರಲಾಗುತ್ತಿದೆ ಎಂಬುದು ಒಂದು ಯಕ್ಷ ಪ್ರಶ್ನೆ. ಬರಗಾಲದ ಬಗೆಗಿನ ಎಲ್ಲಾ ಮಾಹಿತಿ ತಮ್ಮ ಬಳಿಯೇ ಇದೆಯೆಂದಾದರೆ ಬರಗಾಲದ ತೀವ್ರತೆಗನುಗುಣವಾಗಿ ತಕ್ಷಣವೇ ಹಣ ಬಿಡುಗಡೆ ಮಾಡಿ ಬರಗಾಲ ಪರಿಹಾರದ ಕಾಮಗಾರಿಗಳನ್ನು ಕುಡಿಯುವ ನೀರು ಮೇವು ಇವುಗಳ ಒದಗಿಸುವಿಕೆಯನ್ನು ಕೈಗೊಳ್ಳಬೇಕಾಗುತ್ತದೆ. ಈ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳಲು ಮತ್ತು ಇಡೀ ದೇಶದಲ್ಲಿನ ಬರಗಾಲದ ಪರಿಸ್ಥಿತಿಯನ್ನು ನಿರ್ಲಕ್ಷಿಸಲು ಸಾಧ್ಯವಾಗುವುದಿಲ್ಲ. ಹೀಗೆ ಕೇಂದ್ರ ಸರ್ಕಾರದ ಹಣವನ್ನು ಭಾರತದ ಬರಗಾಲ ಪೀಡಿತ ಜನರಿಗಾಗಿ ವ್ಯಯಿಸದೇ ವಂಚಿಸಲು ಮತ್ತು ಈ ಹಣವನ್ನು ಭಾರತದ ಶ್ರೀಮಂತ ರಣಹದ್ದುಗಳಿಗೆ ಆಹಾರವಾಗಿ ಒದಗಿಸಲು ತಮ್ಮಲ್ಲಿರುವ ಮಾಹಿತಿಯನ್ನು ಬಿಟ್ಟಿದ್ದಾರೆ.

ಇದು ಭಾರತದ ಕೋಟ್ಯಾಂತರ ಜನ ಕೂಲಿಕಾರರಿಗೆ ರೈತರಿಗೆ ಹಾಗೂ ರೈತರ ಬಳಿ ಇರುವ ಪಾಳು ಸಂಪತ್ತಿಗೆ(ಬಿಜೆಪಿ ಪೂಜ್ಯನೀಯವಾದ ಗೋಮಾತೆಗೆ) ಮಾಡಿದ ಘೋರ ವಂಚನೆಯಾಗಿದೆ.

ಈ ಕಪಟ ನಾಟಕದಲ್ಲಿ ರಾಜ್ಯ ಸರ್ಕಾರದ ಪಾಲು

ಸಾಧ್ಯವಾದಷ್ಟು ದಿನ ತಳ್ಳಿಬಿಡೋಣ ಅಷ್ಟರಲ್ಲಿ ಈ ಮಳೆ ಬಾರದಿದ್ದರು ಮುಂದಿನ ಮಳೆ ಒಂದೀತು. ಬಂದ ಕೂಡಲೇ ಹಣವನ್ನೆಲ್ಲ ಹಾಗೆಯೇ ಉಳಿಸಿಕೊಳ್ಳಬಹುದು ಎಂಬ ಈ ದುಷ್ಟ ಯೋಜನೆಯಲ್ಲಿ ರಾಜ್ಯ ಸರ್ಕಾರಕ್ಕೂ ಪಾಲಿದೆ. ಬರಗಾಲದ ಛಾಯೇ ಮುಸುಕು ಮುಸುಕಿದ ಕೂಡಲೇ ರಾಜ್ಯ ಸರ್ಕಾರದ ಉಪಗ್ರಹ ಮಾಹಿತಿ ಕೇಂದ್ರದಿಂದ ಬರಗಾಲ ಪರಿಸ್ಥಿತಿಯ ವಿವರ ಪಡೆದುಕೊಂಡು ತನ್ನ ಬಳಿ ಇರುವ ಹಣವನ್ನು ಬಿಡುಗಡೆ ಮಾಡಿ ಬರಗಾಲ ಪರಿಹಾರ ಕಾಮಗಾರಿಗಳನ್ನು, ಗಂಜಿಕೇಂದ್ರ, ಗೋಶಾಲೆ ಸ್ಥಾಪಿಸಬೇಕಿತ್ತು. ಹಾಗೆಯೇ ತಕ್ಷಣವೇ ಕೇಂದ್ರ ಸರ್ಕಾರಕ್ಕೆ ವರದಿ ಸಲ್ಲಿಸಿ ಕೇಂದ್ರ ಸರ್ಕಾರದ ಧನ ಸಹಾಯವನ್ನು ಕೇಳಬೇಕಿತ್ತು. ಆದರೆ ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರ ವರದಿ ಸಲ್ಲಿಸಿದ್ದೇ ಬರಗಾಲದ ಛಾಯೆ ತನ್ನ ಕ್ರೂರ ಪ್ರಹಾರವನ್ನು ಮಾಡಿದ ಮೇಲೆ, ಜುಲೈ ಮಧ್ಯ ಭಾಗದಲ್ಲಿ. ಅಷ್ಟು ಹೊತ್ತಿಗಾಗಲೇ ಬರಗಾಲ ಪೀಡಿತ ಉತ್ತರ ಕರ್ನಾಟಕದಿಂದ ಪ್ರತಿನಿತ್ಯ ಸಾವಿರಾರು ಜನ ಕೂಲಿಕಾರರು ಹಾಗೂ ಸಣ್ಣ ರೈತರು ಗುಳೆ ಹೋಗಲು ಮಹಾರಾಷ್ಟ್ರ ಹಾಗೂ ಕರ್ನಾಟಕದ ಮುಖ್ಯ ನಗರಗಳಿಗೆ ಬರಲಾರಂಭಿಸಿದ್ದರು. ಈಗ ಬರಗಾಲ ಪರಿಹಾರ ಕಾಮಗಾರಿಗಳನ್ನು ಪ್ರಾರಂಭಿಸಿದರೂ ಅದರ ಪ್ರಯೋಜನ ಪಡೆಯಲು ಸ್ವಲ್ಪ ಜನ ಮಾತ್ರ ಉಳಿದಿದ್ದಾರೆ. ವಿಶ್ವದ ದೊಡ್ಡ ದೊಡ್ಡ ಬಂಡವಾಳಶಾಹಿಗಳು ಕರ್ನಾಟಕದ ನೆಲ, ಜಲ, ಮಾನವ ಸಂಪನ್ಮೂಲಗಳನ್ನು ದೋಚುವ ಕರ್ನಾಟಕದಲ್ಲಿ ವಿದ್ಯುತ್ ತಯಾರಿಕೆ ಯೋಜನೆ ಹಾಕಿದ್ದಾಗ ಅವರಿಗೆ ನೀಡಬೇಕಾದ ಲೈಸೆನ್ಸ್ ವಗೈರೆ ನೀಡಿ ಅವರನ್ನು ಸಂತೃಪ್ತಿಪಡಿಸಬೇಕೆಂಬ ತವಕದಲ್ಲಿ ಹಗಲಿರುಳು ಮುಳುಗಿರುವಾಗ ಕರ್ನಾಟಕದ ಬಡಕೂಲಿಕಾರರ ರೈತರ ಕಡೆ ಕಣ್ಣೆತ್ತಿ ನೋಡಲು ಪುರುಸೊತ್ತಾದರೂ ಎಲ್ಲಿ, ಮನಸ್ಸಾದರೂ ಎಲ್ಲಿ?

ಇಂದು ಬ್ಯಾಂಕ್, ಜೀವವಿಮೆ ಮತ್ತು ಸರ್ಕಾರದ ಉದ್ದಿಮೆಗಳಲ್ಲಿ ತೊಡಗಿರುವ 5 ರಿಂದ 10 ಸಾವಿರ ರೂ.ಗಳ ಸಂಬಳ ಪಡೆದುಕೊಳ್ಳುವ ನೌಕರರೇ ಒಂದೊಂದು ದಿನ ಸಂಬಳ ತಡವಾದರು ಆತಂಕಗೊಂಡು ಚಳುವಳಿಗೆ ಇಳಿದು ಗದ್ದಲವೆಬ್ಬಿಸುವ ಸಂದರ್ಭದಲ್ಲಿ ಈಗಾಗಲೇ ಮೂರು-ನಾಲ್ಕು ತಿಂಗಳುಗಳಿಂದ, ಬೇಸಿಗೆಯ ಕಾಲದಲ್ಲಿ ಕೆಲಸವೇ ಇಲ್ಲದೆ ಆದಾಯವೂ ಇಲ್ಲದೆ ಪರದಾಡುತ್ತಿರುವ ಕೂಲಿಕಾರರಿಗೆ ಮಳೆ ಬಾರದ ಒಂದೊಂದು ದಿನವು ಒಂದೊಂದು ಸಂಕಷ್ಟವನ್ನು ಹೇರುತ್ತಿರುವಾಗ ಅವರ ಪರಿಸ್ಥಿತಿಯೇನು ಎಂದು ಕಳವಳ ಪಡಲು ಬಗ್ಗೆ ಅವರ ಮತಗಳನ್ನು ಪಡೆದು ಅಧಿಕಾರವನ್ನು ಪಡೆದಿರುವ ಮುಖ್ಯಮಂತ್ರಿ ಹಾಗೂ ಪ್ರಧಾನ ಮಂತ್ರಿಗಳಿಗೆ ಕಣ್ಣು, ಕರುಳು, ಹೃದಯಗಳು ಇವೆಯೇ ಎಂಬ ಪ್ರಶ್ನೆ ಮೂಡುತ್ತದೆ. ಕರ್ನಾಟಕದ ಜನತೆ ಒಕ್ಕೊರಲಿನಿಂದ ಇನ್ನಾದರೂ ಈ ಕಪಟ ನಾಟಕ ಸಾಕು ಮಾಡಿ ಎಂದು ಕೂಗಬೇಕಾಗಿದೆ.



ಬರ ಅಧ್ಯಯನ ತಂಡ

ವಿಜಾಪುರ/ಬಾಗಲಕೋಟೆ: ಪಂಚನದಿಗಳ ನಾಡು ಬರದ ಕೆನ್ನಾಲಿಗೆಗೆ

ಪಂಚ ನದಿಗಳ ಬೀಡು ಎಂದೇ ಕರೆಸಿಕೊಳ್ಳುವ ಬಿಜಾಪುರ-ಬಾಗಲಕೋಟೆ ಜಿಲ್ಲೆಗಳು ಸಾಮಾನ್ಯ ವರುಷಗಳಲ್ಲಿಯೂ ಬರಗಾಲದಂತಹ ಶಾಪದ ಸ್ಥಿತಿಯನ್ನೇ ಅನುಭವಿಸುತ್ತಿವೆ. ಇನ್ನು ನಾಡಿಗೇ ಬರ ಬಡಿದಿರುವಾಗ ವಿಜಾಪುರದಂತಹ ಜಿಲ್ಲೆಗಳ ಸ್ಥಿತಿ ಚಿಂತಾಜನಕವೇ ಸರಿ. ಬಿರುಕುಬಿಟ್ಟ ಭೂಮಿ, ಬೀಜ ಕಾಣದೇ ಹೊಲಗಳು ಬಣಗುಡುತ್ತಿರುವಾಗ ಕುಡಿಯುವ ನೀರು, ಜನಗಳಿಗೆ ಮೇವು, ಜನರಿಗೆ ಆಹಾರ, ಕೂಲಿಕೆಲವೂ ಸಿಗದೆ ರೈತರು-ಕೂಲಿಕಾರರು, ನಾಗರೀಕರು ಕಂಗಾಲಾಗಿದ್ದಾರೆ. ಬಿಜಾಪುರದ ಐದು ಜಿಲ್ಲೆಗಳೂ ಅತೀವ ಬರದ ಬೆಂಕಿಗೆ ಸಿಕ್ಕಿವೆ. ಜನ-ದನಗಳು ದಿಕ್ಕುಕಾಣದೇ ಗುಳೇ ಹೊರಟಿದ್ದಾರೆ. ಆದರೆ ಹೋಗುವುದಾದರೂ ಎಲ್ಲಿಗೆ ಎಂಬುದು ತಿಳಿಯದೇ ತಿಳಿದಲ್ಲಿಗೆ ಅಥವಾ ಅಲ್ಲೆಲ್ಲೊ ಕೆಲಸ ಇದೆಯೆಂಬ ಸುದ್ದಿ ನಂಬಿಕೆಯ ಮೇಲೆ ಓಡಾಡುತ್ತಿದ್ದಾರೆ.

ಆದರೆ ಸದಾ ಕೋಟಿ ರೂಪಾಯಿಗಳಲ್ಲೇ ಮಾತನಾಡುವ ಸರ್ಕಾರ ಬರದ ಬವಣೆ ನೀಗಲು ಮಾಡಿರುವುದು ಗಮನಾರ್ಹವಿಲ್ಲ. ಎಷ್ಟೋ ಕಡೆ ತೀವ್ರತರವಾಗಿ ನಿರ್ಲಕ್ಷ್ಯಕ್ಕೆ ಜನ-ಜಾನುವಾರು ಈಡಾಗಿದ್ದಾರೆ. ಜನರಿಗೆ ಕಾಮಗಾರಿ ಕೆಲಸ ಸಿಕ್ಕಿಲ್ಲ. ನೀರಿನ, ಮೇವಿನ ಬವಣೆ ತೀರಿಲ್ಲ. ದನಗಳು ಕಸಾಯಿ ಖಾನೆಯತ್ತ ಹೋಗುತ್ತಿರುವುದು ನಿಂತಿಲ್ಲ. ಇಷ್ಟೊಂದು ತತ್ತರಿಸುತ್ತಿರುವಾಗ 'ಅಧ್ಯಯನ ತಂಡ'ಗಳು ಬಂದು ಹೋಗುತ್ತಿವೆ. ಕಾಂಗ್ರೆಸ್‌ನ ಮಂತ್ರಿಗಳು, ಶಾಸಕರು, ಕಾಂಗ್ರೆಸ್‌ನ್ನು ಟೀಕಿಸುವಲ್ಲಿ ನಿರತರಾಗಿರುವ ಬಿಜೆಪಿ ಸಂಸದರು ಇವರಾರಿಗೂ ನಿಜವಾದ ಪರಿಹಾರ ನೀಡುವ ಇರಾದೆ ಇಲ್ಲ. ಈಗೀಗ ಸರ್ಕಾರ ಕಾಮಗಾರಿ ಆರಂಭಿಸುವುದಾಗಿ ಕೂಲಿಗಾಗಿ ಕಾಳು ನೀಡುವುದಾಗಿ ಹೇಳುತ್ತಿದ್ದರೂ 'ಊರು ಕೊಳ್ಳೆ ಹೋದ ಮೇಲೆ ಬಾಗಿಲು ಹಾಕಿದಂತಹ' ಕ್ರಮಕ್ಕೆ ಇಳಿದಂತಾಗಿದೆ. ಒಟ್ಟು ಜನ

→

ಧೋ!ಧೋ!!ಎಂದು ಸುರಿಯಲೇ ಇಲ್ಲ ಮಳೆ ಬಿತ್ತಲೇ ಇಲ್ಲ ಬೆಳೆ

ಹನಿಯೊಡೆಯಲಿಕ್ಕೆ ಬಂದಂತ... ಮೋಡ ತಡೆದಾಗ ಗಾಳಿಯನೆವಕ'

ದ.ರಾ. ಬೇಂದ್ರೆ ಅವರು 'ನೀ ಹಿಂಗಾ ನೋಡ ಬ್ಯಾಡ ನನ್ನ' ಕವನದ ಮೇಲಿನ ಸಾಲನ್ನು ಈಗ ರೈತರು ಮೋಡದ ಕಡೆ ನೋಡಿ ಹಾಡುವಂತ ಗಂಭೀರ ಪರಿಸ್ಥಿತಿಯನ್ನು ಜಿಲ್ಲೆಯಲ್ಲಿ ಮಳೆರಾಯ ಉಂಟು ಮಾಡಿದ್ದಾನೆ.

ಕಳೆದ ತಿಂಗಳು ವೈಶಾಖ ಮಾಸದ ಮೃಗಶಿರಾದಿಂದ ಮುಂಗಾರು ಮಳೆ ಆರಂಭಗೊಂಡು ಬಿತ್ತನೆಗೆ ನೆಲ ಹದಗೊಳ್ಳುವುದೆಂದು ಕೃಷಿಕರು ಕಾರಹುಣ್ಣಿಮೆಯಂದು ಬಿತ್ತನೆಗೆ ನೆರವಾಗುವ ಬಸವನ ಅದ್ದೂರಿ ಮೆರವಣಿಗೆ ಮಾಡಿ ಸಿದ್ಧಗೊಂಡಿದ್ದರು.

ಆಕಾಶದಲ್ಲಿ ಮೋಡ ಕಟ್ಟಿದಾಗೆಲ್ಲ ಮಳೆರಾಯ ಇಳೆಗಿಳಿಯುವನೆಂದು ಪ್ರತಿಸಲವು ಕಾದ ರೈತನ **ಕಂಗಳು ಕಾಯಿಕಾತವೆ ವಿನಃ ಮಳೆರಾಯ ಮಾತ್ರ ಇಳೆಯ ಮನದಣಿಸಿ ಕೆರೆಕುಂಟೆ ತುಂಬುವಂತೆ ಧೋದೋಎಂದು ಸುರಿಯಲೇ ಇಲ್ಲ.** ವೈಶಾಖದಲ್ಲಿಯ ಆಷಾಢ ಆರಂಭ ಗೊಂಡಿತೋ ಎನ್ನುವಂತೆ ಕಟ್ಟಿದ ಮೋಡಗಳನ್ನು ಬಿಡಾಡಿ ಬಿರುಗಾಳಿ ಚದುರಿಸಿ ಕೊನೆಗೂ ಜಿಲ್ಲೆಯನ್ನು ಬರದ ಛಾಯೆ ಆವರಿಸುವಂತೆ ಮಾಡಿರುವುದರಿಂದ ಜಿಲ್ಲೆಯ ಜನಜೀವನ ಮುಂದೇನು ಎನ್ನುವಂತ ಆತಂಕಕ್ಕೀಡಾಗಿದೆ.

ಜಿಲ್ಲೆಯಲ್ಲಿ ಆವರಿಸಿದ ಬರಗಾಲ ಛಾಯೆ

ಜಿಲ್ಲೆಯ ಐದು ತಾಲೂಕುಗಳಲ್ಲಿ ಸಿಂಧನೂರು, ಮಾನ್ವಿ ತಾಲೂಕುಗಳು ತುಂಗಭದ್ರಾ ಎಡದಂಡೆ ನಾಲೆಯ ನೀರಾವರಿ ಸೌಲಭ್ಯಕ್ಕೆ ಶೇಕಡಾ ಐವತ್ತರಿಂದ ಶೇಕಡಾ ಎಪ್ಪತ್ತರಷ್ಟು ಹೊಂದಿದ್ದರೆ, ರಾಯಚೂರು ಶೇಕಡಾ ಎಪ್ಪತ್ತರಷ್ಟು ಖುಷ್ಕಿ ಹಾಗೂ ಲಿಂಗಸೂಗೂರು, ದೇವದುರ್ಗ ತಾಲೂಕುಗಳು ಶೇಕಡಾ 100ರಷ್ಟು ಖುಷ್ಕಿ ಜಮೀನು ಕೃಷಿಗೆ ಮಳೆಯನ್ನೇ ಅವಲಂಬಿಸಿದೆ.

ಮಳೆಯ ಸುಳಿವಿಲ್ಲದೇ ಅಲ್ಲಲ್ಲಿ ಬಿತ್ತಿದ ಬೀಜಗಳು ಮೊಳಕೆ ಒಡೆಯದೆ ಬಿತ್ತನೆಗೆ ಬಂಡವಾಳ ಹೂಡಿದ ರೈತನ ಎದೆ ಒಡೆಯುವಂತೆ ಮಾಡಿದೆ.

ಈಗಾಗಲೇ ದೇವದುರ್ಗ, ಲಿಂಗಸೂಗೂರು ಮತ್ತು ರಾಯಚೂರು ತಾಲೂಕಿನ ಖುಷ್ಕಿ ಜಮೀನಿನ ಕೃಷಿ ಕೂಲಿಕಾರರು ದುಡಿಮೆಯನ್ನು ಹುಡುಕಿಕೊಂಡು ಬೆಂಗಳೂರು, ಮುಂಬೈ, ಚೆನ್ನೈ, ಗೋವಾ ಪಟ್ಟಣ ಪ್ರದೇಶಗಳಿಗೆ ಹೋಗುತ್ತಿದ್ದಾರೆ.

ಜಿಲ್ಲೆಯಲ್ಲಿ ಸುಮಾರು 1.50 ಲಕ್ಷ ಅಧಿಕ ಕೃಷಿ ಕೂಲಿಕಾರರಿದ್ದಾರೆ. ಇವರ ಮನೆಯ ಒಲೆಯಲ್ಲಿ ಬೆಂಕಿ ಕಾಣದೆ ತಟ್ಟೆಯಲ್ಲಿ ಅಂಬಲಿಗೂ ಮಳೆ ಅಗತ್ಯವಾಗಿದೆ ಮಳೆ ಬಾರದಿದ್ದಲ್ಲಿ ಹೊಟ್ಟೆ ಖಾಲಿ ಎನ್ನುವಂಥ ಚಿಂತಾಜನಕ ಸ್ಥಿತಿ ಇದೆ. ರೈತರಿಗೆ ದುಡಿಮೆಯೇ ಇಲ್ಲ ಎನ್ನುವಂತಹ ಪರಿಸ್ಥಿತಿಯಲ್ಲಿ ಕೃಷಿಕರಿಗೆ ಆಸರೆ ನೀಡಲು ಸಾಧ್ಯವೆ? ಎನ್ನುವ ಅಸಹಾಯಕ ಕಳವಳದಲ್ಲಿ ರೈತನು **"ಕಣಜ ಬೆಳೆದ ಮನೆಗೆ ಉಣಲಾಕ ಕೂಲಿಲ್ಲ, ಬಿಸಾಕ ಕವಣೆ ಬಲವಿಲ್ಲ ಕೂಲ್ಯವರ, ಸುಡಬೇಕು ಜನುಮ ಸುಖವಿಲ್ಲ"**

ಎಂದು ಮರುಗುವಂತಹ ಪರಿಸ್ಥಿತಿ ಬಂದೊದಗಿದೆ.

"ನೊಗ ಹೊತ್ತ ಜೀವಗಳು ಜಡವಾಗಿ ಬಡವಾಗಿ ಎಲುಬು ಗೂಡುಗಳಾಗಿ ಹಸಿರು ಕಾಣದೆ, ಉಸಿರಡಗಿ ಮೂಳೆ ಚಕ್ಕಳದ ತಟ್ಟೆಗಳು"

ಇಂದು ಜಿಲ್ಲೆಯ ಜಾನುವಾರುಗಳ ಸ್ಥಿತಿ ಈಗ ನಾಲ್ಕು ನೂರು ಗ್ರಾಮಗಳಿಗೆ ನೀರಿನ ತೊಂದರೆಯಾಗಲಿದೆ. ಕುಡಿಯುವ ನೀರು ಪೂರೈಕೆಗೆ ಮೂವತ್ತು ಲಕ್ಷ ಬಿಡುಗಡೆಗೆ ಸಚಿವರಿಂದ ಭರವಸೆ ಬಂದಿದೆ.



ತೀವ್ರ ಬರಗಾಲ ಪರಿಸ್ಥಿತಿ ಸುತ್ತಿಕೊಂಡ ಜಿಲ್ಲೆಯಲ್ಲಿ ಸರಕಾರ ಕೂಡಲೇ ಬರೀ ಕಾಮಗಾರಿಗಳನ್ನು ಕೈಗೊಳ್ಳದಿದ್ದರೆ

''ಒಕ್ಕಲಗೇರ್‍ಯಾಗ' ಮಳೆರಾಜ, ಮಕ್ಕಳ ಮೂರ್‍ಯಾರ, ಗಂಡುಳ್ಳ ಬಾಲ್ಯಾರು ಬಿಕ್ಕಾಕ ಹೋದರು, ಅನ್ಯಾದ ದಿನ ಬಂತೋ ಮಳೆರಾಜ" ಎಂದು ರೋದಿಸುವುದು ಮಾತ್ರ ಜನರ ಮುಂದಿನ ಏಕಮಾತ್ರ ದಾರಿಯಾಗುತ್ತದೆ.

ಸರ್ವೆ ಬೇಕೆ?

ಗದ್ದಕ್ಕೆ ಬೆಂಕಿ ಹತ್ತಿದಾಗ ಬಾವಿ ತೋಡುವ ಸರಕಾರ ಜಿಲ್ಲೆಯ ಬರಗಾಲ ಪರಿಸ್ಥಿತಿ ಎದುರಿಸಲು ಅಗತ್ಯವಾದ ಅನುದಾನ ಕೂಡಲೇ ಬಿಡುಗಡೆ ಮಾಡುವುದು ಬಿಟ್ಟು ಇನ್ನು ಸರ್ವೆ ಮಾಡಿಸುವ ಬಗ್ಗೆ ಪರಿಶೀಲಿಸುತ್ತಿರುವುದು ವಿಚಿತ್ರವಾಗಿದೆ.

ಜಿಲ್ಲೆಯ ಪರಿಸ್ಥಿತಿ ಗಂಭೀರ ವಾಗಿರುವಾಗ ಸರಕಾರ ಯಾವುದರ ಬಗ್ಗೆ ಸರ್ವೆ ಮಾಡಲಿದೆ.

ಗುರುಗುಂಟಾ ಗ್ರಾಮಗಳು ಸೇರಿ ಅನೇಕ ಗ್ರಾಮಗಳಲ್ಲಿ ಮೇವಿನ ಕೊರತೆ ಇದ್ದರೆ, ದೇವದುರ್ಗ ತಾಲೂಕಿನ ಕುರುಕಳಿ, ರಾಮದುರ್ಗ ಗಬ್ಬೂರು, ಮಸರಕಲ್ ಸೇರಿದಂತೆ ಇನ್ನೂ ಅನೇಕ ಗ್ರಾಮಗಳಲ್ಲಿ ಮೇವಿನ ಕೊರತೆ ತೀವ್ರವಾಗಿದೆ. ದುಡಿಯಲು ಬೇರೆ ಪಟ್ಟಣಗಳಿಗೆ ಹೋಗುವ ಜನರು ತಮ್ಮ ದನಗಳನ್ನು ಕಸಾಯಿಖಾನೆಗೆ ಮಾರುತ್ತಿದ್ದಾರೆ.

ಗ್ರಾಮಾಂತರ ಪ್ರದೇಶಗಳಲ್ಲಿ ಉದ್ಯೋಗ ಪ್ರಶ್ನೆ ಪ್ರಮುಖವಾಗಿದೆ. ಜಿಲ್ಲೆಯಲ್ಲಿ ಸರಕಾರದ ಅಂಕಿಸಂಖ್ಯೆಗಳಂತೆ 1.37ಲಕ್ಷ ಜನ ಸಣ್ಣ, ಅತಿಸಣ್ಣ ಮತ್ತು ಕೃಷಿ ಕಾರ್ಮಿಕರಿದ್ದಾರೆ.

ಜೂನ್ ಅಂತ್ಯದ ವೇಳೆಗೆ ಮಳೆಯ ಪ್ರಮಾಣ 151 ಮೀ.ಮೀ. ಆಗಬೇಕಿತ್ತು ಆದರೆ ಇಲ್ಲಿಯವರೆಗೆ ಮಳೆಯ ಪ್ರಮಾಣ ಕೇವಲ 65 ಮೀ.ಮೀ. ಮಾತ್ರವಾಗಿದೆ. ಜೂನ್ ಅಂತ್ಯದ ವೇಳೆಗೆ ತಡವಾದರೂ ಉತ್ತಮ ಮಳೆಯಾಗಿ ರೈತರ ಬದುಕು ಬೀದಿಗೆ ಬೀಳುವುದನ್ನಾದರೂ ಮಳೆರಾಯ ತಡೆಯುತ್ತಾನೆ ಎನ್ನುವ ಆಶಯಗಳು ನಿರ್ನಾಮವಾಗುವಂತೆ ಆಗಿದೆ.


ಬಿಗಡಾಯಿಸುತ್ತಿರುವ ಸ್ಥಿತಿ

ಮಳೆಯ ಅಭಾವದಿಂದಾಗಿ ಜಿಲ್ಲೆಯಲ್ಲಿ ದಿನೇ ದಿನೇ ಪರಿಸ್ಥಿತಿ ಬಿಗಡಾಯಿಸುತ್ತಿದೆ. ಬೇಸಿಗೆಯಲ್ಲಿ ಸುಮಾರು 44° ಡಿಗ್ರಿ ಉಷ್ಣತೆಯಿಂದ ಬಾಯ್ದೆರೆದ ಭೂಮಿಯ ಮಣ್ಣು ಹಸಿಯಾಗಲು, ಖಾಲಿಯಾದ ಕೆರೆ ಕುಂಟೆಗಳು, ತುಂಬಲು ಮತ್ತು ಬತ್ತಿದ ಅಂತರ್ಜಲಮಟ್ಟ ಮೇಲೇರಲು ಕಳೆದ ಒಂದೇ ತಿಂಗಳಲ್ಲಿ ಸುಮಾರು 160 ಮೀ.ಮೀ. ಮಳೆಯಾದರೂ ಸುರಿಯಬೇಕಿತ್ತು. ಆದರೆ ಅಷ್ಟೊಂದು ಪ್ರಮಾಣದ ಕಣ್ಣೀರು ಈಗ ರೈತರು ಸುರಿಸುವಂತ ಸಂಕಷ್ಟ ಸ್ಥಿತಿ ಉದ್ಭವಿಸಿದೆ. ಬಿತ್ತಿದ ಬೀಜ ಮೊಳಕೆ ಒಡೆಯಲು ಬೇಕಾದ ಕುದಿತವಿದ್ದರೂ ಮೇಲಿನ ರೀತಿಯಲ್ಲಿ ಪರಿವರ್ತನೆಯಾಗುತ್ತಿದೆ.

ಜಿಲ್ಲೆಯಲ್ಲಿ ಆಕಳು, ಕರು, ಎತ್ತುಗಳು ಕುರಿ, ಆಡು ಸೇರಿದಂತೆ ಸುಮಾರು ಹತ್ತು ಲಕ್ಷಕ್ಕೂ ಅಧಿಕ ಜಾನುವಾರುಗಳಿವೆ. ತೀವ್ರ ಮಳೆಯ ಅಭಾವದಿಂದಾಗಿ ಮೇವಿನ ಕೊರತೆ ಜಿಲ್ಲೆಯಲ್ಲಿ ಈಗಾಗಲೇ ತಲೆದೋರುತ್ತಿದೆ.

ಲಿಂಗಸೂಗೂರು ಮತ್ತು ದೇವದುರ್ಗ ತಾಲೂಕುಗಳಲ್ಲಿ ಇರುವ ಸುಮಾರು ಮೂರು ಲಕ್ಷಕ್ಕೂ ಅಧಿಕ ಜಾನುವಾರುಗಳು ಈಗ ತೀವ್ರ ಮೇವಿನ ಅಭಾವ ಸ್ಥಿತಿಯನ್ನು ಎದುರಿಸುತ್ತಿವೆ.

ಮಳೆ ಇಲ್ಲದ ಕಾರಣ ಈಗಾಗಲೇ ಬಿತ್ತನೆ ಮಾಡುವ ಕಾಲಾವಕಾಶ ಬಹುತೇಕ ಕೈತಪ್ಪಿದೆ. ಮಳೆ ಲಕ್ಷಣಗಳು ಕಾಣುತ್ತಿಲ್ಲ. ಅಪ್ಪಿತಪ್ಪಿ ಮಳೆ ಬಂದರೂ ಶೇಕಡಾ ಇಪ್ಪತ್ತೈದರಷ್ಟು ಬಿತ್ತನೆಯಾಗಬಹುದೆ ವಿನಃ ಸಂಪೂರ್ಣ ಬಿತ್ತನೆಯಾಗುವುದಿಲ್ಲ.



ತುಂಗಭದ್ರಾ ಎಡದಂಡೆ ನಾಲೆಗೆ ವಾರ್ಷಿಕ ದುರಸ್ಥಿಯ ಹಿನ್ನೆಲೆಯಲ್ಲಿ ನೀರು ಸ್ಥಗಿತಗೊಳಿಸ ಲಾಗಿದೆ. ಇದರಿಂದ ಸುಮಾರು 580 ಕ್ಯಾಂಪ್ ಮತ್ತು ಗ್ರಾಮಾಂತರ ಪ್ರದೇಶಗಳಿಗೆ ಕುಡಿಯುವ ನೀರಿನ ತೊಂದರೆಯಾದರೆ, ಮಳೆಯ ಅಭಾವದಿಂದಾಗಿ ಖುಷ್ಕಿ ಜಮೀನಿನ ಕೆರೆಕುಂಟೆಗಳಲ್ಲಿ ನೀರಿಲ್ಲದೆ ಸುಮಾರು

ಸರಕಾರ ಸರ್ವೆ ಎಂದು ಕಾಲಹರಣ ಮಾಡಿದರೆ, ಸರಕಾರದ ಸರ್ವೆ ಬರಗಾಲದ ನಷ್ಟದ ಬಗ್ಗೆ ಮಾಡುವ ಬದಲು ಕೂಳಿಲ್ಲದೆ ಮನುಷ್ಯರು ಎಷ್ಟು, ದನಕರುಗಳು ಎಷ್ಟು ಸತ್ತವು ಎಂದು ಸರ್ವೆ ಮಾಡಬೇಕಾಗುತ್ತದೆ.

ಜಿಲ್ಲೆಯಲ್ಲಿ ಭೀಕರ ಬರ, ಜನಪ್ರತಿನಿಧಿಗಳ ನಿರ್ಲಕ್ಷ್ಯ; ಕಂಗೆಟ್ಟು ಗುಳೇ ಹೊರಟ ಜನ...

'ಸರ್‍ಯಾರ್ದೋರ‍್ಗ ಕಣ್ಣಿಲ್ಲ, ಕಿವಿಯಿಲ್ಲ, ಅಪ್ಪ ಅಲ್ಲ, ಹೃದಯಾನೇ ಇಲ್ಲ, ಕಲ್ಲು ಮನಸ್ಸಿನವರು! ಇಲ್ಲದ್ದಿದ್ರ ನಮ್ಮ ಹೀಂಗ ಸಾಯಕ ಬಿಡ್ತಿದ್ರಾ' ಎಂದು ಹಳ್ಳಿಗಳ

ಕೆ. ಸತ್ಯನಾರಾಯಣ

ಕಟ್ಟೆಗಳ ಮೇಲೆ ಕುಳಿತು ವೀಳ್ಯಾದೆಲೆ ಅಗಿಯುತ್ತ ವಯೋವೃದ್ಧರು ಆಡಿಕೊಳ್ಳುವ ಮಾತುಗಳು ಇವಾದರೆ ದುಡಿಯುವಶಕ್ತಿ ಇರುವವರು ದೂರದ ಪಟ್ಟಣಗಳಿಗೆ ಗುಳೆ ಹೋಗುತ್ತಿದ್ದಾರೆ.

1972 ಮತ್ತು 93ರಲ್ಲಿ ದೇವದುರ್ಗ ತಾಲೂಕಗಳಲ್ಲಿ ಜೂನ್ ತಿಂಗಳಲ್ಲಿ ಮಳೆಯ ಪ್ರಮಾಣ ಅನುಕ್ರಮವಾಗಿ 147.70ಮೀಮೀ. ಮತ್ತು 21.20 ಆಗಿತ್ತು. ಈ ವರ್ಷ ಮಳೆ ಪ್ರಮಾಣ ಕೇವಲ 19.3 ಮೀ.ಮೀ. ಲಿಂಗಸೂಗೂರು ತಾಲೂಕಿನಲ್ಲಿ 1972 ಮತ್ತು 73ರಲ್ಲಿ ಮಳೆ ಪ್ರಮಾಣ ಅನುಕ್ರಮವಾಗಿ 68.50 ಮೀಮಿ. 23.6 ಮೀ.ಮೀ. ಆಗಿತ್ತು ಆದರೆ ಈ ವರ್ಷ 23.2 ಮೀ.ಮೀ. ಮಾತ್ರವಾಗಿದೆ. ಜುಲೈ ತಿಂಗಳಿಗೆ ಹೋಲಿಸಿದರೆ ಮಳೆಯ ಪ್ರಮಾಣ ಈ ವರ್ಷ 10 ಮೀ.ಮೀ. ಕಡಿಮೆಯಾಗಿದೆ.

ಜೂನ್ ತಿಂಗಳಲ್ಲಿ ಮಳೆ ಸುರಿದಿದ್ದರೆ 27 ಸಾವಿರ ಹೆಕ್ಟರ್ ಶೇಂಗಾ ಹೈಬ್ರೀಡ್ ಜೋಳ ಮತ್ತು 10 ಸಾವಿರ ಹೆಕ್ಟರ್ ಪ್ರದೇಶದಲ್ಲಿ ಎಳ್ಳುಸೇರಿ ಒಟ್ಟು 50 ಸಾವಿರ ಹೆಕ್ಟರ್ ಪ್ರದೇಶದಲ್ಲಿ ಬಿತ್ತನೆಯಾಗುತ್ತಿತ್ತು. ಮಳೆ ಇಲ್ಲದ ಕಾರಣ ಬಿತ್ತನೆಯಾಗಲೇ ಇಲ್ಲ.

ಜುಲೈ ತಿಂಗಳ ಮಧ್ಯದ ವೇಳೆಗೆ ಮಳೆಯಾಗಿದ್ದರೆ ಉಳಿದ 1.50 ಲಕ್ಷ ಹೆಕ್ಟರ್ ಖುಷ್ಕಿ ಪ್ರದೇಶದಲ್ಲಿ ಹೈಬ್ರೀಡ್ ಸಜ್ಜೆ, ಸೂರ್ಯಕಾಂತಿ, ಔಡಲ ಇವುಗಳನ್ನು ಬಿತ್ತನೆ ಮಾಡಬಹುದಿತ್ತು. ಅಲ್ಲದೆ ಜೂನ್ ತಿಂಗಳ ಮಳೆ ಅಭಾವದಿಂದ ಬಿತ್ತನೆಗಿಂತ 50 ಸಾವಿರ ಹೆಕ್ಟರ್ ಪ್ರದೇಶ ಕೆಂಪುಮಣ್ಣು ಪ್ರದೇಶದಲ್ಲಿ ಪರ್ಯಾಯ ಬೆಳೆಗಾಗಿ ಸೂರ್ಯಕಾಂತಿ, ನವಣೆ, ಹುರಳಿ ಇವುಗಳನ್ನು ಬಿತ್ತನೆ ಮಾಡಬಹುದಿತ್ತು. ಕಪ್ಪು ಮಣ್ಣಿನಲ್ಲಿ ಸೂರ್ಯಕಾಂತಿ, ಗುರೆಳ್ಳು, ಔಡಲ ಕೃಷಿಗೆ ಸಾಧ್ಯತೆಗಳಿದ್ದವು. ಅಲ್ಲದೆ ತೊಗರಿ ಸಹ ಬೆಳೆಯಬಹುದಾದ ಸಾಧ್ಯತೆಗಳಿದ್ದರೂ. ಇಂದಿನವರೆಗೆ ಮಳೆ ಸುರಿಯದ ಕಾರಣರೈತರಿಗೆ ಇರುವಕೊನೆ ಆಸೆಯು ಕರಗಿಹೋಗಿದೆ. ಬಿತ್ತನೆ ಯೋಗ್ಯ 1.84 ಲಕ್ಷ ಹೆಕ್ಟರ್ ಪ್ರದೇಶದಲ್ಲಿ ಜಿಲ್ಲೆಯಲ್ಲಿ ಪ್ರಸ್ತುತ ಕೇವಲ 3,645 ಹೆಕ್ಟರ್ ಪ್ರದೇಶದಲ್ಲಿ ಮಾತ್ರ ಬಿತ್ತನೆಯಾಗಿದ್ದು, ಮಳೆಯ ಅಭಾವದಿಂದ ಭೂಮಿಯಲ್ಲಿಯೇ ಬೀಜ ಒಣಗಿ ರೈತರಿಗೆ ಮತ್ತೊಂದು ರೀತಿಯ ನಷ್ಟವುಂಟು ಮಾಡಿದೆ.

ಲಿಂಗಸೂಗೂರು ತಾಲೂಕಿನ ಐದು ಬಾವಿ

ಈ ಜನರ ಬದುಕು ಭಯಾನಕವಾಗಿದೆ. ನೀರಾವರಿ ಪ್ರದೇಶದ ಕೆಲವರಿಗೆ ಎಡದಂಡೆ ನಾಲೆಯಲ್ಲಿ ನೀರು ಹರಿಯುವುದರಿಂದ ಉದ್ಯೋಗ ಸೌಕರ್ಯ ದೊರೆತರೆ ಖುಷ್ಕಿ ಪ್ರದೇಶದ ಜನರಿಗೆ ಹುಟ್ಟೂರು ಬಿಟ್ಟು ಹೋಗುವುದೊಂದೇ ದಾರಿಯಾಗಿದೆ.

ಸರಕಾರದಿಂದ ಸಹಾಯವಿಲ್ಲ.

ಜಿಲ್ಲೆಯಲ್ಲಿ ಉದ್ಭವಿಸಿದ ಬರಗಾಲ ಪರಿಸ್ಥಿತಿ ಎದುರಿಸಲು ಜಿಲ್ಲಾಡಳಿತವು ಈಗಾಗಲೇ ಎರಡು ಪ್ರಸ್ತಾವನೆಗಳನ್ನು ರಾಜ್ಯ ಸರ್ಕಾರಕ್ಕೆ ಕಳಿಸಿದ್ದರೂ ಬಂದ ಅಲ್ಪ ಹಣ ಏನಕ್ಕೂ ಸಾಲುತ್ತಿಲ್ಲ

ಜೂನ್ ಕೊನೆಯ ವಾರದಲ್ಲಿ 3.80 ಕೋಟಿ ರೂ. ಅನುದಾನ ಕೋರಿ ಕಳಿಸಿದ ಪ್ರಸ್ತಾವನೆಗೆ ಸರಕಾರ ಸ್ಪಂದಿಸಿಲ್ಲ. ಕಾರಣ ಜಿಲ್ಲೆಯಲ್ಲಿ ವಾಸ್ತವಸ್ಥಿತಿ ಅಧ್ಯಯನ ಮಾಡಿ ಬರಪರಿಹಾರ ಕಾಮಗಾರಿಗೆ 9.73 ಕೋಟಿ ಅಗತ್ಯವೆಂದು ಮತ್ತೊಂದು ಪ್ರಸ್ತಾವನೆ ಕಳಿಸಲಾಗಿದೆ.

81.35 ಲಕ್ಷ ನಗರ ಪ್ರದೇಶಕ್ಕೆ ಕುಡಿಯುವ ನೀರಿನ ಸೌಕರ್ಯ, 1.93 ಕೋಟಿ ಗ್ರಾಮಾಂತರ ಪ್ರದೇಶದ ಕುಡಿಯುವ ನೀರಿಗೆ, ಕೃಷಿಕರ ಉದ್ಯೋಗ ಸೃಷ್ಟಿಗೆ 3.80 ಕೋಟಿ ಕೃಷಿ ಚಟುವಟಿಕೆಗಳಿಗೆ ಸಣ್ಣ ರೈತರಿಗೆ ಅನುಕೂಲ ಮಾಡಿಕೊಡಲು 2.80 ಕೋಟಿ, ಸಾರ್ವಜನಿಕ ಆರೋಗ್ಯ ಮತ್ತು ನೈರ್ಮಲ್ಯಕ್ಕೆ 29.75 ಹಾಗೂ ವಿಶೇಷ ಪೌಷ್ಟಿಕ ಆಹಾರಕ್ಕೆ 9.19 ಲಕ್ಷ ಸರಕಾರಕ್ಕೆ ಕಳಿಸಿದ ಪ್ರಸ್ತಾವನೆಯಲ್ಲಿ ತೋರಿಸಲಾಗಿದೆ.

ಜಿಲ್ಲೆಯಿಂದ ಹೋದ ಪ್ರಸ್ತಾವನೆಗಳಿಗೆ ಸರಕಾರ ಅನುದಾನ ಬಿಡುಗಡೆ ಮಾಡದಕಾರಣ ಅಧಿಕಾರಿ ಗಳು ಬರ ಪರಿಹಾರ ಕಾಮಗಾರಿ ಕೈಗೊಳ್ಳಲು ಸಾಧ್ಯವಾಗದ ಸ್ಥಿತಿಯಲ್ಲಿ ಇದ್ದಾರೆ. ಜಿಲ್ಲೆಯಲ್ಲಿ ಕುಡಿಯುವ ನೀರಿನ ಸೌಕರ್ಯಕ್ಕೆ ಕೊಳವೆ ಬಾವಿ ಕೊರೆಯಲಾಗುತ್ತಿದೆ. ಎಂದು ಹೇಳಲಾಗುತ್ತಿದೆ ಯಾದರೂ ಕೊಳವೆಬಾವಿ ಕೊರೆಯುವ ಕಾರ್ಯ ಚುರುಕಾಗಿಲ್ಲ. ಕೃಷಿ ಕೂಲಿಕಾರರಿಗೆ ಉದ್ಯೋಗ ಒದಗಿಸುವ ಯಾವುದೇ ಕಾಮಗಾರಿಯು ಇನ್ನೂ ಜಿಲ್ಲೆಯಲ್ಲಿ ಆರಂಭಗೊಂಡಿಲ್ಲ. ಈಗಾಗಲೇ ನಡೆದ ಕಾಮಗಾರಿಗಳಲ್ಲಿ ಯಂತ್ರ ಬಳಕೆ ಸ್ಥಗಿತಗೊಳಿಸಿ ಕೃಷಿಕರಿಗೆ ಉದ್ಯೋಗ ದೊರಕಿಸಿಕೊಡಲು ಗುತ್ತೇದಾರರಿಗೆ ಹೇಳಲಾಗಿದೆಯಾದರೂ ಗುತ್ತೇದಾರರು ಕೆಲಸ ತೀವ್ರತೆ ಮತ್ತು ಗುಣಮಟ್ಟದ ಹಿನ್ನೆಲೆಯಲ್ಲಿ ಯಂತ್ರಗಳನ್ನು ಬಳಸುತ್ತಿದ್ದಾರೆ.

28 ಕೋಟಿಯ ರಾಯಚೂರು ನಗರದ ಶಾಶ್ವತ ಕುಡಿಯುವ ನೀರಿನ ಯೋಜನೆಯ ಕಾಮಗಾರಿಗೆ ಯಂತ್ರ ಬಳಸುತ್ತಿದ್ದಾರೆ. ರಸ್ತೆ ಕಾಮಗಾರಿಗಳು ಸರ್ವೆ ಮೂಲಕ ಮಾಡಲಾಗುತ್ತಿದೆ. ಜನರಿಗೆ ಉದ್ಯೋಗ ಅವಕಾಶ ಒದಗಿಸುವಂತೆ, ಗ್ರಾಮಗಳ ಸಂಪರ್ಕ ರಸ್ತೆ ಹಾಗೂ ಕೆರೆಕುಂಟೆ ಹೂಳೆತ್ತುವ ಕಾಮಗಾರಿಗಳು ಎಲ್ಲಿಯು ನಡೆದಿಲ್ಲ. ಹೊಸ ಕಾಮಗಾರಿ ಕೈಗೊಳ್ಳಲು ಜಿಲ್ಲಾಡಳಿತ ಯೋಜನೆ ರೂಪಿಸಿದೆಯಾದರೂ ಹಣದ ಕೊರತೆ ಅಧಿಕಾರಿಗಳನ್ನು ಕೈಕಟ್ಟಿಕೊಂಡು ಕೂಡುವಂತೆ ಮಾಡಿದೆ.

- (ರಾಯಚೂರು ವಾರ್ತೆ)

⟹

ಪ್ರತಿನಿಧಿಗಳದ್ದು ತೀರಾ ನಿರ್ಲಕ್ಷ್ಯದ ಧೋರಣೆ.


ಸರ್ಕಾರಕ್ಕೆ ಮೊದಲೇ ಎಚ್ಚರಿಕೆ

ಇಂತಹ ಪರಿಸ್ಥಿತಿ ಬಂದೊದಗುವ ಬಗ್ಗೆ ಸುಮಾರು 2 ತಿಂಗಳ ಮೊದಲೇ ರಾಜ್ಯದಲ್ಲಿ ಮೊಟ್ಟಮೊದಲು ವಿಜಾಪುರ ಜಿಲ್ಲಾ ಕರ್ನಾಟಕ ಪ್ರಾಂತ ರೈತ ಸಂಘವು ಆಡಳಿತವನ್ನು ಎಚ್ಚರಿಸಿ, ಅಗತ್ಯ ಸಿದ್ಧತೆ ನಡೆಸಿ, ತುರ್ತು ಕ್ರಮ ಕೈಗೊಳ್ಳಲು ತಿಳಿಸಿತ್ತು. ಜಿಲ್ಲಾ ಆಡಳಿತಕ್ಕೆ ಮನವಿ ಸಲ್ಲಿಸಿತಲ್ಲದೇ ರೈತ ಮುಖಂಡರಾದ ಭೀಮಸಿ ಕಲಾದಗಿಯವರ ನೇತೃತ್ವದ ನಿಯೋಗವು ಬೆಂಗಳೂರಿನಲ್ಲಿ ಸಂಬಂಧಿಸಿದ ಸಚಿವರನ್ನು ಕಂಡು ಮನವಿ ನೀಡಿ ಕ್ರಮವಹಿಸಲು ಆಗ್ರಹಿಸಿತು. ಆದರೆ ಸರ್ಕಾರ ಇದರತ್ತ ಕನಿಷ್ಠ ಪರಿಶೀಲನೆ ನೋಟವನ್ನೂ ಬೀರದೆ ನಿರ್ಲಕ್ಷಿಸಿತು. ಜನರ ಬಗೆಗಿನ ಕಡು ತಿರಸ್ಕಾರದಿಂದ, ನೀಚ ಮನೋಭಾವವನ್ನೇ ತೋರಿಸಿತು.

ಆದರೆ ಅಷ್ಟಕ್ಕೂ ಪಟ್ಟು ಬಿಡದ ರೈತ ಸಂಘಟನೆಯು ಇಡೀ ಜಿಲ್ಲೆಯಾದ್ಯಂತ ಎಲ್ಲಾ ತಾಲೂಕು-ಕೆಲವು ಪಂಚಾಯ್ತಿ ವ್ಯಾಪ್ತಿಯಲ್ಲಿ ತೀವ್ರತರ ಪ್ರತಿಭಟನೆಗಳನ್ನು ನಡೆಸಿದೆ. ವಿಜಾಪುರ, ಇಂಡಿ, ಬಸವನಬಾಗೇವಾಡಿ, ಸಿಂಧಗಿ ಮುಂತಾದೆಡೆ ಮೆರವಣಿಗೆ, ಧರಣಿಗಳು ನಡೆದಿವೆ. ಇಷ್ಟಾದರೂ ಕೇಂದ್ರ-ರಾಜ್ಯ ಸರ್ಕಾರಗಳು ಪೂರ್ಣ ಪ್ರಮಾಣದಲ್ಲಿ ನೆರವಿಗೆ ಧಾವಿಸಿಲ್ಲ. ○

ಕಾಶ್ಮೀರ : ಮಾನವ ದುರಂತ

ಇಂದು ಕಾಶ್ಮೀರ ಮತ್ತೆ ಹತ್ತಿ ಉರಿಯತೊಡಗಿದೆ. ಮುಗ್ಧ ಜನರ ಹತ್ಯೆ, ಭಯೋತ್ಪಾದಕರು, ರಕ್ಷಣಾಪಡೆಗಳ ನಡುವಿನ ಕಾಳಗದಿಂದ ಪರಿಸ್ಥಿತಿ ಉದ್ವಿಗ್ನಗೊಂಡಿದೆ. ಆಗ್ರಾ ಶೃಂಗಸಭೆ ಬಳಿಕ ಪರಿಸ್ಥಿತಿ ಸುಧಾರಿಸಬಹುದೆಂಬುದು ಹುಸಿಯಾಗಿದೆ. ಈ ಸ್ಥಿತಿ ನಿರ್ಮಾಣವಾದದ್ದು ಹೇಗೆ? ಕಾಶ್ಮೀರದ ಸಮಸ್ಯೆಗೆ ಮದ್ದು ಗುಂಡುಗಳ ಹಾರಾಟ, ರಕ್ತದಕೋಡಿಯೊಂದೇ ಉಳಿದ ಭಾಷೆಯೇ? ಅಥವಾ ಬೇರೆ ಪರಿಹಾರದ ಮಾರ್ಗಗಳು ಇವೆಯೇ? ಈ ಬಗ್ಗೆ ವಿವರವಾಗಿ ವಿಶ್ಲೇಷಿಸಿದ್ದಾರೆ ತರಿಗಾಮಿಯವರು. ಅವರು ಬೆಂಗಳೂರಿಗೆ ಬಂದಿದ್ದಾಗ ಪತ್ರಿಕೆಗಾಗಿ ವಿಶೇಷ ಸಂದರ್ಶನ ವಿಶ್ವಕುಂದಾಪುರ ಅವರಿಂದ.



ಮಹಮ್ಮದ್ ಯೂಸುಫ್ ತರಿಗಾಮಿ

'ಕಾಶ್ಮೀರದಲ್ಲಿ ನಡೆಯುತ್ತಿರುವುದು ಮೇಲ್ನೋಟಕ್ಕೆ ಕಾಣುವಂತೆ ಭಯೋತ್ಪಾದನೆ ಹಾಗೂ ಅದನ್ನು ದಮನಿಸುವ ಕ್ರಿಯೆ ಅಷ್ಟೇ ಅಲ್ಲ; ಅದು ಮಾನವ ದುರಂತದ ವಿಷಚಕ್ರ'

ಹೀಗೆಂದು ಭಾವುಕರಾಗಿ ನುಡಿಯುತ್ತಲೇ ಜಮ್ಮು ಮತ್ತು ಕಾಶ್ಮೀರದಲ್ಲಿನ ಭಯಾನಕ ಪರಿಸ್ಥಿತಿಯನ್ನು ಮನಮುಟ್ಟುವಂತೆ ಬಿಚ್ಚಿಡುತ್ತಾರೆ ಮಹ್ಮದ್ ಯೂಸುಫ್ ತರಿಗಾಮಿ.

ಹಲವು ಬಾರಿ ಭಯೋತ್ಪಾದಕರ ದಾಳಿಗೆ ಒಳಗಾಗಿಯೂ ಬಚಾವಾಗಿ ಬಂದಿರುವ ತರಿಗಾಮಿ ಝಡ್ ವರ್ಗದ ಭದ್ರತೆ ಪಡೆದಿರುವ ರಾಜಕೀಯ ಧುರೀಣ. ಅವರು ಜಮ್ಮು ಮತ್ತು ಕಾಶ್ಮೀರ ವಿಧಾನಸಭೆಯಲ್ಲಿ ಎಡಪಕ್ಷಗಳನ್ನು ಪ್ರತಿನಿಧಿಸುತ್ತಿರುವ ಏಕೈಕ ಶಾಸಕ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಕಾರ್ಯದರ್ಶಿ ಹಾಗೂ ಕೇಂದ್ರ ಸಮಿತಿ ಸದಸ್ಯ.

ಚೆನ್ನೈನಲ್ಲಿ ನಡೆದ ದಕ್ಷಿಣ ಏಷ್ಯಾ ಶಾಂತಿ ಸಮ್ಮೇಳನದಲ್ಲಿ ಪಾಲ್ಗೊಂಡು ಶ್ರೀನಗರಕ್ಕೆ ತೆರಳುವ ಮಾರ್ಗವಾಗಿ ಬೆಂಗಳೂರಿಗೆ ಬಂದ ತರಿಗಾಮಿಯುವರ ಜತೆ ಮಾತನಾಡಿದಾಗ ಮೂಡಿಬಂದ ಅಭಿಪ್ರಾಯಗಳ ಸಾರವಿದು.

ದಿನ ದಿನ ಎನ್ನುವಂತೆ ಕಾಶ್ಮೀರ ಕಣಿವೆಯಲ್ಲಿ ಮುಗ್ಧ ಜನರ ಹತ್ಯೆ ನಡೆಯುತ್ತಿರುವುದೂ ಸೇರಿದಂತೆ ಕಾಶ್ಮೀರದ ವಿದ್ಯಮಾನಗಳು ತುಂಬಾ ಗಂಭೀರ ಸ್ವರೂಪ ತಾಳುತ್ತಿದೆ. ಇದೀಗ ಪ್ರಾದೇಶಿಕ ಎಲ್ಲೆಯನ್ನು ಮೀರಿದೆ. ಒಂದು ಸ್ಥಳೀಯ ವಿಷಯವಾಗಿ ಉಳಿದಿಲ್ಲ. ಇತರೆಡೆ ಗಮನವನ್ನು ಸೆಳೆಯುತ್ತಿದೆ ಎಂದರೆ ಪರಿಸ್ಥಿತಿಯ ಗಂಭೀರತೆ ಅರ್ಥವಾಗುತ್ತದೆ ಎನ್ನುತ್ತಾರೆ ತರಿಗಾಮಿ.

ಕಾಶ್ಮೀರದ ಉಗ್ರಗಾಮಿ ಚಳವಳಿಯಲ್ಲಿ ಈಗ ಕಾಶ್ಮೀರೇತರ ಜನರ ಕೈಮೇಲಾಗಿದೆ. ಪಾಕಿಸ್ತಾನದಲ್ಲಿ ನೆಲೆ ಹೊಂದಿರುವ ಲಷ್ಕರ್-ಇ-ತೋಯಿಬಾ, ಅಲ್ ಬದರ್ ಮೊದಲಾದ ಸಂಘಟನೆಗಳೇ ಈಗ ಅಲ್ಲಿ ಅಟ್ಟಹಾಸ ಮಾಡುತ್ತಿವೆ ಎಂದವರು ವಿವರಿಸುತ್ತಾರೆ. ಪರಿಸ್ಥಿತಿ ಹದಗೆಡುತ್ತಿದ್ದರೂ ಭಾರತ ಸರಕಾರ ಕೈಗೊಳ್ಳುತ್ತಿರುವ ಕ್ರಮಗಳು ಏನೇನೂ ಸಾಲದು; ಅಷ್ಟೇ ಅಲ್ಲ ಅವು ಗೊಂದಲದ ಗೂಡಾಗಿದೆ ಎಂದೂ ಅವರು ಟೀಕಿಸುತ್ತಾರೆ. ಪರಿಸ್ಥಿತಿಯನ್ನು ನಿಭಾಯಿಸಲು ಈ ಕಾರ್ಯತಂತ್ರದಲ್ಲಿ ಆಮೂಲಾಗ್ರ ಬದಲಾವಣೆ ಅಗತ್ಯ ಎಂದು ಪ್ರತಿಪಾದಿಸುತ್ತಾರೆ.

ಪೋಖ್ರಾನ್ ಸ್ಫೋಟ

ಪೋಖ್ರಾನ್‌ನಲ್ಲಿ ಬಿಜೆಪಿ ನೇತೃತ್ವದ ಸರಕಾರ ನಡೆಸಿದ ಅಣುಬಾಂಬ್ ಸಾಧನ ಸ್ಫೋಟದಿಂದಾಗಿ ದೇಶಕ್ಕೇನೂ ಸೇವೆ ಸಲ್ಲಿಸಿದಂತಾಗಲಿಲ್ಲ. ಈ ಸ್ಫೋಟದಿಂದಾಗಿ ಈ ಪ್ರದೇಶದ ವಾತಾವರಣದ ಉದ್ವಿಗ್ನತೆ ಹೆಚ್ಚಿತೇ ಹೊರತು ಇನ್ನೇನೂ ಸಾಧನೆಯಾಗಲಿಲ್ಲ. ಪೋಖ್ರಾನ್‌ಗೆ ಪ್ರತಿಯಾಗಿ ಪಾಕಿಸ್ತಾನವೂ ಅಣುಬಾಂಬ್ ಸಾಧನ ಸ್ಫೋಟಿಸಿದ್ದರಿಂದ ಸನ್ನಿವೇಶದಲ್ಲಿ ಗಂಭೀರ ಬದಲಾವಣೆ ಉಂಟಾಯಿತು. ವಾಸ್ತವವಾಗಿ ಕಾಶ್ಮೀರದ ಪರಿಸ್ಥಿತಿ ಹದಗೆಡುವುದಕ್ಕೆ ಅದು ನೆರವಾಯಿತು ಎಂದು ಸೋದಾಹರಣವಾಗಿ ಅವರು ವಿವರಿಸುತ್ತಾರೆ. ಉಗ್ರಗಾಮಿ ಸಂಘಟನೆಗಳ ಸಂಖ್ಯೆ ಹೆಚ್ಚಿರುವುದರತ್ತ ಅವು ಬೆರಳು ತೋರಿಸುತ್ತಾರೆ .

ಕೇವಲ ಭದ್ರತಾ ಪಡೆಗಳ ಸಂಖ್ಯೆಯ ಹೆಚ್ಚಳದಿಂದ ಕಾಶ್ಮೀರದ ಪರಿಸ್ಥಿತಿ ಸುಧಾರಿಸಲು ಸಾಧ್ಯವಿಲ್ಲ ಎಂಬುದು ಅವರ ಬಲವಾದ ನಂಬಿಕೆ. ಅತ್ಯಂತ ದಿಟ್ಟ ರಾಜಕೀಯ ಕ್ರಮಗಳನ್ನು ಅತ್ಯಗತ್ಯ ಎನ್ನುತ್ತಾರೆ.

ಕಳೆದ ಮೂರ್‍ನಾಲ್ಕು ತಿಂಗಳಲ್ಲಿ ಅತಿ ಹೆಚ್ಚಿನ ಭಯೋತ್ಪಾದಕರನ್ನು ಕೊಲ್ಲಲಾಗಿದೆ ಎಂಬ ಕೇಂದ್ರ ಸರಕಾರದ ಹೇಳಿಕೆಯತ್ತ ಗಮನ ಸೆಳೆದಾಗ ಇಂಥ ಅಂಕಿಸಂಖ್ಯೆ ಆಟದಿಂದ ಏನೂ ಆಗುವುದಿಲ್ಲ ಎನ್ನುತ್ತಾ ಸುಮಾರು ಒಂದು ಲಕ್ಷ ಭದ್ರತಾಪಡೆ ಸಿಬ್ಬಂದಿ ಕಾಶ್ಮೀರದಲ್ಲಿ ನಿಯೋಜಿತರಾಗಿದ್ದರೂ ಅಲ್ಲೇಕೆ ಉಗ್ರವಾದವನ್ನು ಮಟ್ಟಹಾಕಲು ಆಗಲಿಲ್ಲ ಎಂದು ಪ್ರಶ್ನಿಸುವ ತರಿಗಾಮಿ, ಆದ್ದರಿಂದಲೇ ರಾಜಕೀಯ ಉಪಕ್ರಮಗಳ ಅಗತ್ಯ ಎಲ್ಲಕ್ಕಿಂತ ಮಹತ್ವವಾದುದು ಎನ್ನುತ್ತಾರೆ.

ಜಾತ್ಯಾತೀತ ಭಾರತ ಮತ್ತು ಮುಸ್ಲಿಂ ಪಾಕಿಸ್ತಾನ

1947ರ ದೇಶ ವಿಭಜನೆಯ ಸಂದರ್ಭದಲ್ಲಿ ಜಮ್ಮು ಮತ್ತು ಕಾಶ್ಮೀರ ಭಾರತದಲ್ಲೇ ಉಳಿದ ಐತಿಹಾಸಿಕ ಮಹತ್ವದತ್ತ ಅವರು ಗಮನ ಸೆಳೆಯುತ್ತಾರೆ. ಕೇವಲ ಒಂದು ಒಡಂಬಡಿಕೆಯಿಂದಾಗಿ ಕಾಶ್ಮೀರ ಬಾರತವನ್ನು ಸೇರಲಿಲ್ಲ. 'ಮುಸ್ಲಿಂ ಪಾಕಿಸ್ತಾನ'ದ ಬದಲು 'ಜಾತ್ಯತೀತಭಾರತ'ದಲ್ಲಿ ಉಳಿಯಬೇಕೆಂಬ ಕಾಶ್ಮೀರಿ ಜನತೆಯ ಹಂಬಲವೇ ಇದಕ್ಕೆ ಪ್ರಮುಖ ಕಾರಣವಾಯಿತು ಎಂದು ಅವರು ವಿವರಿಸಿದರು.

ಅದಕ್ಕೆ ಪ್ರತಿಯಾಗಿ ಕಾಶ್ಮೀರಿಗಳಿಗೆ ನೀಡಲಾದ ಸಾಂವಿಧಾನಿಕ ಆಶ್ವಾಸನೆಯನ್ನು ಈಡೇರಿಸುವಲ್ಲಿ ಆಗಿರುವ ವಿಳಂಬ ಹಾಗೂ ವೈಫಲ್ಯದಿಂದಾಗಿ ಇಂದಿನ ಸನ್ನಿವೇಶ ನಿರ್ಮಾಣವಾಗಿದೆ. ಸಂವಿಧಾನದ 370ನೇ ವಿಧಿಯ ಅನುಷ್ಠಾನ ಸೂಕ್ತವಾಗಿ ಆಗದಿರುವುದು ದೊಡ್ಡ ಹೊಡೆತ. ಅಷ್ಟೇ ಅಲ್ಲ ಅದು ಸಂವಿಧಾನಕ್ಕೆ ಮಾಡಿದ ಅಪಚಾರವೂ ಆಗಿದೆ ಎಂದು ಸ್ಪಷ್ಟ ಮಾತುಗಳಲ್ಲಿ ತರಗಾಮಿ ಹೇಳುತ್ತಾರೆ.

ಸಂವಿಧಾನದ 370ನೇ ವಿಧಿಯನ್ನು ದುರ್ಬಲಗೊಳಿಸಿರುವುದರಿಂದ ಜಮ್ಮು ಮತ್ತು ಕಾಶ್ಮೀರ ಹಾಗೂ ಭಾರತ ನಡುವಿನ ಸಂಬಂಧವೇ ದುರ್ಬಲಗೊಂಡಿದೆ ಎಂದು ವಿಷಾದಿಸುತ್ತಾರೆ. ರಾಜ್ಯ ಮತ್ತು ಕೇಂದ್ರ ಸರಕಾರಗಳೆರಡರಿಂದಲೂ ಆಗಿರುವ ಅನ್ಯಾಯವನ್ನು ಸರಿಪಡಿಸಲು ಕ್ರಮಗಳನ್ನು ಕೈಗೊಳ್ಳಬೇಕು ಎನ್ನುತ್ತಾರೆ.

ಸಂವಿಧಾನದ 370ನೇ ವಿಧಿಯನ್ನು ರದ್ದುಮಾಡಬೇಕೆಂಬ ಸಂಘ ಪರಿವಾರದ ರಾಷ್ಟ್ರೀಯ ಪ್ರಜಾಸತ್ತಾತ್ಮಕ ರಂಗದ (ಎನ್‌ಡಿಎ) ಜತೆ ಫರೂಕ್ ಅಬ್ದುಲ್ಲಾರ ನ್ಯಾಷನಲ್ ಕಾನ್ಫರೆನ್ಸ್ ಕೈ ಜೋಡಿಸಿರುವುದಕ್ಕೆ ಅವರಿಗೆ ಅಸಾಧ್ಯ ಕೋಪವಿದೆ. ಜಮ್ಮು ಮತ್ತು ಕಾಶ್ಮೀರ ವಿಧಾನಸಭೆಯಲ್ಲೇ ಅವರು ಇದನ್ನು 'ಅಪವಿತ್ರ ಮೈತ್ರಿ' ಎಂದು ಜರೆದಿದ್ದರು.


ಕೇವಲ ಅಧಿಕಾರದ ದೃಷ್ಟಿಯಿಂದ ಇಂಥ ಗೆಳೆತನ ಮಾಡಿಕೊಂಡಿರುವ ನ್ಯಾಷನಲ್ ಕಾನ್ಫರೆನ್ಸ್ ಸರಕಾರದಿಂದ ಹೆಚ್ಚೇನನ್ನು ನಿರೀಕ್ಷಿಸಲು ಆಗುವುದಿಲ್ಲ ಎನ್ನುತ್ತಾರೆ.

ಅತ್ತ ದರಿ, ಇತ್ತ ಪುಲಿ

ವಾಸ್ತವವಾಗಿ ಕಾಶ್ಮೀರಿ ಜನತೆಗೆ ಭಯೋತ್ಪಾದಕರು ಸಮಸ್ಯೆಯೋ ಭದ್ರತಾಪಡೆಯವರೋ ಎಂಬ ಪ್ರಶ್ನೆಗೆ ತರಿಗಾಮಿ ಮಾರ್ಮಿಕ ಉತ್ತರ ನೀಡುತ್ತಾರೆ. ಕಾಶ್ಮೀರಿ ಜನರು 'ಅತ್ತದರಿ ಇತ್ತಪುಲಿ' ಎಂಬಂಥ ಪರಿಸ್ಥಿತಿಯಲ್ಲಿ ಸಿಲುಕಿ ತೊಳಲಾಡುತ್ತಿದ್ದಾರೆ. ಸಮಸ್ಯೆಯಿಂದಾಗಿ ತೊಂದರೆಗೆ ಒಳಗಾಗದ ಒಂದೇ ಒಂದು ಕುಟುಂಬವನ್ನು ನೀವು ಕಾಶ್ಮೀರದಲ್ಲಿ ಕಾಣಲಾರಿರಿ ಎನ್ನುತ್ತಾರವರು. ಭದ್ರತಾ ಪಡೆಗಳನ್ನು ರಕ್ಷಣಾ ಪಡೆಗಳನ್ನು ಪ್ರಚೋದಿಸುವುದು ಭಯೋತ್ಪಾದಕರ ತಂತ್ರ. ಅದಕ್ಕಾಗಿ ಅವರು ಮುಗ್ಧ ಜನರನ್ನು ದಾಳವಾಗಿ ಬಳಸಿಕೊಳ್ಳುತ್ತಾರೆ. ಅದೇ ವೇಳೆ, ಭದ್ರತಾಪಡೆಗಳು ಕೂಡ ಜನರ ಜತೆ ಅಮಾನವೀಯವಾಗಿ ನಡೆದುಕೊಳ್ಳುವುದು ದುರಂತದ ಇನ್ನೊಂದು ಮುಖವಾಗಿದೆ. ಭದ್ರತಾಪಡೆಗಳನ್ನು ಅವರ ಕೃತ್ಯಗಳಿಗೆ ಹೊಣೆಗಾರರನ್ನಾಗಿ ಮಾಡುವುದು ತುಂಬಾ ಅಗತ್ಯವಾಗಿದೆ ಎನ್ನುತ್ತಾರೆ.

ಕರ್ನಾಟಕ ಅಥವಾ ದೇಶದ ಇತರ ಭಾಗಗಳಂತೆ ದೊಡ್ಡ ಕೈಗಾರಿಕೆಗಳೇನನ್ನು ಹೊಂದದ ಕಾಶ್ಮೀರಕ್ಕೆ ಪ್ರವಾಸೋದ್ಯಮವೇ ಆರ್ಥಿಕ ಚಟುವಟಿಕೆಗಳ ಮೂಲಾಧಾರ. ಉಗ್ರರ ಉಪಟಳದಿಂದಾಗಿ ಅದಕ್ಕೂ ಕುತ್ತು ಬಂದಿದೆ. ಹೀಗಾಗಿ ರಾಜ್ಯಕ್ಕಾಗಿ ವಿಶೇಷ ಆರ್ಥಿಕ ಅಭಿವೃದ್ಧಿಯ ಪ್ಯಾಕೇಜ್ ರೂಪಿಸಬೇಕು. ಉಗ್ರಗಾಮಿಗಳ ಸಂಗ ತೊರೆದು ಬಂದ ಯುವಜನರಿಗಾಗಿ ಮತ್ತು ಉಗ್ರರ ಆಮಿಷಕ್ಕೆ ಯುವಜನತೆ ಬಲಿಯಾಗುವುದನ್ನು ತಡೆಯಲಿಕ್ಕಾಗಿ ಯುವಕರ ಪುನರ್ವಸತಿಗೆ ವಿಶೇಷ ಗಮನ ಕೊಡಬೇಕು ಎಂಬುದು ತರಿಗಾಮಿ ಸಲಹೆ.

ಬಿಡುವಿರದ ಕಾರ್ಯಕ್ರಮಗಳು: ಕುತೂಹಲಕಾರಿ ಸಂವಾದ, ಅಪೂರ್ವ ಸ್ಪಂದನ



ಯೂಸೂಫ್ ತರಿಗಾಮಿ ಬೆಂಗಳೂರಿಗೆ ಬಂದದ್ದು ಆಕಸ್ಮಿಕ. ಯಾವುದೇ ನಿಗದಿತ ಕಾರ್ಯಕ್ರಮವಿರಲಿಲ್ಲ. ಆದರೆ ಅವರು ಬರುವ ವಿಷಯ ತಿಳಿದಾಗ ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಲು ಮುಂದಾದಾಗ ಹೇಗಾಗುವುದೋ ಎಂಬ ಆತಂಕವಿತ್ತು. ಆದರೆ ಎಲ್ಲಾ ಕಡೆ ಯಶಸ್ವಿ ಕಾರ್ಯಕ್ರಮ. ಆಗಸ್ಟ್ 7 ಮತ್ತು 8ರಂದು ಎರಡೂ ದಿನಗಳೂ ಬಿಡುವಿಲ್ಲದ ಕಾರ್ಯಕ್ರಮಗಳು. 7 ರಂದು ಬೆಂಗಳೂರು ವಿಶ್ವವಿದ್ಯಾಲಯದ ರಾಜಕೀಯ ವಿಜ್ಞಾನದ ವಿಭಾಗದಲ್ಲಿ, ಸಂಜೆ ಎಪಿಎಸ್ ಸಂಜೆ ಕಾಲೇಜಿನಲ್ಲಿ ಅತ್ಯಂತ ಯಶಸ್ವಿ ಸಂವಾದದ ಸಭೆಗಳು. ನಡುನಡುವೆ ಬಿಡುವು ಸಿಕ್ಕಾಗಲೆಲ್ಲಾ ರಾತ್ರಿಯವರೆಗೂ ಪತ್ರಿಕಾ ಮಾಧ್ಯಮದವರಿಂದ ವಿಶೇಷ ಸಂದರ್ಶನಗಳು. 8 ರಂದು ಪ್ರೆಸ್‌ಕ್ಲಬ್‌ನಲ್ಲಿ ಕಿಕ್ಕಿರಿದ ಪತ್ರಿಕಾಗೋಷ್ಠಿ, ಸಂದರ್ಶನಗಳು. ನಂತರ ಕರ್ನಾಟಕ, ವಿಧಾನಸೌಧ ವೀಕ್ಷಣೆ, ಸೌಹಾರ್ದ ಭೇಟಿ. ಸಂಜೆ ಬಬ್ಬೂರು ಗಿಡ್ಡಣ್ಣ ಹಾಲ್‌ನಲ್ಲಿ ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿಯ ಆಶ್ರಯದಲ್ಲಿ ಸಭೆ. ಅಧ್ಯಕ್ಷತೆ ರಾಜ್ಯ ಕಾರ್ಯದರ್ಶಿ ಕಾಂ. ಸೂರಿಯವರು. ಇಲ್ಲೂ ಅಲ್ಪಾವಧಿಯಲ್ಲೇ ನೂರಾರು ಸಂಗಾತಿಗಳು ಪಾಲ್ಗೊಂಡರು, ಚರ್ಚಿಸಿದರು. ಈ ಸಭೆಯಲ್ಲಿ ಅವರಾಡಿದ ಮಾತುಗಳಲ್ಲಿ ಕೆಲವನ್ನು ಇಲ್ಲಿ ಸಂಕ್ಷಿಪ್ತವಾಗಿ ನೀಡಲಾಗಿದೆ.

ಅಂದಿನ ಮಹಾರಾಜ ಹರಿಸಿಂಗ್ ಭೂಮಾಲಿಕ, ಪಾಳೆಗಾರರ ರಕ್ಷಕನಾಗಿದ್ದ. ದೇಶದೊಳಗೆ ಕ್ವಿಟ್ ಇಂಡಿಯಾ ಚಳುವಳಿ ನಡೆಯುತ್ತಿರುವಾಗ, ಕಾಶ್ಮೀರದೊಳಗೆ ಮಹಾರಾಜ ಹರಿಸಿಂಗ್ ವಿರುದ್ಧ ಕ್ವಿಟ್ ಕಾಶ್ಮೀರ ಚಳುವಳಿ ನಡೆಯುತ್ತಿತ್ತು. ಈ ಮಹಾರಾಜ ಬ್ರಿಟಿಶರೊಂದಿಗೆ ಕೈ ಜೋಡಿಸಿದ್ದ. ಆರ್.ಎಸ್‌ಎಸ್, ಅಂದಿನ ಪ್ರಜಾಪರಿಷತ್ ಇಂತಹ ಮಹಾರಾಜನಿಗೆ ಬೆಂಬಲಿಸುತ್ತಿತ್ತು. ಈಮಹಾರಾಜ ಸ್ವತಂತ್ರ ರಾಷ್ಟ್ರವಾಗಿ ಉಳಿಯಲು ಹವಣಿಸುತ್ತಿದ್ದ. ಭಾರತದ ಜೊತೆಗೆ ಯಾವುದೇ ಒಪ್ಪಂದಕ್ಕೆ ಸಿದ್ಧವಿರಲಿಲ್ಲ. ಆದರೆ ಪಾಕಿಸ್ತಾನದ ಜೊತೆ `Stand Still' ಒಪ್ಪಂದಕ್ಕೆ ಹವಣಿಸಿದ್ದ. ಕಾಶ್ಮೀರದ ಜನತೆ ಹೋರಾಟ ತೀವ್ರವಾಗಿ ಯಶಸ್ವಿಯಾದಾಗ ಮೂರು ತಿಂಗಳು ಕಾಶ್ಮೀರ ಯಾವುದಕ್ಕೂ ಸೇರದೆ ಸ್ವತಂತ್ರವಾಗಿತ್ತು.

ಇಂತಹ ಹೋರಾಟದ ನಾಯಕತ್ವನ್ನು ಅಂದು ಕಾಶ್ಮೀರಿ ಸಿಂಹವೆಂದು ಕರೆಯಲಾಗುತ್ತಿದ್ದ ಶೇಖ್ ಅಬ್ದುಲ್ಲಾರವರು ವಹಿಸಿದ್ದರು. ಅಂತಿಮವಾಗಿ ಕಾಶ್ಮೀರದ ಜನತೆ ತೀರ್ಮಾನಿಸಿದ್ದ ಮುಸ್ಲಿಂ ಪಾಕಿಸ್ತಾನದಲ್ಲಿ ಉಳಿಯಲು ಅಲ್ಲ ಬದಲಾಗಿ 'ಸೆಕ್ಯುಲರ್' ಭಾರತದಲ್ಲಿ.

1 ಲಕ್ಷ ಮಿಲಿಟರಿ ಸೈನಿಕರು 2/3 ಭಾಗ ಬಿಎಸ್‌ಎಫ್ ಯೋಧರು ಕಾಶ್ಮೀರದಲ್ಲಿ ಬೀಡು ಬಿಟ್ಟಿದ್ದಾರೆ. ಗಡಿಯಲ್ಲಿ ಸೈನ್ಯ ಬೇಕು ನಿಜ ಆದರೆ ಇದೇ ಸಮಸ್ಯೆಗೆ ಪರಿಹಾರವಲ್ಲ.

ಬದಲಾಗಿ ಕಾಶ್ಮೀರ ಜನತೆಯಲ್ಲಿ ದೃಢನಂಬಿಕೆ ಉಂಟಾಗುವ, ಅವರ ವಿಶ್ವಾಸವನ್ನು ಗಳಿಸುವ, ಗೆಲ್ಲುವುದು ಆಗಬೇಕು. ಜನತೆಯು ಸರ್ಕಾರದ ಕ್ರಮಗಳಿಂದಾಗಿ ದೂರ ಹೋದರೆ ಅದು ಪಾಕಿಸ್ತಾನ ಮತ್ತು ಇತರೆ ಶಕ್ತಿಗಳಿಗೆ ಕುಮ್ಮಕ್ಕು ನೀಡಿ ಸಹಾಯವಾಗಿ ಬಿಡುತ್ತದೆ. ಆದ್ದರಿಂದ ಸರ್ಕಾರ ರಾಜಕೀಯ ಕ್ರಮವನ್ನು ಕೈಗೊಳ್ಳಬೇಕು.

ಕಾಶ್ಮೀರದ ಯಾವ ಓಣಿ, ಬೀದಿ ಪ್ರದೇಶಗಳು ಹಾನಿಗೊಳಗಾಗದೇ, ನಾಶಕ್ಕೀಡಾಗದೆ ಉಳಿದಿಲ್ಲ. ಇಂದು ಕಾಶ್ಮೀರದಲ್ಲಿ ಶಾಂತಿ ಬೇಕಿದೆ. ಕಾಶ್ಮೀರಕ್ಕೆ ನಿಜವಾಗಿಯೂ ಸ್ವಾಯತ್ತತೆ ಬೇಕಿದೆ.

ವಾಜಪೇಯಿ ಹೇಳುತ್ತಾರೆ, ಈ ಪ್ರಶ್ನೆಯನ್ನು ಸಂವಿಧಾನದ ವ್ಯಾಪ್ತಿಯಲ್ಲಿ ಮಾತ್ರವಲ್ಲ,

ಪುಟ 11 ಕ್ಕೆ

ವಿಷಚಕ್ರ

ಮುಸ್ಲಿಂ ಪಾಕಿಸ್ತಾನಕ್ಕಿಂತ ಜಾತ್ಯತೀತ ಭಾರತದಲ್ಲಿ ಉಳಿಯುವುದಕ್ಕೆ ಆದ್ಯತೆ ನೀಡಿದ ಜಮ್ಮು ಮತ್ತು ಕಾಶ್ಮೀರ ಜನತೆಯ ಆಶೋತ್ತರಗಳನ್ನು ಗೌರವಿಸಿ ಹಾಗೂ ವಿಶೇಷ ಸ್ಥಾನಮಾನ ನೀಡುವ ಸಾಂವಿಧಾನಿಕ ಆಶ್ವಾಸನೆಗೆ ಮಾನ್ಯತೆ ಕೊಟ್ಟು ಕಾಶ್ಮೀರಕ್ಕೆ ಹೆಚ್ಚು ಸ್ವಾಯತ್ತತೆ ನೀಡುವುದೇ ಹೆಚ್ಚಿನ, ನೈಜ ಸ್ವಾಯತ್ತತೆ ಕನಿಷ್ಟ ಅಗತ್ಯ. ಇದು ಆಗಲೇ ತುಂಬಾ ವಿಳಂಬವಾಗಿದೆ. ಇನ್ನೂ ವಿಳಂಬವಾದಷ್ಟೂ ಸ್ವಾಯತ್ತತೆಯ ಈ ಪ್ರಸ್ತಾವವೂ ಅಂಗೀಕಾರಕ್ಕೆ ಅರ್ಹವಾಗದಿರುವ ದಿನ ಬಂದರೂ ಬರಬಹುದು ಎಂದು ಎಚ್ಚರಿಸುವ ತರಿಗಾಮಿ, ದೇಶದ ಏಕತೆಗೆ ಭಂಗ ಬರುವಂಥ ಅಂಥ ಸನ್ನಿವೇಶಕ್ಕೆ ಎಡೆ ಆಗುವುದು ಬೇಡ ಎಂಬ ಆಶಯ ಹೊತ್ತಿದ್ದಾರೆ.

ಸ್ವಾಯತ್ತತೆಯ ಸಂಬಂಧ ಜಮ್ಮು ಮತ್ತು ಕಾಶ್ಮೀರ ವಿಧಾನ ಸಭೆ ಅಂಗೀಕರಿಸಿದ ನಿರ್ಣಯವನ್ನು ಎನ್.ಡಿ.ಎ. ಸರಕಾರ ತಿರಸ್ಕರಿಸಿದ್ದು ವಿವೇಕದ ಕೆಲಸವಲ್ಲ. ಇದರಿಂದ ಅನಾಹುತದ ಬಾಗಿಲನ್ನು ನಾವೇ ತೆರೆದಂತಾಗುತ್ತದೆ ಎಂದರು.

ಸ್ವಾಯತ್ತೆ ಹಾಗೂ ರಾಜ್ಯದ ಆರ್ಥಿಕ ಪುನಶ್ಚೇತನಕ್ಕೆ ಎಚ್.ಡಿ.ದೇವೇಗೌಡ ನೇತೃತ್ವದ ಸಂಯುಕ್ತ ರಂಗ ಸರಕಾರ ಕೈಗೊಂಡಿದ್ದ ಕೆಲವು ಕ್ರಮಗಳು ಮುಂದುವರಿಯದಿದ್ದುದು ವಿಷಾದಕರ ಎಂದರು.

ಆಗ್ರಾ ಶೃಂಗ ಮಹತ್ವದ ಹೆಜ್ಜೆ

ಭಾರತದ ಪ್ರಧಾನಿ ಎ.ಬಿ. ವಾಜಪೇಯಿ ಮತ್ತು ಪಾಕಿಸ್ತಾನ ಅಧ್ಯಕ್ಷ ಜನರಲ್ ಪರ್ವೆಜ್ ಮುಷರ್ರಫ್ ನಡುವಿನ ಆಗ್ರಾ ಶೃಂಗ ಸಭೆ ಒಂದು ಮಹತ್ವದ ಹೆಜ್ಜೆ ಎಂದು ಹೇಳುತ್ತಾರೆ ಶೃಂಗಸಭೆಯ ಹಲವು ಪೂರ್ವಭಾವಿ ತಯಾರಿಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದ ತರಿಗಮಿ.

ಈ ಶೃಂಗಸಭೆಯಿಂದ ಭಾರೀಯೇನನ್ನು ಸಾಧಿಸಲಾಗದಿದ್ದರೂ ಉಭಯ ದೇಶಗಳ ನಡುವೆ ಈ ಶೃಂಗ ನಡೆದಿದ್ದೇ ದೊಡ್ಡ ಸಂಗತಿ. ವಿದೇಶಿ ಪ್ರೇರಿತ ಭಯೋತ್ಪಾದನೆ ನಿಲ್ಲದೆ ಹಾಗೂ ಪಾಕ್‌ನಲ್ಲಿ ಪ್ರಜಾಪ್ರಭುತ್ವ ನೆಲಸದೆ ಆ ದೇಶದ ಜತೆ ಮಾತುಕತೆ ಬಿಲ್‌ಕುಲ್ ಸಾಧ್ಯವಿಲ್ಲ ಎಂದು ಬಿಜೆಪಿ ಹೇಳುತ್ತಿತ್ತು. ಆದರೆ ಮಾತುಕತೆ ಅಗತ್ಯ ಎಂದು ತಮ್ಮ ಪಕ್ಷ ಪ್ರತಿಪಾದಿಸುತ್ತಿತ್ತು ಎಂದು ಹೇಳಿದರು.

ದಿನ ಬೆಳಗಾಗುವುದರೊಳಗೆ ಯಾವುದೇ ಸಮಸ್ಯೆ ಪರಿಹಾರವಾಗದು. ಅದೇ ರೀತಿ ಕಾಶ್ಮೀರ ವಿಷಯ ಕೂಡ. ಶೃಂಗ ಸಭೆ ಒಂದು ಉತ್ತಮ ಆರಂಭ ಎಂದರು.

ಭಯೋತ್ಪಾದನೆ ಮತ್ತು ಭಯೋತ್ಪಾದನೆ ವಿರೋಧಿ ಕಾರ್ಯಾಚರಣೆ ನಡುವೆ ಸಿಲುಕಿದ ಜಮ್ಮು ಮತ್ತು ಕಾಶ್ಮೀರ ಜನತೆಯದು 'ಸಾಮೂಹಿಕ ದುರಂತ' ಎಂದು ವಿಷಾದದಿಂದ ಬಣ್ಣಿಸುವ ಅವರು, ಇದೊಂದು ರಾಜಕೀಯ ಬಿಕ್ಕಟ್ಟು ಆಗಿದ್ದು ರಾಜಕಾರಣಿಗಳು ಮತ್ತು ಇಡೀ ದೇಶದ ಜನತೆ ಇದರ ಪರಿಹಾರಕ್ಕೆ ಮುಂದಾಗಬೇಕು ಎನ್ನುತ್ತಾರೆ.

ಯುಸೂಫ್ ತರಿಗಾಮಿ ರಾಜ್ಯ ವಿಧಾನಸಭೆಯಲ್ಲಿ ಅನಂತನಾಗ್ ಜಿಲ್ಲೆಯ ಕುಲ್ಗಾಮ್ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದಾರೆ. ಭಯೋತ್ಪಾದನೆ ವಿರೋಧಿ ಚಟುವಟಿಕೆಗಳಲ್ಲಿ ಇವರು ಸದಾನಿರತರು. ಇದರ ಪರಿಣಾಮವಾಗಿ ಇವರು ಭಯೋತ್ಪಾದಕರ ಹಾಗೂ ಐಎಸ್‌ಐನ ಹಿಟ್ ಲಿಸ್ಟ್‌ನಲ್ಲಿದ್ದಾರೆ, ಇವರ ಮಾವ ದುರುಳರ ಗುಂಡಿಗೆ ಬಲಿಯಾಗಿದ್ದಾರೆ. ಸಿಪಿಐ(ಎಂ) ನ ಅನೇಕ ಮುಸ್ಲಿ ಸಂಗಾತಿಗಳೂ ಉಗ್ರಗಾಮಿಗಳಿಂದ ಹತರಾಗಿದ್ದಾರೆ ಎಂದು ಅವರು ವಿವರಿಸುತ್ತಾರೆ.

ಜಮ್ಮು ಮತ್ತು ಕಾಶ್ಮೀರ ಕೇವಲ ಒಂದು ರಾಜ್ಯ ಅಥವಾ ಪ್ರದೇಶದ ಪ್ರಶ್ನೆ ಅಲ್ಲ. ಅದು ಇಡೀ ದೇಶಕ್ಕೆ ಸಂಬಂಧಿಸಿದ್ದು. ತಮ್ಮದೇ ಸೋದರ ಸೋದರಿಯರ ಬದುಕಿನ ಬಗ್ಗೆ ದೇಶಬಾಂಧವರು ಗಂಭೀರವಾಗಿ ಚಿಂತಿಸುವುದು ಅಗತ್ಯ. ದೃಢವಾದ ಕ್ರಮ ಕೈಗೊಳ್ಳುವಂತೆ ಕೇಂದ್ರ ಸರಕಾರದ ಮೇಲೆ ಒತ್ತಡ ಹೇರುವಲ್ಲಿ ಕರ್ನಾಟಕ ಜನತೆಯೂ ಹಿಂದೆ ಬೀಳಲಾರರು ಎಂಬ ಆಶಯ ನನ್ನದು ಎಂದೂ ಅವರು ಹೇಳಿದರು.



ಈಶ್ವರ ನಾರಾಯಣ ಭಟ್ಟ

ರೈತರ ಆತ್ಮಹತ್ಯೆ: ಈಗ ಉತ್ತರಕನ್ನಡದ ಸರದಿ

ಸಾಲದ ಬಲೆಗೆ ಅಡಿಕೆ ರೈತ-ದಂಪತಿಗಳ ಆತ್ಮಹತ್ಯೆ

ಉತ್ತರ ಕನ್ನಡದಲ್ಲಿ ಸಾಲದ ಭಾದೆ ತಾಳದೇ ರೈತ ಕುಟುಂಬವೊಂದು ಆತ್ಮಹತ್ಯೆಗೀಡಾಯಿತು. ಇದು ಮೊದಲ ಬಲಿ. ಅಡಿಕೆ, ತೆಂಗು ಮುಂತಾದ ಫಸಲಿಗೆ ಬೆಲೆಯೇ ಇಲ್ಲದಿರುವಾಗ ಈ ಸಾವಿನ ಸರಣಿ ಆರಂಭಗೊಳ್ಳಬಹುದು. ಹಿಂದೆ ಕೇಂದ್ರದ ಆಮದು ರಫ್ತು-ನೀತಿ ವಿರುದ್ಧ ಆರಂಭದಲ್ಲೇ ಹೋರಾಟ ನಡೆಯುತ್ತಿರುವಾಗ ಈ ಸಮಸ್ಯೆಯನ್ನು ಬಗೆಹರಿಸುವುದಾಗಿ ಪುಂಗಿ ಊದಿ, ಭಾಷಣ ಬಿಗಿದ ರಾಜಕೀಯ ಮುತ್ಸದ್ದಿಗಳು ಈಗ ನಾಪತ್ತೆ ಆಗಿದ್ದಾರೆ ಅಥವಾ ಹೊಸ ವೇಷಕ್ಕೆ ಸಿದ್ಧರಾಗುತ್ತಿದ್ದಾರೆ. ಜನತೆ ಇವರನ್ನು ನಂಬಿ ಇನ್ನೂ ಕೂಡಬೇಕೆ ಅಥವಾ ಆತ್ಮವಿಶ್ವಾಸದಿಂದ ಹೋರಾಟಕ್ಕೆ ಇಳಿಯಬೇಕೆ ಎಂದು ಲೇಖಕರು ವಿಶ್ಲೇಷಿಸಿದ್ದಾರೆ.

ವಿಠ್ಠಲ್ ಭಂಡಾರಿ

ಈ ರಾಜ್ಯದಲ್ಲಿ ರೈತರು ಆತ್ಮಹತ್ಯೆ ಮಾಡಿಕೊಂಡು ಸಾಯುತ್ತಲೇ ಇದ್ದಾರೆ. ಹತ್ತಿ ಬೆಳೆದ ರೈತ, ತೊಗರಿ ಬೆಳೆದ ರೈತ, ರೇಷ್ಮೆ ಬೆಳೆದ ರೈತ ಹೀಗೆ...... ಹೊಸ ಸೇರ್ಪಡೆಯೆಂಬಂತೆ ಉತ್ತರ ಕನ್ನಡದ ಅಡಿಕೆ ಬೆಳೆದ ರೈತ ಇತ್ತೀಚಿಗೆ ಆತ್ಮಹತ್ಯೆ ಮಾಡಿಕೊಂಡು ಈ ದೇಶದ ಜನರ ಭವಿಷ್ಯಕ್ಕೆ ಕನ್ನಡಿ ಹಿಡಿದಿದ್ದಾರೆ.

ರೈತರು ಮತ ಕೊಟ್ಟಲು ಅವರು ವಿಷ ಇಟ್ಟರು

ಕೇಂದ್ರದಲ್ಲಿ ಆಡಳಿತ ನಡೆಸುತ್ತಿರುವ ಎನ್‌ಡಿಎ ಸರ್ಕಾರ ಮತ್ತು ಕರ್ನಾಟಕದ ಕಾಂಗ್ರೆ ಸರ್ಕಾರಗಳೆರಡೂ ತಾನು ರೈತ ಪರ ನೀತಿ ಜಾರಿಗೊಳಿಸುವುದಾಗಿ ಹೇಳುತ್ತಿವೆ. 'ರೈತರೆಂದರೆ ಈ ದೇಶದ ಆಸ್ತಿ, ಇಂತಹ ರೈತರು ನಮ್ಮ ಕೈಗೆ ಅಧಿಕಾರ ಕೊಟ್ಟಿದ್ದಾರೆ. ನಮ್ಮದು ರೈತ ಸರ್ಕಾರ' ಎಂದು ಘೋಷಣೆ ಹಾಕುತ್ತಿದ್ದಾರೆ. ಆದರೆ ರೈತರು ಮಾತ್ರ ಬದುಕಲು ಬೇರೆ ದಾರಿಕಾಣದೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಇಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ರೈತರು ಸಾಲದ ಬಲೆಗೆ ಸಿಕ್ಕಿ ಸಾಯುತ್ತಿದ್ದರೂ ಯಾವೊಬ್ಬ ಸಚಿವನೂ ನೈತಿಕ ಹೊಣೆ ಹೊತ್ತು ರಾಜಿನಾಮೆ ಕೊಟ್ಟಿಲ್ಲ. ರೈತರ ಸಾವಿಗೆ ಕಾರಣ ಅರಸುವ, ಪರಿಹರಿಸುವ ಪ್ರಾಮಾಣಿಕ ಪ್ರಯತ್ನ ಮಾಡಿಲ್ಲ. ರೈತರು ಇವರಿಗೆ 'ಮತ'ಕೊಟ್ಟರು, ಅವರು ರೈತರಿಗೆ ವಿಷ ಕೊಟ್ಟರು!

ಹೊನ್ನಾವರ ತಾಲೂಕಿನ ಚಿಕ್ಕನಕೋಡು ಗ್ರಾಮ ಪಂಚಾಯತ್ ವ್ಯಾಪ್ತಿಯ ಹೆರಾವಲಿಯಲ್ಲಿ ಅಡಿಕೆ ಬೆಳೆಯುತ್ತಿರುವ ರೈತ ದಂಪತಿಗಳಿಬ್ಬರು ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡ ದಾರುಣ ಘಟನೆ ಜುಲೈ 26 ರಂದು ಸಂಭವಿಸಿದೆ. ತನ್ನ ಜಮೀನಿನ



ಚಿತ್ರ: ದಿನೇಶ ಹೆಗಡೆ — ಭಟ್ಟರ ಪತ್ನಿ ನೇತ್ರಾವತಿ

ವಿಸ್ತರಣೆಗಾಗಿ ಮಾಡಿದ 6-7 ಲಕ್ಷ ರೂಪಾಯಿಗಳ ಸಾಲ ತೀರಿಸಲಾಗದೆ ರೈತ ಈಶ್ವರ ನಾರಾಯಣ ಭಟ್ಟ (40) ಮತ್ತು ಅವರ ಹೆಂಡತಿ ನೇತ್ರಾವತಿ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. 4 ವರ್ಷದ ಹಸುಳೆ ಪ್ರಸನ್ನ ಈಗ ಅನಾಥ(ಈ ದೇಶದ ಬಡ ರೈತರಂತೆ)

ಸುಧಾರಿಸಿಕೊಳ್ಳಬಯಸಿದ್ದ ಭಟ್ಟರು: ಈಶ್ವರಭಟ್ಟ ಇವರು ಮೊದಲಿನಿಂದಲೂ ಸಣ್ಣಪುಟ್ಟ ರೀತಿಯಲ್ಲಿ ಅಡಿಕೆ ವ್ಯಾಪಾರ ಮಾಡುತ್ತಿದ್ದವರು. ವ್ಯಾಪಾರ ಕೈಗೂಡದಿದ್ದಾಗ ಇದ್ದ ಭೂಮಿಯನ್ನು ವಿಸ್ತರಿಸಲು ಕೈ ಹಾಕಿದರು. ಹೇಗೋ ಅಡಿಕೆ-ತೆಂಗಿಗೆ ಧಾರಣೆ ಬರಬಹುದೆಂದು ಗುಡ್ಡ ಕಡಿದು ಅಡಿಕೆ ಗಿಡ ಹಾಕಿದರು. ಜಮೀನಿನ ವಿಸ್ತರಣೆಗಾಗಿ ಅನೇಕ ಕಡೆ ಸಾಲ ಮಾಡಿದರು. ಗಿಡವೂ ಬೆಳೆಯಿತು. ಆದರೆ ಇತ್ತೀಚಿನ ದಿನಗಳಲ್ಲಿ ಅಡಿಕೆ-ತೆಂಗಿನ ದರ ಸಂಪೂರ್ಣ ಕುಸಿದಿರುವುದರಿಂದ ಭಟ್ಟರ ಲೆಕ್ಕಾಚಾರ ತಲೆಕೆಳಗಾಗಿ ಸಾಲ ಬೆಳೆಯುತ್ತಲೇ ಹೋಯಿತು. 15 ಸಾವಿರ ರೂಪಾಯಿ(ಕ್ವಿಂಟಾಲಿಗೆ)ವರೆಗೆ ಏರಿದ್ದ ಅಡಿಕೆ 3000 ರೂ. ಗಳಿಗೆ ಇಳಿದಾಗ ಮತ್ತೆ ಏರುವ ಸೂಚನೆಯೇ ಇಲ್ಲದಿದ್ದಾಗ ಭೂಮಿ ಮಾಡಿ ಸುಧಾರಿಸಿಕೊಳ್ಳಬಯಸಿದ್ದ ಇವರ ಕನಸು ನುಚ್ಚು ನೂರಾಯಿತು. ಭೂಮಿ ಮಾಡಿ ಗೌರವಯುತ ಜೀವನ ನಡೆಸುವ ಕನಸು ಹೊತ್ತ ರೈತ ಅಂತಿಮವಾಗಿ ವಿಷ ಸೇವಿಸುವುದರೊಂದಿಗೆ ದಾರುಣವಾಗಿ ಅಂತ್ಯವಾಯಿತು.

ರೈತನ ಸ್ಥಿತಿಗೆ ಸಾಕ್ಷಿಯಾದ ಆತ್ಮಹತ್ಯೆ

ನಾಗರ ಪಂಚಮಿಯ ದಿನ ರಾತ್ರಿ ಊಟ ಮುಗಿಸಿ ತಮ್ಮ ಕೋಣೆ ಸೇರಿದ ದಂಪತಿಗಳು ಮರುದಿನ ಬೆಳಿಗ್ಗೆ ಏಳದೇ ಹೆಣವಾಗಿದ್ದರು. ಇಬ್ಬರೂ ವಿಷ ಸೇವಿಸಿ ಸಾಲದ ಸೂಲಕ್ಕೆ ಬಲಿಯಾದರು. ಕೃಷಿ ಪ್ರಧಾನ ದೇಶದ ರೈತನ ಸ್ಥಿತಿಗೆ ಸಾಕ್ಷಿಪ್ರಜ್ಞೆಯಾಗಿ ಮಗ ಪ್ರಸನ್ನನನ್ನು ಉಳಿಸಿ ಹೋಗಿದ್ದಾರೆ. ಆದರೆ ಮುಂದೊಂದು ದಿನವಾದರೂ ರೈತರ ಪಾಲಿಗೆ 'ಪ್ರಸನ್ನತೆ' ನಿಜ ಬದುಕಿನಲ್ಲಿ ಬರಬಹುದೆ? ಅಥವಾ ಸಾವಿನಲ್ಲಿಯೇ ಪ್ರಸನ್ನತೆಯನ್ನಷ್ಟೇ ಕಾಣಬೇಕಾಗಬಹುದೇ?

3-4 ತಿಂಗಳ ಹಿಂದಿನ 'ಐಕ್ಯರಂಗ' ಸಂಚಿಕೆಯಲ್ಲಿ ಉ.ಕ. ಜಿಲ್ಲೆಯ ರೈತರ ಬಗ್ಗೆ ಬರೆಯುತ್ತಾ ಅಲ್ಲಿ-ಇಲ್ಲಿ ಆತ್ಮಹತ್ಯೆಯ ಸುದ್ದಿ ಓದುವ ನಾವು ಕೆಲವೇ ವರ್ಷದಲ್ಲಿ ಉ.ಕ.ದಲ್ಲಿ ಕೂಡ ಅಡಿಕೆ ಬೆಳೆಗಾರ ಆತ್ಮಹತ್ಯೆ ಮಾಡಿಕೊಂಡ ಸುದ್ದಿ ಓದುವುದರಲ್ಲಿ ಅನುಮಾನ ಇಲ್ಲ. ಆದಷ್ಟು ಬೇಗ ನಾವು ಎಚ್ಚೆತ್ತುಕೊಂಡು ರಾಜಕೀಯ ಹಕ್ಕುಗಳನ್ನು, ಬದ್ಧತೆಯನ್ನು ಬದಿಗಿಟ್ಟು ಹೋರಾಟಕ್ಕೆ ಇಳಿಯ'ಬೇಕಾದ' ಅನಿವಾರ್ಯತೆ ಇದೆ ಎಂದು ಬರೆದಿತ್ತು. ಆದರೆ ವಿಶ್ಲೇಷಣೆ ಇಷ್ಟು ಬೇಗ ನಿಜವಾಗುತ್ತಿರುವುದು ಬೇಸರದ ಸಂಗತಿ.

ತಣ್ಣಗಾಗಿಸಿದ ಹೋರಾಟದ ಮನೋಭಾವ

ಸುಮಾರು 400 ರಷ್ಟಿರುವ ದೊಡ್ಡ ಭೂಹಿಡುವಳಿಗಾರರನ್ನು ಸೇರಿಕೊಂಡಂತೆ ಸುಮಾರು 141931 ರಷ್ಟಿರುವ ಭೂ ಹಿಡುವಳಿದಾರರು ಉ.ಕ.ದಲ್ಲಿ ಲುಂಗಿಯಗಲ ಭೂಮಿಯಲ್ಲಿ ಸಾಗುವಳಿ ಮಾಡಿ ಬದುಕುತ್ತಿದ್ದಾರೆ. ಕೃಷಿಯನ್ನೇ ನಂಬಿದ ಬಹುಸಂಖ್ಯೆಯ ಜನ ಇಲ್ಲಿ ಆಗುವ ಏರುಪೇರಿಗೆ ನಮ್ಮ ಜೀವವನ್ನೇ ಪಣವಾಗಿಡಬೇಕಾಗಿದೆ. ಈ ಜಿಲ್ಲೆಯಲ್ಲಿ ಒಟ್ಟು 9363 ಹೆಕ್ಟೇರ್ ಪ್ರದೇಶದಲ್ಲಿ ರೈತರು ಅಡಿಕೆ ಬೆಳೆಯುತ್ತಿದ್ದಾರೆ. ಆದರೆ ಅಡಿಕೆ ಬೆಲೆ ಪಾತಾಳಕ್ಕೆ ಇಳಿದಾಗಲೂ ಇಲ್ಲಿ ಹತಾಶೆಗಳೇ ತುಂಬಿದ್ದವು ಹೊರತಾಗಿ ಅದು ಹೋರಾಟವಾಗಿ ರೂಪಿತವಾಗಿ ನ್ಯಾಯ ಕೇಳಲಿಲ್ಲ. ರೈತರೆಲ್ಲಾ ಸಂಘಟಿತರಾಗಿ ಹೋರಾಟಕ್ಕೆ ಇಳಿಯುವ ಸಂದರ್ಭದಲ್ಲೆಲ್ಲಾ ಇಲ್ಲಿಯ ರಾಜಕಾರಣಿಗಳು ತಮ್ಮ ಬೇಳೆ ಬೇಯಿಸಿಕೊಳ್ಳಲು ರೈತರನ್ನು ತಪ್ಪು ದಾರಿಗೆಳೆದರು. ಬೀದಿಗಿಳಿಯಲು ಬಿಡಲೇ ಇಲ್ಲ. ರೈತರ ಅಧಃಪತನಕ್ಕೆ ಯಾರು ಕಾರಣರೋ, ಅವರನ್ನೇ ಕರೆಸಿ, ಮೆರೆಸಿ, ಉಪದೇಶ ಸ್ವೀಕರಿಸಿ ಹೋರಾಟದ ಮನೋಭಾವವನ್ನೇ ತಣ್ಣಗಾಗಿಸಿದರು. ಚುನಾವಣೆಯಲ್ಲಿ ಸೋತು ಸುಣ್ಣವಾದ ಜನರೆಲ್ಲಾ ಸೇರಿ ನಡೆಸಿದ ರಾಜಕೀಯ ಚದುರಂಗದಾಟದಲ್ಲಿ ರೈತರು ಪೇದೆಗಳಾದರು. ಮುಂದಳದಲ್ಲಿ ನಿಂತು ಯಾರದೋ ಹಿತಾಸಕ್ತಿಗೆ ಬಲಿಯಾದರು. ರಥವೇರಿ ಗಡ್ಡ ಕೆರೆಯುತ್ತಾ ಮುಗುಳ್ನಗುತ್ತಿದ್ದ ಅರಸು ಸುರಕ್ಷಿತವಾಗಿ ಇದ್ದಾನೆ. ಮತ್ತೆ ಜಯಘೋಷ ಮಾಡುವ ಜನರಿಗಾಗಿ ಕಾಯುತ್ತಿದ್ದಾನೆ.

ಪಾತಾಳ ಕಂಡ ಬೆಲೆ

ಎರಡು ವರ್ಷದ ಹಿಂದೆ ಉ.ಕ. ಜಿಲ್ಲೆಯ ಪ್ರಧಾನ ಬೆಳೆಯಾದ ಅಡಿಕೆಗೆ 13-14 ಸಾವಿರ ರೂ.ಗಳ ವರೆಗೆ ಬೆಲೆ ಇತ್ತು. ಆದರೆ ಕೇಂದ್ರ ಸರ್ಕಾರ ಡಬ್ಲ್ಯುಟಿಒ ದ ಒಪ್ಪಂದದ ಹಿನ್ನೆಲೆಯಲ್ಲಿ ಜಾರಿಗೆ ತಂದ ಮುಕ್ತ ಆಮದು ನೀತಿಯಿಂದಾಗಿ ಬೆಲೆ ಪಾತಾಳ ಕಂಡಿತು. ಬೇರೆ ದೇಶಗಳಿಂದ ದೊಡ್ಡ ಪ್ರಮಾಣದಲ್ಲಿ, ಕಡಿಮೆ ಬೆಲೆಯಲ್ಲಿ ಬರುವ ಅಡಿಕೆಯ ಮೇಲೆ ಕೇಂದ್ರದ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ನಿರ್ಬಂಧ ಹೇರಲು ವಿಫಲವಾಗಿರುವ ಹಿನ್ನಲೆಯಲ್ಲಿ ರೈತ ದಿವಾಳಿಯ ಸ್ಥಿತಿ ತಲುಪುವಂತಾಯಿತು. ತೆಂಗಿನ ಕತೆಯೂ ಹಾಗೆಯೇ ಆಗಿದೆ. ಎಣ್ಣೆ, ಕಾಯಿತುರಿ ಹೊರಗಿನಿಂದ ಬಂದು ರೈತರು ಅಸಹಾಯಕರಾದರು. ಇಂತಹ ಸಂದರ್ಭದಲ್ಲಿ ಸರ್ಕಾರ ರೈತರ ನೆರವಿಗೆ ಬರಬೇಕಾಗಿತ್ತು. ಸಾಲ ಮನ್ನಾ ಮಾಡುವುದೋ ಅಥವಾ ದೀರ್ಘಾವಧಿ ಸಾಲ ಮಾಡುವುದೋ, ಬಡ್ಡಿ ಮನ್ನಾ ಮಾಡುವುದೋ, ಬೆಳೆಗಳಿಗೆ ಬೆಂಬಲ ಬೆಲೆ ನಿಗದಿ ಮಾಡುವುದೋ ಅಥವಾ ಬೆಲೆಯ ಸ್ಥಿರತೆ ಕಾಯ್ದುಕೊಳ್ಳಲು ಬೇರೆ ಮಾರ್ಗವನ್ನು ತರುವುದೋ ಮಾಡಬಹುದಾಗಿತ್ತು. ಆದರೆ ಸರ್ಕಾರ ಇದ್ಯಾವುದನ್ನೂ ಮಾಡದೆ ಸಾಮ್ರಾಜ್ಯಶಾಹಿ ದೇಶಕ್ಕೆ ಹೆದರಿ ಈ ದೇಶದ ರೈತರನ್ನು ಬಲಿಪೀಠಕ್ಕೆ ಒಬ್ಬೊಬ್ಬರನ್ನಾಗಿ ಕಳುಹಿಸುತ್ತಿದೆ. ರೈತರ ಸಾವಿಗೆ ಕಾರಣ ತಾವಲ್ಲವೆಂದು, ನಾವು ಅಸಹಾಯಕರೆಂದು ನಾಚಿಕೆ ಇಲ್ಲದಂತೆ ಸಿದ್ಧಾಂತ ರೂಪಿಸಲು ತೊಡಗಿದೆ.

ಡಬ್ಲ್ಯುಟಿಒ ಒಪ್ಪಂದದಲ್ಲಿ 300 ಶೇ. ತೆರಿಗೆ ಹಾಕಲು ಅವಕಾಶ ಇದ್ದರೂ ಕೇವಲ 100 ಶೇ. ಹಾಕಿ ಅಡಿಕೆ ಬೆಳೆವ ರೈತರನ್ನು ಅಸಹಾಯಕರನ್ನಾಗಿಸಿದೆ. ಬೆಲೆ ಮೇಲೇರಬಹುದೆಂದು, ನಮ್ಮ ಶ್ರಮಕ್ಕೆ ಬೆಲೆ ಬರಬಹುದೆಂದು ಕಾದು ಕಾದು ಸುಸ್ತಾದ ರೈತ ಇಂದು ಆತ್ಮಹತ್ಯೆಗೆ ಮೊರೆ ಹೋಗುತ್ತಿದ್ದಾನೆ. ಇಲ್ಲಿಯ ಸಹಕಾರಿ ಸಂಘಗಳು, ಬ್ಯಾಂಕುಗಳು ಜನ

ಪುಟ 11 ಕ್ಕೆ

UTI ಸಿಕ್ಕಿಬೀಳುತ್ತಿರುವ ವಂಚಕರು

'ರಾಮರಾಜ್ಯ'ವಲ್ಲ ಇದು ಲೂಟಿ ರಾಜ್ಯ!

ಜಾಗತೀಕರಣ ಉದಾರೀಕರಣ ಖಾಲಿಯಾಯಿತೋ ಜನರ ಹಣ

1992 ರ ಕೋಟ್ಯಾಂತರ ರೂಪಾಯಿಗಳ ಷೇರು ಹಗರಣದ ರೂವಾರಿ ಕುಖ್ಯಾತ ಹರ್ಷದ್ ಮೆಹ್ತಾನನ್ನು ದೇಶದ ಜನತೆ ಮರೆತಿಲ್ಲ. ಆದರೆ ಆಳುವ ಪ್ರಭುಗಳು ಮತ್ತು ಅವರ ತುತ್ತೂರಿಗಳಂತಿರುವ ಮಾಧ್ಯಮಗಳು ಮರೆತಿದ್ದಾರೆ. ಬೇರೆ ದೇಶಗಳಲ್ಲಾಗಿದ್ದರೆ, ಅವನಂತಹ ಲೂಟಿಕೋರ ಅಪರಾಧಿಗಳಿಗೆ ಅತ್ಯಂತ ಕಠಿಣ ಶಿಕ್ಷೆಗೊಳಪಡಿಸಿ, ಜೀವಮಾನಪರ್ಯಂತ ಕಾರಾಗೃಹದಲ್ಲಿಡುತ್ತಿದ್ದರೇನೋ. ಆದರೆ ನಮ್ಮ ಈ 'ಭವ್ಯ' ಭಾರತದಲ್ಲಿ, ಶಿಕ್ಷೆಯ ಮಾತು ಬಿಡಿ, ಸರಿಯಾದ ವಿಚಾರಣೆಯೇ ನಡೆಯುತ್ತಿಲ್ಲ. ಮೇಲಾಗಿ, ಮಧ್ಯ ತಯಾರಿಸುವ ಯೂಬಿ ಸಮೂಹದ ಒಡೆತನದ ಆಂಗ್ಲ ಪತ್ರಿಕೆಯೊಂದರಲ್ಲಿ (ಏಷಿಯನ್ ಏಜ್) ನಿಯಮಿತವಾಗಿ ಲೇಖನಗಳನ್ನು ಬರೆಯುವ ಅಂಕಣಕಾರನಾಗುವಷ್ಟು ಪ್ರತಿಷ್ಠೆಯನ್ನು ಈ ದೇಶದ ವ್ಯವಸ್ಥೆ ಅವನಿಗೆ ಒದಗಿಸಿಕೊಟ್ಟಿದೆ. ನಿಜ, ಖದೀಮರಿಗೂ ರಾಜಮರ್ಯಾದೆ ದೊರಕುವುದು 'ಲೂಟಿ ರಾಜ್ಯ'ದಲ್ಲಿ ಮಾತ್ರ.

ಮರಳಿಗೋಪುರ ಎಷ್ಟು ಕಾಲ ನಿಲ್ಲುವುದು

ಸಾಲಾಗಿ ಹಗರಣಗಳ ಸರಣಿಯನ್ನೇ ಈ ದೇಶದ ಜನತೆಗೆ ಕೊಡುಗೆಯನ್ನಾಗಿ ನೀಡುತ್ತಿರುವ ಆಳುವ ಜನ, ತಮ್ಮ ಆಡಳಿತದ ಏಕಮಾತ್ರ ಉತ್ತುಂಗ ಸಾಧನೆ ಎಂದರೆ ಸಾರ್ವಜನಿಕ ಲೂಟಿ ಮಾತ್ರ ಎಂದು ನಿಚ್ಚಳವಾಗಿ ತೋರಿಸಿ ಕೊಟ್ಟಿದ್ದಾರೆ.

ಹಗರಣಗಳ ಸರವಳಿಗೆ ಕೇತನ್ ಪಾರೇಖ್ ಪ್ರಕರಣ ಇತ್ತೀಚಿನ ಒಂದು ಕೊಂಡಿ. ದೇಶದ ಅರ್ಥವ್ಯವಸ್ಥೆಯನ್ನೇ ಬುಡಮೇಲು ಮಾಡಿದ ಹಗರಣವಿದು. ಆತನೊಂದಿಗೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಶಾಮೀಲಾದ ರಾಜಕಾರಣಿಗಳು, ಬ್ಯಾಂಕುಗಳು, ಖಾಸಗೀ ಉದ್ಯಮ ಸಮೂಹಗಳು, ವಿತ್ತೀಯ ಸಂಸ್ಥೆಗಳ ಪಟ್ಟಿ ಹೇಸಿಗೆ ಹುಟ್ಟಿಸುವಷ್ಟು ದೊಡ್ಡದಿದೆ. ಷೇರು ಮಾರುಕಟ್ಟೆಯಲ್ಲಿ ಅತ್ಯಂತ ಹೇಯ ವಿಧಾನಗಳ ಮೂಲಕ ಕೃತಕ ಅಭಾವವನ್ನು ನಿರ್ಮಿಸಿ, ಷೇರುಗಳ ಬೆಲೆ ಗಗನಕ್ಕೇರುವಂತೆ ಮಾಡಿ, ದೇಶದ ಅರ್ಥವ್ಯವಸ್ಥೆ ಶೀಘ್ರ ಪ್ರಗತಿಯ ಪಥದಲ್ಲಿದೆ ಎಂಬ ದೊಡ್ಡ ಭ್ರಮೆಯ ಮಾಯಾಜಾಲವನ್ನೇ ಹೆಣೆಯಲಾಗಿತ್ತು. ತಮ್ಮ ಕೆಟ್ಟ ಆರ್ಥಿಕ ನೀತಿಗಳಿಂದಾಗಿ ನಷ್ಟ ಅನ್ನುವುದು ಸುಳ್ಳು; ಬದಲಾಗಿ ದೇಶಕ್ಕೆ ಎಷ್ಟು ಲಾಭವಾಗಿದೆ ನೋಡಿ ಎಂದು ಜಗಜ್ಜಾಹೀರು ಮಾಡಲು ಷೇರು ಮಾರುಕಟ್ಟೆಯಲ್ಲಿನ ತೇಜಿಯನ್ನೇ ಆಳುವ ಜನ ಮತ್ತು ಅವರ ಮುಖವಾಣಿಗಳು ಎಗ್ಗಿಲ್ಲದೇ ಬಳಸಿಕೊಂಡರು.

ಆದರೇನು? ಮರಳಿನ ಗೋಪುರ ಎಷ್ಟು ಕಾಲ ನಿಲ್ಲಬಲ್ಲದು? ಕುಸಿಯಿತು. ಅದರೊಂದಿಗೇ ಕೋಟ್ಯಾಂತರ ಬಡಪಾಯಿ ಸಣ್ಣ ಹೂಡಿಕೆದಾರರ ಕನಸಿನ ಸೌಧಗಳೂ ಇನ್ನೇಳಲಾರದಂತೆ ಕುಸಿದವು.

ಯುಟಿಐ ಈ ದೇಶದ ಷೇರು ಮಾರುಕಟ್ಟೆಯಲ್ಲಿನ ಅತ್ಯಂತ ದೊಡ್ಡ ಹೂಡಿಕೆದಾರ ಸಂಸ್ಥೆ. ಕೇತನ್ ಪಾರೇಖ್‌ನಂತಹ ಲೂಟಿಕೋರನಿಗೆ ಮಣೆ ಹಾಕಿದ ಯುಟಿಐನ ಭ್ರಷ್ಟ ಉನ್ನತ ಅಧಿಕಾರಿಗಳು ಮತ್ತು ಅದಕ್ಕೆ ಇಂಬು ಕೊಟ್ಟ ವಿತ್ತ ಮಂತ್ರಾಲಯದ ಪಾಳೇಗಾರರು, ಆ ಮೂಲಕ ಎರಡು ಕೋಟಿಯಷ್ಟು ಹೂಡಿಕೆದಾರರ ತಲೆಯ ಮೇಲೆ ಕಲ್ಲು ಚಪ್ಪಡಿ ಎಳೆದಿದ್ದಾರೆ. ಅತ್ಯಂತ ನಿರ್ದಯವಾಗಿ ಅಮಾಯಕ ಜನತೆಯಿಂದ ಸುಮಾರು 6000 ಕೋಟಿ ರೂಪಾಯಿಗಳಷ್ಟು ಹಣವನ್ನು ಲೂಟಿ ಮಾಡಿದ ಇಂತಹ ವಂಚನೆ, ಸ್ವತಂತ್ರ ಭಾರತದ ಇತಿಹಾಸದಲ್ಲಿ ಹಿಂದೆಂದೂ ನಡೆದಿಲ್ಲ.

2000ನೇ ಇಸವಿಯ ಜೂನ್ ತಿಂಗಳ ಅಂತ್ಯದಲ್ಲಿ, ಯುಟಿಐನ ಬೊಕ್ಕಸದಲ್ಲಿದ್ದ ಹಣ ರೂ. 75,159 ಕೋಟಿ! ದಶಕಗಳಿಂದ ಕೋಟ್ಯಾಂತರ ಜನ ವಿಶ್ವಾಸದಿಂದ, ನಿರ್ವಂಚನೆಯಿಂದ ಹೂಡಿದ್ದ ಹಣದಿಂದಲೇ ಈ ಮೊತ್ತ ಇಂತಹ ಅಪಾರ ಪ್ರಮಾಣದಲ್ಲಿ ಬೆಳೆದದ್ದು. ತನ್ನಲ್ಲಿರುವ ಹಣವನ್ನು ನಿಗದಿತ ಆದಾಯ ಹಾಗೂ ನಿಶ್ಚಿತ ಮರುಪಾವತಿ ಖಂಡಿತವಾಗಿರುವ ಸರ್ಕಾರಿ ಸಾಲಪತ್ರಗಳು, ನಿಗಮಗಳ ವಿತ್ತ ಪತ್ರಗಳು (Bonds) ಇತ್ಯಾದಿಗಳಲ್ಲಿ ಹೆಚ್ಚಾಗಿ ಹೂಡಬೇಕೆಂಬ ಸೂತ್ರಕ್ಕೆ ಯುಟಿಐ ಮೊದಮೊದಲು ಅಂಟಿಕೊಂಡಿತ್ತೇನೋ ನಿಜ.

ಖಾಸಗಿ ಕಂಪನಿಗಳ ಹದ್ದಿನ ಕಣ್ಣಿಗೆ

ಆದರೆ ನೂತನ ಆರ್ಥಿಕ ನೀತಿಗಳ ಪರಿಣಾಮದಿಂದಾಗಿ ಉದ್ಭವಿಸಿದ ಉತ್ಕಟ ಲಾಭಕೋರತನದ ಕಬಂಧ ಬಾಹುಗಳು ಯುಟಿಐನ್ನು ಆವರಿಸಿಕೊಳ್ಳಲಾರಂಭಿಸಿದವು. ಯುಟಿಐನ ಬೊಕ್ಕಸದ ಮೇಲೆ ಲಾಭ ಪಿಪಾಸುಗಳ ಹದ್ದಿನ ಕಣ್ಣು ಬೀಳಲು ತಡವಾಗಲಿಲ್ಲ.


ಖಾಸಗೀ ಕಂಪನಿಗಳ ಷೇರುಗಳಲ್ಲಿ ಕೋಟ್ಯಾಂತರ ರೂ.ಗಳ ಹೂಡಿಕೆಯನ್ನು ಯುಟಿಐ ದೊಡ್ಡ ಪ್ರಮಾಣದಲ್ಲೇ ಆರಂಭಿಸಿತು. ಉದಾಹರಣೆಗೆ ಧೀರೂಭಾಯಿ ಅಂಬಾನಿಯ ರಿಲೈಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್‌ನಲ್ಲಿ 1994 ರಲ್ಲಿ ನೇರವಾಗಿ 775 ರೂ.ಕೋಟಿಗಳನ್ನು ಹೂಡಿತ್ತು. 1995 ರ ಮಾರ್ಚ್ ತಿಂಗಳಲ್ಲಿ ಈ ಹೂಡಿಕೆಯನ್ನು ಷೇರುಗಳನ್ನಾಗಿ ಪರಿವರ್ತಿಸಲಾಯಿತು. ಅದು ಕೂಡಾ ಪ್ರತಿ ಷೇರು ಒಂದಕ್ಕೆ ರೂ. 401 ರ ದರದಲ್ಲಿ. ಆಗ ಷೇರು ಮಾರುಕಟ್ಟೆಯಲ್ಲಿ ರಿಲೈಯನ್ಸ್ ಷೇರಿನ ಬೆಲೆ ಇದ್ದದ್ದು ರೂ. 280!. ಅನಂತರದ ದಿನಗಳಲ್ಲಿ ಅದು ಮತ್ತಷ್ಟು ಇಳಿಯಿತು. ಹೇಗಿದೆ ವ್ಯವಹಾರ! ಅಂಬಾನಿಗೆ ಲಾಭ; ಯುಟಿಐಗೆ ನಷ್ಟ! ಸಾರ್ವಜನಿಕರ ಹಣ ಪೋಲು; ಖಾಸಗಿ ಖಜಾನೆ ಭರ್ತಿ! (ಈ ವ್ಯವಹಾರದಲ್ಲಿ ಮೋಸ ನಡೆದಿದೆ, ಆದ್ದರಿಂದ ತನಿಖೆಗೆ ಅವಕಾಶ ಕೊಡಿ ಎಂದು ಸಿಬಿಐ ಸರ್ಕಾರದ ಅನುಮತಿ ಕೋರಿತ್ತು. ಆದರೆ ವಿತ್ತ ಮಂತ್ರಾಲಯ ಒಪ್ಪಲಿಲ್ಲ. ಪುನಃ 1997 ರಲ್ಲಿ ಸಿಬಿಐ ಮತ್ತೊಮ್ಮೆ ಅನುಮತಿ ಕೋರಿದರೂ ಅದನ್ನು ನಿರಾಕರಿಸಲಾಯಿತು. ಈ ವ್ಯವಹಾರದ ದಾಖಲೆಗಳನ್ನೊಳಗೊಂಡ ಸರಕಾರೀ ಕಡತವೊಂದು ಮಾಯವಾಗಿದೆ ಎಂಬ ಆಘಾತಕರ ಸುದ್ದಿ ಪತ್ರಿಕೆಗಳಲ್ಲಿ ಬಹಿರಂಗವಾಗಿದೆ!

ತಿಮಿಂಗಲಗಳ ಬಾಯಿಗೆ

ಮೇಲಿನದ್ದು ಕೇವಲ ಒಂದು ಉದಾಹರಣೆ ಮಾತ್ರ. **ದೇಶದ ಸಂಪತ್ತನ್ನು ಕೊಳ್ಳೆ ಹೊಡೆಯುತ್ತಿರುವ ನೂರಾರು ತಿಮಿಂಗಲಗಳೂ ಇದೇ ರೀತಿ ಯುಟಿಐನ್ನು ಬಳಸಿಕೊಂಡಿವೆ.**

ಕಳೆದ ವರ್ಷದಲ್ಲಿ ಮತ್ತು ಈ ವರ್ಷದ ಆರಂಭದ ದಿನಗಳಲ್ಲಿ ಯುಟಿಐ ಕೆಲವೊಂದು ಷೇರುಗಳನ್ನು ಖರೀದಿಸಿದ ಬೆಲೆ ಹಾಗೂ ಅಂತಹ ಷೇರುಗಳ ಪ್ರಸಕ್ತ (ಅಂದರೆ 26.7.01 ರಲ್ಲಿದ್ದಂತೆ) ಮಾರುಬೆಲೆಯನ್ನು ಗಮನಿಸೋಣ.

ಸರಾಸರಿ ರೂ. 259.00 ರಂತೆ ಕೊಂಡುಕೊಂಡ ಗ್ಲೋಬಲ್ ಟೆಲಿ ಸಿಸ್ಟಮ್ಸ್ (Global Tele Systems) ನ ಷೇರುಗಳ ಈಗಿನ ಬೆಲೆ ಕೇವಲ ರೂ. 98.00 ಮಾತ್ರ; ರೂ. 250.00 ರಂತೆ ಖರೀದಿಸಿದ ಸತ್ಯಂ ಕಂಪ್ಯೂಟರ್ಸ್ (Satyam computers) ನ ಷೇರುಗಳ ಈಗಿನ ಬೆಲೆ ರೂ. 146.00; ರೂ. 630.00 ರಂತೆ ಖರೀದಿಸಿದ ಆಫ್ಟೆಕ್ ಇನ್ಫೋಸಿಸ್ (Aftek Infosys) ನ ಷೇರುಗಳ ಬೆಲೆ ರೂ. 109.00; ರೂ.440 ರಿಂದ 450 ರಂತೆ ಖರೀದಿಸಿದ ಸಿಲ್ವರ್ ಲೈನ್ ಟೆಕ್ನಾಲಜೀಸ್ (Silverline Technolgies) ನ ಷೇರುಗಳ ಬೆಲೆ ಈಗ ಕೇವಲ ರೂ. 44.00. ರೂ. 250.00 ರಂತೆ ಖರೀದಿಸಿದ ಡಿಎಸ್‌ಕ್ಯೂ ಸಾಫ್ಟ್‌ವೇರ್ (DSQ Softeware) ನ ಷೇರುಗಳ ಬೆಲೆ ರೂ. 29.00. (ಕೇತನ್ ಪಾರಿಖ್ ಹಗರಣದಲ್ಲಿನ ಅವ್ಯವಹಾರಗಳಲ್ಲಿ ಭಾಗಿಯಾಗಿದೆ ಎಂಬ ಕಾರಣಕ್ಕಾಗಿ ದಾಲ್ಮಿಯಾ ಒಡೆತನದ DSQ Software ನ ಷೇರುಗಳ ವಹಿವಾಟನ್ನು ಈಗ ನಿಷೇಧಿಸಲಾಗಿದೆ!)


ಯಶವಂತ್ ಸಿನ್ಹಾ


ಯುಟಿಐ ನ ಬಳಿ ಸದ್ಯಕ್ಕೆ ಸತ್ಯಂ ಕಂಪ್ಯೂಟರ್ಸ್ ನ 9 ಲಕ್ಷ ಷೇರುಗಳು; ಆಫ್ಟೆಕ್ ಇನ್‌ಫೋಸಿಸ್‌ನ 4.3 ಲಕ್ಷ ಷೇರುಗಳು; ಸಿಲ್ವರ್‌ಲೈನ್ ಟೆಕ್ನಾಲಜೀಸ್‌ನ 5.5 ಲಕ್ಷ ಷೇರುಗಳು; ಅಲ್ಲದೆ 2001 ರ ಮಾರ್ಚ್ ತಿಂಗಳಲ್ಲಿ ಖರೀದಿಸಿದ ಡಿಎಸ್‌ಕ್ಯೂ ಸಾಫ್ಟ್‌ವೇರ್‌ನ 13.3 ಲಕ್ಷ ಷೇರುಗಳು ಇವೆಯೆಂದು ಇಕಾನಾಮಿಕ್ ಟೈಮ್ಸ್ ವರದಿ ಮಾಡಿದೆ


ಪಿ.ಎಸ್.ಸುಬ್ರಹ್ಮಣ್ಯಂ

ಈಗ ಬಯಲಾಗುತ್ತಿರುವ ವರದಿಗಳ ಪ್ರಕಾರ, ಯುಟಿಐ ಒಟ್ಟು ರೂ. 3400 ಕೋಟಿ ಹೂಡಿದ ಆರು ಕಂಪನಿಗಳ ಷೇರುಗಳ ಈಗಿನ ಮಾರುಬೆಲೆ ಸುಮಾರು ರೂ. 1400 ಕೋಟಿ ಮಾತ್ರ. ರೂ. 1300 ಕೋಟಿಯಷ್ಟು ಹಣವನ್ನು ಹೂಡಿದ ಬೇರೆ ಐದು ಕಂಪನಿಗಳ ಷೇರುಗಳ ಒಟ್ಟು ಮಾರುಬೆಲೆ ಈಗ ಕೇವಲ ರೂ. 300 ಕೋಟಿ. ಕೇವಲ 11 ಕಂಪನಿಗಳ ಷೇರುಗಳಲ್ಲಿನ ಹೂಡಿಕೆಯ ದುರವಸ್ಥೆಯೇ ಹೀಗಿರಬೇಕಾದರೆ, ಉಳಿದ ಎಲ್ಲಾ ಷೇರು ಹೂಡಿಕೆಗಳ ಗತಿ ಏನಾಗಿರಬಹುದು ನೀವೇ ಊಹಿಸಿ. ಪರಿಸ್ಥಿತಿ ಎಷ್ಟು ಗಂಭೀರವಾಗಿದೆಯೆಂದರೆ, ಯುಟಿಐ ಹಣ ಹೂಡಿರುವ ಒಟ್ಟು 1,426 ಖಾಸಗಿ ಕಂಪನಿಗಳ ಪೈಕಿ ಕೇವಲ 81 ಕಂಪನಿಗಳ ಷೇರುಗಳು ಮಾತ್ರ ಏರುಮುಖ ಕಂಡಿದೆ. 654 ಕಂಪನಿಗಳು ಅಸ್ತಿತ್ವದಲ್ಲಿಯೇ ಇಲ್ಲ; ಇದ್ದರೂ ಅವುಗಳ ಷೇರುಗಳ ಮಾರಾಟವೇ ಸ್ಥಗಿತವಾಗಿದೆ. ಇನ್ನುಳಿದ 1345 ಕಂಪನಿಗಳ ಷೇರುಗಳಲ್ಲಿ ಹೂಡಿದ್ದ ಹಣದಲ್ಲಿ ಶೇ 47 ರಷ್ಟು ಕುಸಿತ ಆಗಿದೆ!

ಕಲಿಯದ ಪಾಠ ದುರುದ್ದೇಶವೇ ಧ್ಯೇಯ

ಯುಟಿಐಗೆ ಏಕೆ ಈ ದುಸ್ಥಿತಿ ಬಂತು? ಆಂತರಿಕ ಉಳಿತಾಯಕ್ಕೆ ಉತ್ತೇಜನ ನೀಡಿ ಆ ಮೂಲಕ ಸಂಗ್ರಹವಾದ ಹಣವನ್ನು ಕೈಗಾರಿಕಾ ಬಂಡವಾಳಕ್ಕೆ ಒದಗಿಸಿ, ತನ್ಮೂಲಕ ದೇಶದ ಪ್ರಗತಿಗೆ ನೆರವಾಗುವ ಗುರುತರ ಜವಾಬ್ದಾರಿಯನ್ನು ಹೊರಿಸಿ, ನಮ್ಮ ದೇಶದ ಸಂಸತ್ತು ಯುಟಿಐನ್ನು ಸಂರಚಿಸಿತ್ತು. ತನ್ನ ಮೂಲೋದ್ದೇಶಗಳನ್ನು ಕ್ರಮೇಣ ಬದಿಗೊತ್ತಿ, ಷೇರು ಪೇಟೆಯ ಲಾಭಕೋರ ವ್ಯವಹಾರಗಳಲ್ಲಿ ಹೆಚ್ಚುಹೆಚ್ಚಾಗಿ ಯುಟಿಐ ಪಾಲ್ಗೊಳ್ಳಲಾರಂಭಿಸಿತು. 1998 ರಲ್ಲಿಯೇ ದೊಡ್ಡ ಬಿಕ್ಕಟ್ಟನ್ನು ಎದುರಿಸಿದಾಗ, ಕೇಂದ್ರ ಸರ್ಕಾರ 3300 ಕೋಟಿ ರೂಪಾಯಿಗಳನ್ನು ಒದಗಿಸಿ (ಇದು ಸಾರ್ವಜನಿಕ ಹಣ ಎಂಬುದನ್ನು ಮರೆಯಲಾಗದು) ಯುಟಿಐನ್ನು ಸಂಕಷ್ಟದ ಸ್ಥಿತಿಯಿಂದ ಪಾರು ಮಾಡಿತ್ತು. ಆ ಸಂದರ್ಭದಲ್ಲಿ ಯುಟಿಐನ ಹೂಡಿಕೆ ವ್ಯವಹಾರಗಳನ್ನು ವಿಶ್ಲೇಷಿಸಿ, ಪರಿಹಾರಗಳನ್ನು ಸೂಚಿಸಲು ದೀಪಕ್ ಪಾರೇಖ್ ಸಮಿತಿಯನ್ನು ನೇಮಿಸಲಾಗಿತ್ತು. ಆ ಸಮಿತಿ, **ಯುಟಿಐನ ಹೂಡಿಕೆಗಳಲ್ಲಿ ಖಾಸಗೀ ಷೇರುಗಳಲ್ಲಿನ ಪ್ರಮಾಣ ಶೇ 66 ರಷ್ಟು ಇದ್ದು, ಅದನ್ನು ಶೇ 40 ಕ್ಕೆ ಇಳಿಸಬೇಕೆಂದು ಸ್ಪಷ್ಟವಾಗಿ ತಿಳಿಸಿತ್ತು. ಆದರೂ, ಯುಟಿಐ ಪಾಠ ಕಲಿಯಲಿಲ್ಲ.** ಹಳೆಯ ಚಾಳಿಯನ್ನು ಮುದುವರೆಸಿತು. ರಾಜಕೀಯ ಪ್ರಭಾವ ಮತ್ತು ವೈಯಕ್ತಿಕ ಲಾಭದಾಸೆ ಅದನ್ನು ಯಾವುದಕ್ಕೂ ಹೇಸದ ಷೇರು ಪೇಟೆಯ ದಲ್ಲಾಳಿಗಳೊಂದಿಗೆ ಶಾಮೀಲಾಗುವ ಹಂತಕ್ಕೆ ದೂಡಿದವು. ಪರಿಣಾಮವಾಗಿ, ಖಾಸಗಿ ಷೇರುಗಳಲ್ಲಿನ ಹೂಡಿಕೆಗಳು ಕಡಿಮೆಯಾಗುವುದು ಬಿಡಿ, ಇನ್ನಷ್ಟು ಹೆಚ್ಚಾಗಿ ಶೇ 74 ರ ಮಟ್ಟಕ್ಕೆ ಏರಿದವು. 1998 ರಲ್ಲಿ 3300 ಕೋಟಿ ರೂ. ಹಣವನ್ನು ಒದಗಿಸಿದ ಕೇಂದ್ರ ಸರ್ಕಾರ, ಆ ನಂತರ ಯುಟಿಐನ ವ್ಯವಹಾರಗಳ ಮೇಲೆ ನಿಗಾ ಇಡಲಿಲ್ಲವೇಕೆ? **ಕೇಂದ್ರ ಸರ್ಕಾರದ ಆದೇಶಗಳನ್ನು ಸಾರಾಸಗಟಾಗಿ ಉಲ್ಲಂಘಿಸಿದ ಯುಟಿಐನ ವ್ಯವಹಾರಗಳತ್ತ ಕಳೆದ ಎರಡು ವರ್ಷಗಳಲ್ಲಿ ಕೇಂದ್ರ ಹಣಕಾಸು ಸಚಿವರು ಕಣ್ಣುಮುಚ್ಚಿ ಕೂತಿದ್ದರೇಕೆ?**


ವಾಜಪೇಯಿ

ಈ ವರ್ಷದ ಮಾರ್ಚ್ ತಿಂಗಳಲ್ಲಿ ಷೇರುಪೇಟೆ ತೀಕ್ಷ್ಣವಾಗಿ ಕುಸಿದಿತ್ತು. ಆದರೂ ಏಪ್ರಿಲ್-ಮೇ ತಿಂಗಳಲ್ಲಿ ಯೂನಿಟ್ ಒಂದಕ್ಕೆ ರೂ. 14.20 ರಿಂದ 14.55 ರ ದರದಲ್ಲಿ ಯುಟಿಐ ಮರು ಖರೀದಿಸಿತು. ಈ ಎರಡೂ ತಿಂಗಳಲ್ಲಿ ನಡೆದ ಒಟ್ಟು ಮರು ಖರೀದಿಯ ಮೊತ್ತ 4151 ಕೋಟಿ ರೂಪಾಯಿಗಳು! ಇಷ್ಟೊಂದು ಭಾರಿ ಪ್ರಮಾಣದ ಮರು ಖರೀದಿ ಎಂದೂ ನಡೆದಿರಲಿಲ್ಲ. ಈಗ ಬಹಿರಂಗಗೊಂಡಿರುವ ವರದಿಗಳ ಪ್ರಕಾರ, ಇದರಲ್ಲಿ ಸುಮಾರು 4000 ಕೋಟಿ ರೂ.ಗಳಷ್ಟು ಮರುಖರೀದಿ ರಿಲೆಯನ್ಸ್, ಟಾಟಾ, ಬಿರ್ಲಾ ಮುಂತಾದ ಖಾಸಗಿ ಕುಳಗಳು ನಡೆಸಿದ್ದವು! ಅಂದರೆ ಮಾರುಕಟ್ಟೆ ಕುಸಿತದ ನಡುವೆಯೂ, ಯುಟಿಐನ ಸಂಕಷ್ಟದ ಮುನ್ಸೂಚನೆಗಳು ಮೊದಲೇ ಗೊತ್ತಾಗಿದ್ದರಿಂದ, ಆತುರಾತುರವಾಗಿ ಹಣ ವಾಪಸು ಪಡೆದ ಈ ತಿಮಿಂಗಲಗಳು ಹೇರಳ ಲಾಭ ಮಾಡಲು ಸಾಧ್ಯವಾಯ್ತು! ರೂ.14.55 ಎಲ್ಲಿ? ಈಗ ಬಡಪಾಯಿ ಸಣ್ಣ ಹೂಡಿಕೆದಾರರಿಗೆ ನೀಡಲೊಪ್ಪಿರುವ ರೂ. 10.00 ಎಲ್ಲಿ? ಯಾರಿಗೆ ಲಾಭ? ಯಾರಿಗೆ ನಷ್ಟ? ಯುಟಿಐನ ಪಾತ್ರಕ್ಕೆ ಇದಕ್ಕಿಂತ ಬೇರೆ ಉದಾಹರಣೆ ಬೇಕೆ? ಉದಾಹರಣೆಗಳು ಬೇಕಷ್ಟಿವೆ.

ವಂಚಕರು ವಾಜಪೇಯಿ ಶಿಷ್ಯರು

ಅರವಿಂದ್ ಜೋಹಾರಿ ಮತ್ತು ಆನಂದ್ ಜೋಹಾರಿ ಎಂಬ ವಂಚಕರಿಬ್ಬರು ಸೆಂಚುರಿ

ಇನ್ವೆಸ್ಟ್‌ಮೆಂಟ್ಸ್ ಲಿಮಿಟೆಡ್ ಎಂಬ ಸಂಸ್ಥೆಯನ್ನು ಹುಟ್ಟುಹಾಕಿದರು. ಅವರ ತಂದೆ ಆರ್‌ಎಸ್‌ಎಸ್‌ನ ಪ್ರಮುಖ ಮುಂದಾಳು ಆಗಿದ್ದರೆಂಬುದೇ ಅವರ ಬಂಡವಾಳವಾಗಿತ್ತು. ಉತ್ತರ ಪ್ರದೇಶದ ಭ್ರಷ್ಟ ಬಿಜೆಪಿ ಸರ್ಕಾರದ ಕೃಪಾಕಟಾಕ್ಷ ಇವರಿಗಿತ್ತು. ಇದೇ ಸಂದರ್ಭದಲ್ಲಿ ರಾಜಧಾನಿ ಲಕ್ನೋನಲ್ಲಿ ತಂತ್ರಜ್ಞಾನ ಅಭಿವೃದ್ಧಿ ಕೇಂದ್ರ (Software Development Park) ಒಂದನ್ನು ಸ್ಥಾಪಿಸಲು ಉತ್ತರ ಪ್ರದೇಶ ಸರ್ಕಾರ ನಿರ್ಧರಿಸಿ, ಅದರ ಪ್ರವರ್ತಕರನ್ನಾಗಿ ಈ ವಂಚಕ ಸಹೋದರರನ್ನು ನೇಮಿಸಲಾಯಿತು. ಸರ್ಕಾರ ಶೇ 26 ರಷ್ಟು ಬಂಡವಾಳವನ್ನು ಸಹಾ ವಿನಿಯೋಗಿಸಿತು. ಅದಕ್ಕಾಗಿಯೇ **ಸೈಬರ್‌ಸ್ಪೇಸ್ ಇನ್ಫೋಸಿಸ್ ಲಿಮಿಟೆಡ್** ಎಂಬ ಇನ್ನೊಂದು ಕಂಪನಿಯನ್ನು ಈ ವಂಚಕರು ಸೃಷ್ಟಿಸಿದ್ದರು. **ತಂತ್ರಜ್ಞಾನ ಅಭಿವೃದ್ಧಿ ಕೇಂದ್ರದ ಶಂಕುಸ್ಥಾಪನೆಯನ್ನು ಬೇರಾರೂ ಅಲ್ಲ, ಸ್ವತಃ ಪ್ರಧಾನಿ ವಾಜಪೇಯಿಯವರೇ ತಮ್ಮ 'ದಿವ್ಯ' ಹಸ್ತದಿಂದ ನೆರವೇರಿಸಿದರು!.** ಸೈಬರ್‌ಸ್ಪೇಸ್ ಇನ್‌ಫೋಸಿಸ್‌ನಲ್ಲಿ ಹಣ ಹೂಡಲು ರಾಜಕೀಯ ಒತ್ತಡಗಳನ್ನು ತರಲಾಯಿತು. ಈ ನಡುವೆ, ಏಕಾಏಕಿ ಪ್ರಸಿದ್ಧಿಗೆ ಬಂದ ಜೋಹಾರಿ ಸಹೋದರರು ಸುಮಾರು ರೂ. 400 ಕೋಟಿಗಳಷ್ಟು ಹಣವನ್ನು ಸಂಗ್ರಹಿಸಿದ್ದರು. ಇದಕ್ಕಿದ್ದಂತೆ ಮಾಯವಾದರು! ಹಣ ಹೂಡಿದವರ ಪಾಡಂತೂ ಹೇಳತೀರದು. ದೂರದ ಡಾರ್ಜಿಲಿಂಗ್‌ನಲ್ಲಿ ಅಡಗಿಕೊಂಡಿದ್ದ ಈ ಹಗಲು ದರೋಡೆಕೋರರನ್ನು ಈಗ ಬಂಧಿಸಲಾಗಿದೆ. ವಿಚಾರಣೆ ನಡೆಯುತ್ತಿದೆ. ಲಕ್ನೋವಿನ 'ಸಿಟಿ ಕೋ ಆಪರೇಟಿವ್ ಬ್ಯಾಂಕ್'ಗೆ ರೂ. 32 ಕೋಟಿಯಷ್ಟು ವಂಚನೆ ಮಾಡಿರುವ ಪ್ರಕರಣವೂ ಬೆಳಕಿಗೆ ಬಂದಿದೆ!

ಯೂಟಿಐ, ಈ ಕಂಪನಿಯಲ್ಲಿ ಕೂಡಾ ರೂ. 32.08 ಕೋಟಿಗಳಷ್ಟು ಹಣವನ್ನು ಹೂಡಿಕೆ ಮಾಡಿತ್ತು. ಮಾರುಕಟ್ಟೆಯಲ್ಲಿ ಕೇವಲ ಎರಡು ರೂಪಾಯಿಗೆ ಕೂಡಾ ಮಾರಾಟವಾಗದೇ ಇದ್ದ ಈ ಕಂಪನಿಯ 3,45,000 ಷೇರುಗಳನ್ನು ಷೇರು ಒಂದಕ್ಕೆ ರೂ. 940.00 ರಂತೆ ಖರೀದಿಸಲು 27.7.2000 ರಂದು ತೀರ್ಮಾನಿಸಿ, ತಡ ಮಾಡದೆ ಆ ದಿನವೇ ಹಣವನ್ನು ಚೆಕ್ಕು ಮೂಲಕ ಅರವಿಂದ ಜೋಹಾರಿಗೆ ತಲುಪಿಸಲಾಯ್ತು!

ಭಂಡ ಆರ್ಥಿಕ ಸಚಿವನ ರಾಜಕೀಯ ಒತ್ತಡ

ಇದಕ್ಕೂ ಹಿಂದೆ, ಹೂಡಿಕೆಗಳ ಬಗ್ಗೆ ಶಿಫಾರಸ್ಸು ಮಾಡುವ ಯೂಟಿಐನ ಒಂದು ಇಲಾಖಾ ಸಮಿತಿ, ಈ ಕಂಪನಿಯಲ್ಲಿ ಹಣ ಹೂಡಬಾರದೆಂದು ಸ್ಪಷ್ಟವಾಗಿ ತನ್ನ ವರದಿಯಲ್ಲಿ ತಿಳಿಸಿತ್ತು. ಆ ವರದಿಯನ್ನು ಧಿಕ್ಕರಿಸಿ, ಯೂಟಿಐನ ಆಗಿನ ಅಧ್ಯಕ್ಷರು ಇಂತಹ ಕ್ರಮ ಕೈಗೊಳ್ಳಲು ಯಾವ ಮೂಲದಿಂದ ರಾಜಕೀಯ ಒತ್ತಡ ಬಂದಿರಬಹುದು ಎಂಬುದನ್ನು ಊಹಿಸಬೇಕಾಗಿಲ್ಲ. **ವಿಚಾರಣಾಧೀನ ಕೈದಿಯಾಗಿ ಸಿಬಿಐ ಬಂಧನದಲ್ಲಿದ್ದ ಯೂಟಿಐನ ಈ ಮಾಜಿ ಅಧ್ಯಕ್ಷ ವಿತ್ತ ಮಂತ್ರಾಲಯದ ಕಡೆ ಬೆರಳು ತೋರಿಸಿದ್ದಾನೆ!** ವಿತ್ತ ಮಂತ್ರಿ ಯಶವಂತ್ ಸಿನ್ಹಾ ರಾಜೀನಾಮೆ ನೀಡದೆ ಇನ್ನೂ ಭಂಡತನ ಪ್ರದರ್ಶಿಸುತ್ತಿರುವುದು ನಾಚಿಕೆಗೇಡಿನ ಸಂಗತಿಯಲ್ಲವೆ?

ವಾಜಪೇಯಿ ನಾಟಕ

ಈ ನಡುವೆ ದಿನಂಪ್ರತಿಯೆಂಬಂತೆ ಬಹಿರಂಗವಾಗುತ್ತಿರುವ ಯೂಟಿಐನ ಹೂಡಿಕೆಗಳಲ್ಲಿನ ಮೋಸದ ಪ್ರಕರಣಗಳು ಕೇಂದ್ರದ ಎನ್‌ಡಿಎ ಸರ್ಕಾರವನ್ನು ದಿಕ್ಕೆಡಿಸಿವೆ. ವಾಜಪೇಯಿಯವರ ಸಾಚಾತನದ ಮುಖವಾಡದ ಹಿಂದೆ, ದೇಶವನ್ನು ಕೊಳ್ಳೆ ಹೊಡೆಯುವ ಹೆಮ್ಮಾರಿಗಳಿಗೆ ಇಂಬು ಕೊಡುವ ವ್ಯಕ್ತಿತ್ವ ಇದೆ ಎಂಬ ಸತ್ಯ ಬಯಲಾಗಿದೆ.

ವಾಜಪೇಯಿ ರಾಜಿನಾಮೆಯ ಒಂದಂಕದ ಪ್ರಹಸನ ನಡೆದಿದೆ. ಎನ್‌ಡಿಎ ಅಂಗಪಕ್ಷಗಳನ್ನು ಹದ್ದುಬಸ್ತಿಗೆ ತರಲೋಸುಗವೇ ಈ ನಾಟಕ ನಡೆಯಿತು ಎಂದು ಈಗ ನಿಚ್ಚಳವಾಗಿದೆ. ಅವುಗಳಿಗೆ ಕೊಟ್ಟಿರುವ ನಿಖರವಾದ ಸೂಚನೆ ಸುಸ್ಪಷ್ಟ - ಅಧಿಕಾರದಲ್ಲಿದ್ದು ದೇಶವನ್ನು ಲೂಟಿ ಮಾಡುವ ಕಾಯಕವನ್ನು ಮುಂದುವರಿಸಬೇಕು ಎಂಬ ಇಚ್ಛೆ ನಿಮಗಿದ್ದಲ್ಲಿ ವಾಜಪೇಯಿಯ ಪ್ರಶ್ನಾತೀತ ನಾಯಕತ್ವ ಒಪ್ಪಿಕೊಳ್ಳಿ-ನಾಟಕ ಫಲ ನೀಡಿದೆ. ಬೆನ್ನುಮೂಳೆ ಇಲ್ಲದ ಈ ಅಂಗ ಪಕ್ಷಗಳು ತೆಪ್ಪಗಾಗಿವೆ!

ಹಗರಣಗಳ ಸರಣಿಯನ್ನೇ ದೇಶಕ್ಕೆ ಕೊಡುಗೆಯಾಗಿ ನೀಡುತ್ತಿರುವ ವಾಜಪೇಯಿ ಸರಕಾರ ಎಲ್ಲ ರಂಗಗಳಲ್ಲೂ ತನ್ನ ವೈಫಲ್ಯ ಸಾಬೀತು ಪಡಿಸಿದೆ. ಈ ಭ್ರಷ್ಟ ಸರ್ಕಾರಕ್ಕೆ ಅಧಿಕಾರದಲ್ಲಿ ಮುಂದುವರಿಯಲು ಯಾವುದೇ ನೈತಿಕ ಹಕ್ಕು ಇಂದುಳಿದಿಲ್ಲ. ರಾಜಕೀಯ ದಿವಾಳಿಕೋರತನ, ವ್ಯಾಪಕ ಭ್ರಷ್ಟಾಚಾರ, ಕೋಮುವಾದದ ವಿಷ ಬೀಜಗಳ ಪ್ರಸರಣೆ, ದೇಶದ ಐಕ್ಯತೆ-ಸಮಗ್ರತೆಗೆ ಪದೆ ಪದೇ ತಟ್ಟುತ್ತಿರುವ ಧಕ್ಕೆಗಳು, ದೇಶದ ಸಂಪತ್ತಿನ ಲೂಟಿ - ಇವೆಲ್ಲವೂ ವಾಜಪೇಯಿ ಸರ್ಕಾರದ ಹೆಗ್ಗಳಿಕೆಯ ಸಾಧನೆಗಳು! **ಈ ಸರ್ಕಾರ 'ಭದ್ರ'ವಾಗಿದ್ದಷ್ಟು, ದೇಶ 'ಅಭದ್ರ'ವಾಗಿಯೇ ಇರುತ್ತದೆ. ವಿತ್ತ ಮಂತ್ರಿ ಯಶವಂತ್ ಸಿನ್ಹಾ ತೊಲಗಲೇಬೇಕು!**

ಈ ವಂಚನೆ ನಡೆದದ್ದು ಹೇಗೆ?

ಕುಖ್ಯಾತ ಕೇತನ್ ಪಾರೀಖ್‌ನಂತಹ ವಂಚಕರು ಷೇರು ಪೇಟೆಯ ಮೂಲಕ ಅಪಾರ ಪ್ರಮಾಣದ ಸಂಪತ್ತನ್ನು ಕೊಳ್ಳೆ ಹೊಡೆಯಲು ಬಳಸಿದ ತಂತ್ರ ಹೊಸದೇನಲ್ಲ. ಯಾವುದೇ ಸತ್ವವಿಲ್ಲದ ಕಂಪನಿಯೊಂದರ ಷೇರುಗಳನ್ನು, ತಾವೇ ಹುಟ್ಟುಹಾಕಿದ ಹಲವು ನಾಮಮಾತ್ರ ಸಂಸ್ಥೆಗಳ ಮೂಲಕ, ಅಪಾರ ಪ್ರಮಾಣದಲ್ಲಿ ಖರೀದಿಸುವುದು. ಸತ್ವವಿಲ್ಲದ ಕಂಪೆನಿಯ ಷೇರುಗಳು ಮಾರುಕಟ್ಟೆಯಲ್ಲಿ ಕಡಿಮೆ ಬೆಲೆಗೆ ಲಭ್ಯ. ಆ ರೀತಿಯಾಗಿ ಖರೀದಿಸಿದ ಷೇರುಗಳನ್ನು ಯಾವುದಾದರೂ ಬ್ಯಾಂಕಿಗೆ ಅಥವಾ ವಿತ್ತೀಯ ಸಂಸ್ಥೆಗೆ ಅಡಮಾನ ಮಾಡಿ ಸಾಲ ಪಡೆಯುವುದು (ಷೇರುಗಳ ಮಾರು ಬೆಲೆಯ ಶೇ. 50 ರಷ್ಟು ಗರಿಷ್ಟ ಮಿತಿಯ ಸಾಲ ಬ್ಯಾಂಕು / ವಿತ್ತೀಯ ಸಂಸ್ಥೆಗಳು ನೀಡಬಹುದು) ಸಾಲದ ಹಣವನ್ನು ಪುನಃ ಅದೇ ಷೇರುಗಳನ್ನು ಮತ್ತಷ್ಟು ಖರೀದಿಸಲು ವಿನಿಯೋಗಿಸುವುದು. ಯಾವುದೇ ಕಂಪನಿಯ ಷೇರುಗಳು ಮಾರುಕಟ್ಟೆಯಲ್ಲಿ ಹೆಚ್ಚು ಹೆಚ್ಚಾಗಿ ಖರೀದಿಯಾಗುತ್ತಿರುವಾಗ ಸಹಜವಾಗಿಯೇ ಅದರ ಬೆಲೆ ಏರತೊಡಗುತ್ತದೆ. (ಇಲ್ಲಿ ಖರೀದಿಯಾಗುತ್ತಿರುವುದು ಮಾರುಕಟ್ಟೆಯ ಸಹಜ ಪ್ರವೃತ್ತಿಯಿಂದಲ್ಲ, ಬದಲಾಗಿ ದಲ್ಲಾಳಿಯೊಬ್ಬನ ಕೃತಕ ಕ್ರಮಗಳಿಂದಾಗಿ ಎಂಬುದನ್ನು ನೆನಪಿಟ್ಟುಕೊಳ್ಳಬೇಕು). ಷೇರುಗಳ ಬೆಲೆ ಏರಿದೊಡನೆ, ಈಗಾಗಲೇ ಬ್ಯಾಂಕಿನಲ್ಲಿ ಅಡವಿಟ್ಟ ಷೇರುಗಳ ಆಧಾರದಲ್ಲಿ ಇನ್ನಷ್ಟು ಸಾಲ ಸಿಗುತ್ತದೆ. ಈ ನಡುವೆ, ಇವರೇ ಹುಟ್ಟು ಹಾಕಿದ ಹಲವು ಕಂಪನಿಗಳಲ್ಲಿ ಒಂದು ಕಂಪನಿ, ಏರಿದ ಬೆಲೆಗೆ ಅವೇ ಷೇರುಗಳನ್ನು ಮತ್ತೊಂದರಿಂದ ಖರೀದಿಸುತ್ತದೆ. ಮಾರಿದ ಕಂಪನಿಗೆ ಬಂದ ಲಾಭವನ್ನು ಮತ್ತಷ್ಟು ಷೇರುಗಳ ಖರೀದಿಗೆ ಬಳಸಲಾಗುತ್ತದೆ. ಇದರ ಜತೆಗೇ ಷೇರುಗಳ ಖರೀದಿಗಾಗಿಯೇ ಮಾರುಕಟ್ಟೆಯಿಂದ ಸಾಲ ಪಡೆಯುವುದು. ಇಂತಹ ಕ್ರಮಗಳ ಪುನರಾವರ್ತನೆಯಿಂದಾಗಿ ಮಾರುಕಟ್ಟೆಯಲ್ಲಿ ಆ ಕಂಪನಿಯ ಷೇರುಗಳ ಬೆಲೆ ಗಗನಕ್ಕೇರುತ್ತದೆ. ಇದೇ ಸಮಯದಲ್ಲಿ ಮತ್ತೊಂದು ಪ್ರಕ್ರಿಯೆ ಜರಗುತ್ತದೆ. ತಮ್ಮ ಉಳಿತಾಯದ ಹಣವನ್ನು ಷೇರುಗಳಲ್ಲಿ ವಿನಿಯೋಗಿಸಿ ಸ್ವಲ್ಪ ಮಟ್ಟಿನ ಲಾಭ ಮಾಡಿಕೊಳ್ಳುವ ಆಶಯದ ಲಕ್ಷಾಂತರ ಸಣ್ಣ ಹೂಡಿಕೆದಾರರ ಗಮನವನ್ನು ಈ ಕಂಪೆನಿಯ, ಷೇರುಗಳು ಸೆಳೆಯುತ್ತವೆ. ದಿನೇ ದಿನೇ ಬೆಲೆ ಏರುತ್ತಿರುವ ಷೇರುಗಳನ್ನು ಕೊಂಡು, ಸ್ವಲ್ಪ ಸಮಯದ ನಂತರ ಮಾರಿದರೆ ಲಾಭವಾಗುತ್ತದೆ ಎಂಬ ಲೆಕ್ಕಾಚಾರದಿಂದ, ಅಂತಹ ಹೂಡಿಕೆದಾರರೂ ಈ ಷೇರುಗಳನ್ನು ಕೊಳ್ಳಲು ಧಾವಿಸುತ್ತಾರೆ. ಬರೇ ಕೊಳ್ಳುವ ಕ್ರಿಯೆಯೇ ನಡೆದಿರುವ ಈ ಷೇರುಗಳ ವ್ಯವಹಾರದಲ್ಲಿ, ಮತ್ತಷ್ಟು ಆಕಾಂಕ್ಷಿಗಳ ಪ್ರವೇಶದಿಂದಾಗಿ ಬೆಲೆ ಇನ್ನೂ ಏರುತ್ತದೆ. ಈ ಮೊದಲೇ ಷೇರುಗಳನ್ನು ಕೊಂಡುಕೊಂಡಿದ್ದ ನಾಮಮಾತ್ರ ಕಂಪನಿಗಳು, ಈ ಏರಿದ ಬೆಲೆಗೆ ಷೇರುಗಳನ್ನು ವ್ಯಾಪಕವಾಗಿ ಮಾರಿ ಹೇರಳ ಲಾಭಗಳಿಸುತ್ತವೆ. ಇದೇ ರೀತಿ ಮುಂದುವರಿದು, ಮಾರುಕಟ್ಟೆಯಲ್ಲಿ ಲಭ್ಯವಿರುವ ಹೆಚ್ಚುಕಮ್ಮಿ ಎಲ್ಲಾ ಷೇರುಗಳು ಮಾರಾಟವಾಗಿ, ಅಭಾವದ ಪರಿಸ್ಥಿತಿ ಉಂಟಾಗುತ್ತದೆ. (ಇದು ಕೃತಕವಾಗಿ ನಿರ್ಮಿತವಾದ ಅಭಾವದ ಪರಿಸ್ಥಿತಿ ಎಂಬುದನ್ನು ಮೊದಲೇ ಹೇಳಲಾಗಿದೆ.) ಕೊಳ್ಳುವ ಆಕಾಂಕ್ಷಿಗಳು ಹೇಗಾದರೂ ಮಾಡಿ ಅಂತಹ ಷೇರುಗಳನ್ನು ಖರೀದಿಸುವ ಹಂತಕ್ಕೆ ತಲುಪಿರುತ್ತಾರೆ. ಇಂತಹ ಅವಕಾಶವನ್ನೇ ಎದುರು ನೋಡುತ್ತಿರುವ ಈ ವಂಚಕರು ಒಮ್ಮೆಗೇ ತಮ್ಮಲ್ಲಿರುವ ಷೇರುಗಳನ್ನು ಮಾರಿಬಿಡುತ್ತಾರೆ. ಅದು ಕೂಡ ಏರಿದ ಬೆಲೆಗೆ! ತಮ್ಮ ಸ್ವಂತ ಚಿಕ್ಕಾಸನ್ನೂ ಕೂಡಾ ಬಳಸದೆ, ಮಾರುಕಟ್ಟೆಯನ್ನು ನಿಯಮ ಬಾಹಿರವಾಗಿ ಬಳಸಿಕೊಂಡೇ ಅಪಾರ ಸಂಪತ್ತನ್ನು ದೋಚುತ್ತಾರೆ! ಇದುವರೆಗೆ ಈ ಕಂಪನಿಯ ಷೇರುಗಳನ್ನ ಕೊಳ್ಳುವ ಭರಾಟೆಯಲ್ಲಿದ್ದ ಈ ವಂಚಕರು, ತಮ್ಮ ಗುರಿ ಈಡೇರಿದೊಡನೆ ಬೇರೊಂದು ಷೇರಿನ ಕಡೆ ಗಮನ ಹರಿಸುತ್ತಾರೆ. ಅಲ್ಲಿಯೂ ಅಂತದೇ ಕುಕ್ರಮಗಳನ್ನ ಬಳಸಿ, ಕೃತಕ ವಾತಾವರಣ ನಿರ್ಮಿಸಿ ಹಣ ದೋಚುತ್ತಾರೆ. ಹತ್ತು ಹಲವಾರು ಕಂಪನಿಗಳ ಷೇರುಗಳು ಈ ರೀತಿಯಾಗಿ ಬಹಳವಾಗಿ ಬೇಡಿಕೆಯಲ್ಲಿರುವ ವಾತಾವರಣ ನಿರ್ಮಾಣವಾಗುತ್ತದೆ.

ಇದರೊಂದಿಗೇ ಮತ್ತೊಂದು ವ್ಯತಿರಿಕ್ತವಾದ ಪ್ರಕ್ರಿಯೆಯೂ ನಿಧಾನವಾಗಿ ಮೂಡುತ್ತದೆ. ಕೊಳ್ಳುವಿಕೆ ಸಹಜವಾದುದಲ್ಲ ಮತ್ತು ಕೃತಕವಾಗಿ ನಿರ್ಮಿಸಿದ ವಿಧಾನವಾಗಿದ್ದುದರಿಂದ, ಈ ವಂಚಕರು ಕೊಳ್ಳುವುದನ್ನು ಸ್ಥಗಿತಗೊಳಿಸಿದ ಕೂಡಲೇ, ಮಾರುಕಟ್ಟೆಯಲ್ಲಿ ನಿಧಾನವಾಗಿ ಅಂತಹ ಷೇರುಗಳು ಮಾರಾಟವಾಗಲು ಪ್ರಾರಂಭವಾಗುತ್ತದೆ. ಇವತ್ತಲ್ಲ, ನಾಳೆ ಅದನ್ನು ಮಾರಾಟ ಮಾಡಿ ಲಾಭಗಳಿಸುವ ಆಸೆಯಿಂದ ಖರೀದಿಸಿದ ಹೂಡಿಕೆದಾರರೆಲ್ಲ ಈಗ ಮಾರಲು ಉದ್ಯುಕ್ತರಾಗುತ್ತಾರೆ. ಒಮ್ಮೆಗೆ ಬಹಳಷ್ಟು ಷೇರುಗಳು ಮಾರುಕಟ್ಟೆಗೆ ಬರುತ್ತವೆ. ಕೊಳ್ಳುವವರು ಕಡಿಮೆಯಾಗುತ್ತಾ ಹೋಗುತ್ತಾರೆ. ಈ ಹಂತದಲ್ಲಿ ಬೆಲೆಗಳು ಇಳಿಯತೊಡಗುತ್ತವೆ. ಬೆಲೆ ಇಳಿಯುತ್ತಿರುವ ಲಕ್ಷಣ ಕಂಡು ಬಂದ ಕೂಡಲೇ ಗಾಬರಿಯಾದ ಹೂಡಿಕೆದಾರರು ತಮ್ಮಲ್ಲಿರುವ ಷೇರುಗಳನ್ನೆಲ್ಲಾ ಮಾರಲು ಪ್ರಾರಂಭಿಸುತ್ತಾರೆ. ಬೆಲೆ ಮತ್ತಷ್ಟು ಇಳಿಯುತ್ತದೆ. ಮಾರುವವರೇ ಎಲ್ಲರೂ; ಖರೀದಿಸುವವರೇ ಇಲ್ಲ. ಮಾರುಕಟ್ಟೆಯಲ್ಲಿ ಗೊಂದಲ ಸೃಷ್ಟಿಯಾಗುತ್ತದೆ. ಏರಿದ ಬೆಲೆಗಳು, ಅದಕ್ಕಿಂತ ಶೀಘ್ರವಾಗಿ ಇಳಿದು ತಳವನ್ನು ಮುಟ್ಟುತ್ತವೆ. ಲಕ್ಷಾಂತರ ಹೂಡಿಕೆದಾರರು ವಿನಿಯೋಗಿಸಿದ ಹಣ, ಕೆಲವೇ ಕೆಲವು ಲೂಟಿಕೋರರ ಪಾಲಾಗುತ್ತದೆ, ಇಷ್ಟೇ ಅಲ್ಲ, ಈ ವಂಚಕರಿಗೆ ನೀಡಿದ ಬ್ಯಾಂಕ್ ಸಾಲವೂ ಮುಳುಗುತ್ತದೆ. ಏಕೆಂದರೆ, ಅಡವಿಟ್ಟ ಷೇರುಗಳಿಗೆ ಈಗ ಕವಡೆ ಕಾಸೂ ಗಿಟ್ಟುವುದಿಲ್ಲ!

ನಮ್ಮ ದೇಶದಲ್ಲಿ ದೋಚಿದ ಹಣವನ್ನು ಮಾರಿಷಸ್ ದ್ವೀಪದ ಮೂಲಕ ವಿದೇಶಕ್ಕೆ ಸಾಗಿಸಲಾಗುತ್ತದೆ. ಕೇತನ್ ಪಾರಿಖ್‌ಕೂಡಾ ಮಾರಿಷಸ್‌ನ ಬ್ರೆಂಟ್ ಫೀಲ್ಡ್ ಹೋಲ್ಡಿಂಗ್ (Brentfield Holding) ಕೆನ್ಸಿಂಗ್ಟನ್ ಇನ್‌ವೆಸ್ಟ್‌ಮೆಂಟ್ಸ್ (Kensington hivesturents) ವೇಕ್ ಫೀಲ್ಡ್ ಹೋಲ್ಡಿಂಗ್ಸ್, (Wakefieldid holdings), ಯೂರೋಪಿಯನ್ ಇನ್‌ವೆಸ್ಟ್‌ಮೆಂಟ್ಸ್ (European Investments) ಫಾರ್ ಈಸ್ಟ್ ಇನ್ವೆಸ್ಟ್‌ಮೆಟ್ಸ್ (Far East Investments) ಮುಂತಾದ ನಾಮಮಾತ್ರ ಕಂಪನಿಗಳ ಮೂಲಕ ಅಪಾರ ಮೊತ್ತದ ಹಣವನ್ನು ದೇಶದಿಂದ ಹೊರಕ್ಕೆ ಸಾಗಿಸಿದ್ದು ಈಗ ಬೆಳಕಿಗೆ ಬಂದಿದೆ. ಈ ಕಂಪನಿಗಳ ಪಾವತಿಯಾದ ಬಂಡವಾಳ ಕೇವಲ ರೂ 8 ಲಕ್ಷ ಮಾತ್ರ. ಆದರೆ ಸಾವಿರಾರು ಕೋಟಿ ರೂ. ಗಳನ್ನು ಈ ದೇಶದಿಂದ ಹೊರಕ್ಕೆ ಅವು ಸಾಗಿಸಿವೆ. ಮಾರಿಷಸ್‌ನಿಂದ ಬಂಡವಾಳದ ರೂಪದಲ್ಲಿ ಹರಿದು ಬಂದ ಹಣಕ್ಕಿಂತಲೂ ರೂ. 2900 ಕೋಟಿಯಷ್ಟು ಹೆಚ್ಚು ಹಣ ನಮ್ಮ ದೇಶದಿಂದ ಮಾರಿಷಸ್‌ಗೆ ರವಾನೆಯಾಗಿದೆ. ದೇಶದ ಸಂಪತ್ತು ಲೂಟಿಯಾಗಲು ಮಾರಿಷಸ್ ದಾರಿಯನ್ನು ಸುಲಭವಾಗಿ ಬಳಸಲು ವಂಚಕರಿಗೆ ನಮ್ಮ ವಿತ್ತ ಮಂತ್ರಿ ಯಶವಂತ್ ಸಿನ್ಹಾ ಅನುಮಾಡಿಕೊಟ್ಟಿದ್ದಾರೆ.

......ಪರೀಕ್ಷೆ ಜ್ವರ

ಪುಟ 3 ರಿಂದ

ಆದರೆ ನಮ್ಮಲ್ಲಾಗುತ್ತಿರುವುದು ನೆನಪಿಸಲ್ಪಟ್ಟುಕೊಂಡು ಪರೀಕ್ಷೆಯಲ್ಲಿ ಬರೆಯುವ ಪದ್ಧತಿ. ಈ ಪದ್ಧತಿ ಸರಿಯಿಲ್ಲ, ವೈಜ್ಞಾನಿಕ ಪದ್ಧತಿ ಬರಬೇಕೆಂದು ತಜ್ಞರು ಹೇಳುತ್ತಾ ಬಂದಿದ್ದರೂ ಬದಲಿ ಮಾರ್ಗ ಇನ್ನು ಗಾವುದ ದೂರವೇ ಉಳಿದಿದೆ. ನೆನಪಿಟ್ಟುಕೊಂಡು ಬರೆಯುವ ಪರೀಕ್ಷೆಗೆ ಶಿಕ್ಷಕರು ಹಾಜರಾದರೂ ಇದರಲ್ಲಿ ಏನು ವಿಶೇಷ ಕಾಣಲು ಸಾಧ್ಯವೇ ಇಲ್ಲ.

ಮಕ್ಕಳೊಂದಿಗೆ ಪ್ರೀತಿಯಿಂದ ವರ್ತಿಸುತ್ತಾ ಚಟುವಟಿಕೆಗಳ ಮೂಲಕ ಆಕರ್ಷಕವಾಗಿ ಪಾಠ ಮಾಡುತ್ತಾ ಸಮುದಾಯದೊಂದಿಗೆ ಉತ್ತಮ ಸಂಬಂಧ ಇರಿಸಿಕೊಂಡು ಶಾಲೆಯ ಅಭಿವೃದ್ಧಿ ಮಗುವಿನ ಹಾಜರಾತಿ, ಕಲಿಕೆ, ಇವುಗಳ ಉನ್ನತೀಕರಣಕ್ಕೆ ಶ್ರಮಿಸುವುದು ಶಿಕ್ಷಕನ ಕೆಲಸವಾಗುತ್ತದೆ. ಇದನ್ನು ಒಂದು ಪರೀಕ್ಷೆ ಕಂಡು ಹಿಡಿಯಲಾಗದು. ಇದಲ್ಲದರ ಜೊತೆಗೆ ಯಾವುದೇ ವ್ಯಕ್ತಿ ಒಂದು ಹಂತದ ವಯಸ್ಸು ಮೀರಿದ ನಂತರ ಪರೀಕ್ಷೆ ಬರೆಯುವುದೂ ಕಷ್ಟವಾಗುತ್ತದೆ. ಇದನ್ನು ನಮ್ಮ ಪರೀಕ್ಷಾಪರರು ಆಲೋಚಿಸಬೇಕಾಗುತ್ತದೆ.

ಮೌಲ್ಯಮಾಪನ : ಯಾವುದೇ ವ್ಯಕ್ತಿಯ ಕೆಲಸವನ್ನು ಮೌಲ್ಯಮಾಪನಕ್ಕೆ ತೊಡಗಿಸುವುದು ತಪ್ಪೇನಿಲ್ಲ. ಅದನ್ನು ಪರೀಕ್ಷೆಯ ಹೆಸರಿನಲ್ಲಿ ಪರೀಕ್ಷೆಯ ರೀತಿ ಮಾಡುವುದು ಸರಿಯಲ್ಲ. ಶಿಕ್ಷಕನ ಮೌಲ್ಯಮಾಪನವನ್ನು ಶಾಲೆಗೆ ಬರುವ ಮಕ್ಕಳ ಸಂಖ್ಯೆ, ಕಲಿಯುವ ವಿಧಾನ, ಅಲ್ಲಿನ ಜನರ ಅಭಿಪ್ರಾಯದಿಂದಲೇ ಕಾಣಬಹುದು.

ಶಿಕ್ಷಕ-ಶಿಕ್ಷಕಿ ಹಿಂದುಳಿದಿರುವ ಅಂಶವನ್ನು ಗುರ್ತಿಸಲು ಹಾಗೂ ಉನ್ನತೀಕರಣಕ್ಕಾಗಿ ಪರೀಕ್ಷೆ ಎಂದು ಹೇಳಲಾಗುತ್ತಿದೆ. ಆದರೆ ಈ ಅಂಶಗಳನ್ನು ನಾವು ಅನೇಕ ರೀತಿಯಲ್ಲಿ ತಿಳಿಯಬಹುದಾಗಿದೆ. ಇತ್ತೀಚೆಗೆ ರಾಜ್ಯದಾದ್ಯಂತ ಚೈತನ್ಯ ತರಬೇತಿಯನ್ನು 6 ದಿನಗಳ ಕಾಲ ನಡೆಸಲಾಗಿದೆ. ಹಿಂದೆ ಡಿಪಿಇಪಿ ಯೋಜನೆಯಡಿಯಲ್ಲಿಯೂ ತರಬೇತಿಗಳನ್ನು ನೀಡಲಾಗಿದೆ. ಇಂತಹ ತರಬೇತಿಯಲ್ಲಿಯೇ ಶಿಕ್ಷಕರ ಮೌಲ್ಯಮಾಪನ ಮಾಡಬಹುದು. ಈ ಮೌಲ್ಯಮಾಪನಗಳ ನಂತರ ಆಗಿಂದಾಗ್ಗೆ ಶಿಕ್ಷರಿಗೆ ಸೂಕ್ತವಾದ ತರಬೇತಿಗಳನ್ನು ಮಾಡುತ್ತ, ಅವರಲ್ಲಿ ಆತ್ಮವಿಶ್ವಾಸ, ಉತ್ಸಾಹಗಳನ್ನು ತರುತ್ತಾ ಶಿಕ್ಷಣದ ಸಾರ್ವತ್ರೀಕರಣದ ಕೆಲಸದಲ್ಲಿ ತೊಡಗಿಸಿಕೊಳ್ಳುವಂತೆ ಮಾಡಬಹುದಾಗಿದೆ.

ಅನೇಕ ಅನುಮಾನಗಳು : ಶಿಕ್ಷಕರಿಗೆ ಪರೀಕ್ಷೆ ನಡೆಸಿ ಫಲಿತಾಂಶ ಬಂದ ನಂತರ ಅವರ ಮೇಲೆ ಯಾವ ರೀತಿಯ ಕ್ರಮ ಕೈಗೊಳ್ಳಬಹುದು? ಯಾವ ರೀತಿಯ ಕಿರುಕುಳ ಉಂಟಾಗಬಹುದು? ಎಂಬ ಅನುಮಾನಗಳು ಮೂಡುವುದು ಸಹಜ. ಖಾಸಗೀಕರಣದ ಈ ಸಂದರ್ಭದಲ್ಲಿ ಕೆಲವರನ್ನು ಅನುಪಯುಕ್ತ ಎಂಬ ಹಣೆಪಟ್ಟಿ ಕಟ್ಟಿ ಮನೆಗೆ ಕಳುಹಿಸಲೂ ಬಹುದು. ಯಾವುದನ್ನೂ ಇಷ್ಟೇ ಎಂದು ಹೇಳಲು ಸಾಧ್ಯವೇ ಇಲ್ಲ. ಮನೆಗೆ ಕಳುಹಿಸುವ ಉದ್ದೇಶವೂ ಈ ಎಲ್ಲ ಪ್ರಯತ್ನಗಳ ಹಿಂದೆ ಇರಬಾರದೇಕೆ ಎಂಬ ಪ್ರಶ್ನೆಯೂ ಮೂಡುತ್ತದೆ. ಇದೆಲ್ಲಾ ಆಗದಿದ್ದರೂ ಶಿಕ್ಷಕರ ಫಲಿತಾಂಶ ಬಲ್ಲ ಮೇಲಿನ ಅಧಿಕಾರಿಗಳು ಸದರಿ ಶಿಕ್ಷಕರನ್ನು ನೋಡುವ ವಿಧಾನವಂತೂ ಬದಲಾಗಲು ಸಾಧ್ಯವಿದೆ.

ಸಂಪನ್ಮೂಲ ಅಪವ್ಯಯ :

ಪರೀಕ್ಷೆ ನಡೆಸುವ ಮೌಲ್ಯಮಾಪನ ಮಾಡುವ ಕ್ರಿಯೆಯಲ್ಲಿ ಖರ್ಚು ಮಾಡಲಾಗುವ ಸಂಪನ್ಮೂಲ ಹಾಗೂ ಶ್ರಮವನ್ನೂ ನಾವು ಇಲ್ಲಿ ಲೆಕ್ಕಾ ಹಾಕಬೇಕಾಗುತ್ತದೆ. ಆತುರಾತುರವಾಗಿ ರೂಪಿಸುವ ಇಂತಹ ಕಾರ್ಯಕ್ರಮಗಳಿಂದ ಸಂಪನ್ಮೂಲ ಹಾಗೂ ಶ್ರಮ ನಷ್ಟವಾಗುವುದು ನಾವು ಕಾಣಬಹುದು.

ಶಿಕ್ಷಕರಿಗೇ ಏಕೆ? ಪರೀಕ್ಷೆ ಎಂಬ ಸ್ಥಳದಲ್ಲಿ ಮೌಲ್ಯಮಾಪನ ಇರಬೇಕು. ಅದು ಗಟ್ಟಿ ಮಾಡಿಕೊಂಡು ಬರೆಯುವುದಕ್ಕಿಂತ ಸಂಪೂರ್ಣ ಭಿನ್ನವಾಗಿರಬೇಕೆಂದು ಹೇಳುವ ಸಂದರ್ಭದಲ್ಲಿ ಅದು ಶಿಕ್ಷಕರಿಗೆ ಏಕೆ ಎಂಬ ಪ್ರಶ್ನೆ ಸಹಜವಾಗಿ ಮೂಡುತ್ತದೆ. ಸದರಿ ಶಿಕ್ಷಕರನ್ನು, ತರಬೇತಿಗೊಳಿಸುವ ತರಬೇತಿ ಸಂಸ್ಥೆಗಳು, ಅಧಿಕಾರಿಗಳು ಪಠ್ಯರೂಪಿಸುವವರು ಈ ಎಲ್ಲರನ್ನು ಮೌಲ್ಯಮಾಪನ ಕ್ರಿಯೆಗೆ ಒಳಪಡಿಸಬೇಕಾಗುತ್ತದೆ. ಆಗ ಮಾತ್ರ ಇಡೀ ವ್ಯವಸ್ಥೆ ಉತ್ತಮಗೊಳ್ಳಲು ಸಾಧ್ಯ.

ಎಲ್ಲರೂ ಒಂದು ತಂಡ

ನಮ್ಮ ಮೂಲಭೂತ ಪ್ರಶ್ನೆಯಾದ ಪ್ರಾಥಮಿಕ ಶಿಕ್ಷಣದ ಸಾರ್ವತ್ರಿಕರಣದ ಬಗ್ಗೆ ಹೇಳುವುದಾದರೆ ಇದು ಒಂದು ಸಂಗೀತದ ತಂಡವಿದ್ದಂತೆ. ಒಬ್ಬರು ಉತ್ತಮವಾಗಿ ನಿರ್ವಹಿಸಿದರೆ ಸಾಲದು. ಚುನಾಯಿತ ಜನಪ್ರತಿನಿಧಿಗಳು, ಸಮುದಾಯ ಪೋಷಕರು, ಅಧಿಕಾರಿಗಳು, ಶಿಕ್ಷಕರು ಎಲ್ಲರೂ ಪಾತ್ರಧಾರಿಗಳೇ. ಆದರಲ್ಲಿ ಶಿಕ್ಷಕರದು ಪ್ರಮುಖ ಪಾತ್ರ. ಆ ಪಾತ್ರ ನಿರ್ವಹಣೆಗೆ ಸೂಕ್ತವಾದ ವಾತಾವರಣ ಮೂಡಿಸುವುದು ನಮ್ಮ ಪ್ರಯತ್ನ. ಅದು ಶಿಕ್ಷಕ ಸಮುದಾಯಕ್ಕೆ ಅನವಶ್ಯಕ ಸಮಸ್ಯೆ, ಒತ್ತಡ ಸೃಷ್ಟಿಸದೇ ನೈಸರ್ಗಿಕವಾದ ಪ್ರೀತಿ ವಿಶ್ವಾಸಗಳಿಂದ ಕೂಡಿರಬೇಕಾಗುತ್ತದೆ. ಇಂತಹ ಒಂದು ದಿಕ್ಕಿಗೆ ಸಾಗುವ ಪ್ರಯತ್ನದಲ್ಲಿ ನಾವೆಲ್ಲರೂ ಹೆಜ್ಜೆ ಹಾಕಬೇಕಾಗುತ್ತದೆ.

ಈ. ಬಸವರಾಜು, ಐಜಿಪಿಎಸ್

ಚೀನಾ ಕಮ್ಯುನಿಸ್ಟ್ ಪಕ್ಷಕ್ಕೆ 80 ವರ್ಷಗಳು

'ಮೂರು ಪ್ರತಿನಿಧಿತ್ವಗಳ' ದಿಟ್ಟ ದೂರದರ್ಶಿತ್ವ

ಚೀನಾ ಕಮ್ಯುನಿಸ್ಟ್ ಪಕ್ಷಕ್ಕೆ ಈ ಜುಲೈ 1 ಕ್ಕೆ 80 ವರ್ಷಗಳಾಗುತ್ತವೆ. ಯಾವುದೇ ಸಂಘಟನೆಯ ಜೀವನದಲ್ಲಿ 80 ವರ್ಷಗಳು ಪೂರ್ಣವಾಗುವುದು ಒಂದು ಪ್ರಮುಖ ಘಟ್ಟ. ಇದು ಆರುವರೆ ಕೋಟಿ ಸದಸ್ಯರನ್ನು ಹೊಂದಿರುವ ಈ ಪಕ್ಷ ಜಗತ್ತಿನ ಅತಿದೊಡ್ಡ ಕಮ್ಯುನಿಸ್ಟ್ ಪಕ್ಷ ಮಾತ್ರವಲ್ಲ ಅತಿದೊಡ್ಡ ರಾಜಕೀಯ ಪಕ್ಷ ಕೂಡ. 52 ವರ್ಷಗಳಿಂದ ಸತತವಾಗಿ ಅಧಿಕಾರದಲ್ಲಿದ್ದು ಚೀನಾವನ್ನು ಸಾಮ್ರಾಜ್ಯಶಾಹಿಗಳ ಕಬಂಧ ಬಾಹುಗಳಿಂದ ಬಿಡಿಸಿ ಜಗತ್ತಿನ ಎರಡನೇ ಅತ್ಯಂತ ಪ್ರಬಲ ದೇಶದ ಸ್ಥಾನಕ್ಕೆ ಒಯ್ದ ಪಕ್ಷ. ರಶ್ಯಾ ಮತ್ತು ಪೂರ್ವ ಯುರೋಪಿನಲ್ಲಿ ಸಮಾಜವಾದಕ್ಕೆ ಹಿನ್ನಡೆಯಾದ ಪರಿಸ್ಥಿತಿಯಲ್ಲೂ, ಧೃತಿಗೆಡದೆ ಸಮಾಜವಾದದ ಹಾದಿಯಲ್ಲಿ ದೃಢವಾಗಿ ಮುನ್ನಡೆಯುತ್ತಿರುವ ಪಕ್ಷ. ಏಕಮಾತ್ರ ಸೂಪರ್‌ಪವರ್ ಎಂದು ಬೀಗುತ್ತಾ, ಮನಬಂದಂತೆ ಮಾಡುವ ಅಮೆರಿಕದ ಸೊಕ್ಕಿಗೆ ಸವಾಲು ಹಾಕಬಲ್ಲ ಸ್ಥಿತಿಗೆ ತಮ್ಮ ದೇಶವನ್ನು ತಂದ ಪಕ್ಷ. ಜುಲೈ 1 ರಂದು ಪಕ್ಷದ ಪ್ರಧಾನ ಕಾರ್ಯದರ್ಶಿ ಜಿಯಾಂಗ್ ಝುಮಿನ್ ಬಿಜಿಂಗ್‌ನಲ್ಲಿ ಪಕ್ಷದ 80ನೇ ವಾರ್ಷಿಕೋತ್ಸವ ಸಂದರ್ಭದಲ್ಲಿ ಮಾಡಿದ ದೀರ್ಘ ಭಾಷಣದಲ್ಲಿ ಕಳೆದ 80 ವರ್ಷಗಳಲ್ಲಿ ಪಕ್ಷಧ ಸಾಧನೆಗಳು, ಸೋಲು-ಗೆಲುವುಗಳು, ಪ್ರಮುಖ ಘಟ್ಟಗಳ ಸಿಂಹಾವಲೋಕನ ಮಾಡಿದರು. ಇದಲ್ಲದೆ ಮುಂದಿನ ಕಾಲಘಟ್ಟದಲ್ಲಿ ಪಕ್ಷದ ಕಣ್ಣೋಟ, ಯೋಜನೆಗಳ, ಕನಸುಗಳ ಬಗ್ಗೆ ಸಮಗ್ರ ಚಿತ್ರ ನೀಡಿದರು. ಚೀನಾ ಎತ್ತ ಸಾಗಿದೆ? ಚೀನಾದಲ್ಲಿ ಮತ್ತು ಜಗತ್ತಿನಲ್ಲಿ ಸಮಾಜವಾದ ಹೇಗೆ ಮುನ್ನಡೆಯಬಹುದು? ಭಾರತದಂತಹ ಬಡದೇಶಗಳು ಇದರಿಂದ ಏನು ಕಲಿಯಬಹುದು? ಸಮಾಜವಾದಿ ಚಳುವಳಿ ಏನು ಕಲಿಯಬಹುದು? ಎಂಬ ಕುತೂಹಲ ಇದ್ದ ಎಲ್ಲರೂ ಝುಮಿನ್ ಅವರ ಭಾಷಣ ಅಭ್ಯಾಸ ಮಾಡಬೇಕು. ಚೀನಾ ಕಮ್ಯುನಿಸ್ಟ್ ಪಕ್ಷದ 80 ವರ್ಷಗಳ ಸಾಧನೆಗಳ, ಮಹತ್ವದ, ಭವಿಷ್ಯದ ಯೋಜನೆಗಳ ವಿಶ್ಲೇಷಣೆ ಇಲ್ಲಿದೆ. ಝುಮಿನ್ ಅವರ ಮಹತ್ವದ ಭಾಷಣದ ಸಾರಾಂಶವೂ ಇಲ್ಲಿದೆ. ಈ ಮೂಲಕ ನಾವೂ ಚೀನಾ ಕಮ್ಯುನಿಸ್ಟ್ ಪಕ್ಷದ 80ನೇ ವಾರ್ಷಿಕೋತ್ಸವದಲ್ಲಿ ಭಾಗಿಯಾಗೋಣ



ಶರತ್‌ಚಂದ್ರ

ಚೀನಾ ಕಮ್ಯುನಿಸ್ಟ್ ಪಕ್ಷದ 80ನೇ ವಾರ್ಷಿಕೋತ್ಸವ ಇಡೀ ಜಗತ್ತಿನ ಶಾಂತಿ ಮತ್ತು ಪ್ರಗತಿಗೆ ಹಾರೈಸುವ ಎಲ್ಲಾ ಜನರಿಗೆ ಸ್ಫೂರ್ತಿ, ಸಂತೋಷ ಕೊಡುವ ಸಂದರ್ಭ. ಚೀನಾದ ಕ್ರಾಂತಿ ರಶ್ಯನ್ ಕ್ರಾಂತಿಯ ನಂತರ ಅತಿ ಮಹತ್ವದ ಘಟನೆ. ಚೀನಾ ಜಗತ್ತಿನ ಅತ್ಯಂತ ಹೆಚ್ಚಿನ ಜನಸಂಖ್ಯೆಯ ದೇಶವಾಗಿರುವುದು ಮತ್ತು ಅತ್ಯಂತ ಪ್ರಾಚೀನ ನಾಗರಿಕತೆಯ ದೇಶವಾಗಿರುವುದು ಇದಕ್ಕೆ ಕಾರಣ. ಅತ್ಯಂತ ಹಿಂದುಳಿದ ದೇಶದಲ್ಲಿ, ಪ್ರತಿಕೂಲ ಪರಿಸ್ಥಿತಿಯಲ್ಲಿ ಜನತಾ ಪ್ರಜಾಪ್ರಭುತ್ವ ಕ್ರಾಂತಿ ಮಾಡಿದ ಚೀನಾ ಕಮ್ಯುನಿಸ್ಟ್ ಪಕ್ಷ ಆಮೇಲೂ ಚೀನಾವನ್ನು ಆರ್ಥಿಕವಾಗಿ, ರಾಜಕೀಯವಾಗಿ, ಮಿಲಿಟರಿಯಾಗಿ ಅತ್ಯಂತ ಪ್ರಬಲ ದೇಶವಾಗಿ ಕಟ್ಟುವುದರಲ್ಲಿ ಅತಿ ದೊಡ್ಡ ಕಾಣಿಕೆ ನೀಡಿದೆ. ಸೋವಿಯತ್ ಒಕ್ಕೂಟ ಮತ್ತು ಪೂರ್ವ ಯುರೋಪಿನಲ್ಲಿ ಸಮಾಜವಾದಕ್ಕೆ ಆದ ಹಿನ್ನಡೆಯ ಸಂದರ್ಭದಲ್ಲೂ ಧೃತಿಗೆಡದೆ ಪ್ರತಿಕೂಲ ಅಂತರ್‌ರಾಷ್ಟ್ರೀಯ ಪರಿಸ್ಥಿತಿಯಲ್ಲೂ ತನ್ನ ಸ್ವತಂತ್ರ ಬೆಳವಣಿಗೆಯ ಪಥದಲ್ಲಿ ಮುನ್ನಡೆಯುತ್ತಿರುವ ಪಕ್ಷ.

ಝುಮಿನ್‌ರ ಭಾಷಣ

80ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಝುಮಿನ್ ಮಾಡಿದ ಭಾಷಣದಲ್ಲಿ ಪಕ್ಷದ 80 ವರ್ಷಗಳ ಅನುಭವದ ಸಿಂಹಾವ ಲೋಕನ ಮಾಡಿದ್ದಲ್ಲದೆ ಮುಂದಿನ ಅವಧಿಗೆ ಪಕ್ಷದ ಕಣ್ಣೋಟ, ಯೋಜನೆ ಮುಂದಿಟ್ಟಿದ್ದಾರೆ. ಝುಮಿನ್‌ರ ಈ ಮಹತ್ವದ ದೀರ್ಘ ಭಾಷಣದಲ್ಲಿ ಮೂರು ಪ್ರಮುಖ ಭಾಗಗಳಿವೆ. ಮೊದಲನೆಯ ಭಾಗದಲ್ಲಿ 80 ವರ್ಷಗಳ ಪಕ್ಷದ ಸಾಧನೆಗಳು, ಅನುಭವಗಳ ಸಾರ ಇದೆ. ಎರಡನೆಯ ಭಾಗದಲ್ಲಿ ಚೀನಾ ಕಮ್ಯುನಿಸ್ಟ್ ಪಕ್ಷ ಪ್ರತಿನಿಧಿಸಬೇಕಾದ ಮೂರು ಪ್ರಮುಖ ವಿಷಯಗಳನ್ನು ವಿವರಿಸಿದ್ದಾರೆ. (ಈಗ ಅದು 'ಮೂರು ಪ್ರತಿನಿಧಿತ್ವ'ಗಳು ಎಂದು ಹೆಸರಾಗಿದೆ). ಮೂರನೆಯ ಭಾಗದಲ್ಲಿ ಚೀನಾ ಕಮ್ಯುನಿಸ್ಟ್ ಪಕ್ಷ 'ಮೂರು ಪ್ರತಿನಿಧಿತ್ವ'ದ ನೀತಿ ಜಾರಿ ಮಾಡಲು ಏನು ಮಾಡಬೇಕು ಎಂದು ಝುಮಿನ್ ವಿವರಿಸುತ್ತಾರೆ.

ಝುಮಿನ್ ಮೊದಲ ಭಾಗದಲ್ಲಿ ಚೀನಾದ ಚರಿತ್ರೆಯಲ್ಲೇ ಅತ್ಯಂತ ಸಮಗ್ರ ಮತ್ತು ಆಳವಾದ ಸಾಮಾಜಿಕ ಬದಲಾವಣೆ' ಮಾಡಿದ್ದು ಕಮ್ಯುನಿಸ್ಟ್ ಪಕ್ಷದ ಅತ್ಯಂತ ಮಹತ್ವದ ಸಾಧನೆ ಎಂದು ಹೇಳುತ್ತಾರೆ.

ಇದರಲ್ಲಿ ಪಕ್ಷದ ದೊಡ್ಡ ಪಾತ್ರ ವಿವರಿಸಲು, ಅವರು ಕಳೆದ ಎಂಬತ್ತು ವರ್ಷದಲ್ಲಿ ಪಕ್ಷದ ನಾಯಕತ್ವದಲ್ಲಿ ಸಾಧಿಸಿದ ಪ್ರಗತಿಯನ್ನು ಅದರ ಮೊದಲಿನ ಎಂಭತ್ತು ವರ್ಷಗಳಿಗೆ (1840-1920 ವರೆಗಿನ ಅವಧಿ ಚೀನಾ ಸಾಮ್ರಾಜ್ಯಶಾಹಿ ಕಪಿ ಮುಷ್ಟಿಗೆ ಸಿಲುಕಿ ಹಾಗೂ ಪಾಳೆಯಗಾರಿ - ಯುದ್ಧಕೋರ ದುಷ್ಪರಿಣಾಮಗಳಿಗೆ ನಲುಗಿದ ಅವಧಿ. 1840-42 ಪರ 'ಅಫೀಮು ಯುದ್ಧ' ದಿಂದ ಆರಂಭವಾಗುತ್ತದೆ ಈ ಕರಾಳ ಅವಧಿ. ಮಾರ್ಮಿಕವಾಗಿ ಹೋಲಿಸುತ್ತಾರೆ. ಪಕ್ಷದ ನಾಯಕತ್ವದ ಕ್ರಾಂತಿಯ ನಂತರ ಒಟ್ಟು ಆರ್ಥಿಕ ಉತ್ಪನ್ನ 56 ಪಟ್ಟು ಹೆಚ್ಚಾದ್ದು, 120 ಕೋಟಿ ಚೀನೀಯರ ಆಹಾರ-ಬಟ್ಟೆ-ಮನೆಗಳ ಮೂಲಭೂತ ಅವಶ್ಯಕತೆ ಪೂರೈಸಿದ್ದು ಮಾತ್ರವಲ್ಲದೆ ಉತ್ತಮ ಜೀವನ ಮಾಡುವ ಸ್ಥಿತಿ ತಲುಪಿದನ್ನು ಸಾಧನೆಗಳಲ್ಲಿ ಗುರುತಿಸುತ್ತಾರೆ. ಈ ಅವಧಿಯಲ್ಲಿ ಕ್ರಾಂತಿಯ ಮೊದಲು ಸಾಮ್ರಾಜ್ಯಶಾಹಿಗಳ ವಿರುದ್ಧ ಹಾಗೂ ಆಂತರಿಕ ಪ್ರತಿಗಾಮಿಗಳ ವಿರುದ್ಧ ಇಡೀ ಚೀನಾದ ಜನತೆಯನ್ನು ಒಗ್ಗೂಡಿಸಿ ನಾಯಕತ್ವ ವಹಿಸಿದ್ದು, ಇದಕ್ಕಾಗಿ ಅಮೋಘ ತ್ಯಾಗ-ಬಲಿದಾನಗಳನ್ನು ಮಾಡಿದ್ದನ್ನು ನೆನಪಿಸಿಕೊಳ್ಳುತ್ತಾರೆ. ಸಾಮ್ರಾಜ್ಯಶಾಹಿಗಳ ಪಿತೂರಿಯಿಂದ ಇನ್ನೂ ಐಕ್ಯ ಚೀನಾದ ಹೊರಗೆ ಉಳಿದಿದ್ದ ಹಾಂಕಾಂಗ್, ಮಕಾವೋಗಳನ್ನು 'ಶಾಂತಿಯುತವಾಗಿ ಪುನರೈಕ್ಯ' ಗೊಳಿಸಿದ್ದು (ಇನ್ನು ಉಳಿದಿರುವ ತೈವಾನ್ ಬಗ್ಗೆ ನೀತಿ ರೂಪಿಸುತ್ತಿರುವುದು) ಪಕ್ಷದ ಧೀಮಂತ ನಾಯಕತ್ವದಿಂದ ಸಾಧ್ಯವಾಯಿತು. 50 ವರ್ಷಗಳ ಹಿಂದೆ 'ಏಶ್ಯಾದ ರೋಗಿಷ್ಟ ದೇಶ' ಎಂಬ ಅಂತರ್‌ರಾಷ್ಟ್ರೀಯ ಅನುಮಾನದಿಂದ ಬಳಲುತ್ತಿದ್ದ ಚೀನಾವನ್ನು ಇಂದಿನ ಅತ್ಯಂತ ಪ್ರತಿಕೂಲ ಪರಸ್ಥಿತಿಯಲ್ಲೂ ಸ್ವತಂತ್ರ ವಿದೇಶ ನೀತಿ ಹೊಂದಿರುವ ಎರಡನೇಯ ಅತ್ಯಂತ ಬಲಾಢ್ಯ ದೇಶವಾಗಿಸಿದ್ದು ಪಕ್ಷದ ಇನ್ನೊಂದು ದೊಡ್ಡ ಸಾಧನೆ ಎನ್ನುತ್ತಾರೆ ಝುಮಿನ್. ಇವೆಲ್ಲವೂ ಸಾಧ್ಯವಾದ್ದು ಚೀನಾ ಕಮ್ಯುನಿಸ್ಟ್ ಪಕ್ಷ ಮಾರ್ಕ್ಸ್‌ವಾದದ ಮತ್ತು ಚೀನಾದ ಪರಿಸ್ಥಿತಿಯ ವೈಜ್ಞಾನಿಕ ಅಧ್ಯಯನದ ಆಧಾರದ ಮೇಲೆ ರೂಪಿಸಿದ ನೀತಿಗಳ ಮೇಲೆ ಆಧಾರಿತ ನಾಯಕತ್ವದಿಂದ - ಎಂದು ಝುಮಿನ್ ಒತ್ತಿ ಹೇಳಿದರು.

'ಮೂರು ಪ್ರತಿನಿಧಿತ್ವಗಳು'

ಝುಮಿನ್‌ರ ಭಾಷಣದ ಎರಡನೇ ಭಾಗ ಅತ್ಯಂತ ಮಹತ್ವದ ಭಾಗ. ಇಲ್ಲಿ ಝುಮಿನ್ ಚೀನಾ ಕಮ್ಯುನಿಸ್ಟ್ ಪಕ್ಷ ಮೂರು ಪ್ರಮುಖ ವಿಷಯಗಳನ್ನು ಯಾವಾಗಲೂ ಪ್ರತಿನಿಧಿಸಬೇಕು. ಇದು ಮುಂದಿನ ಕಾಲಘಟ್ಟದಲ್ಲಿ ಪಕ್ಷದ ಎಲ್ಲಾ ಚಟುವಟಿಕೆಗಳಿಗೆ ದಾರಿ ತೋರಿಸುವ 'ಮಂತ್ರ' ಆಗಬೇಕು ಎಂದರು.

1. ಚೀನಾದ ಅತ್ಯಂತ ಅಭಿವೃದ್ಧ ಉತ್ಪಾದಕ ಶಕ್ತಿಗಳ ಬೆಳವಣಿಗೆಯನ್ನು ಪ್ರತಿನಿಧಿಸಬೇಕು.

2. ಚೀನಾದ ಅತ್ಯಂತ ಅಭಿವೃದ್ಧ ಸಂಸ್ಕೃತಿಯನ್ನು ಪ್ರತಿನಿಧಿಸಬೇಕು.

3. ಚೀನಾದ ಬಹುಸಂಖ್ಯಾತ ಜನರ ಮೂಲಭೂತ ಹಿತಾಸಕ್ತಿಗಳನ್ನು ಪ್ರತಿನಿಧಿಸಬೇಕು.

ಉತ್ಪಾದಕ ಶಕ್ತಿಗಳು ಯಾವುದೇ ಸಮಾಜದ ಬೆಳವಣಿಗೆಯಲ್ಲಿ ಅತ್ಯಂತ ಕ್ರಾಂತಿಕಾರಿ ಮತ್ತು ಸೃಜನಶೀಲ ಪಾತ್ರವಹಿಸುತ್ತವೆ. ಅವು ಸಾಮಾಜಿಕ ಬೆಳವಣಿಗೆಯಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತವೆ.

→

ಪಕ್ಷದ ವಿಶಿಷ್ಟತೆಗಳು

1921 ರಲ್ಲಿ ಕೇವಲ 50 ಸದಸ್ಯರಿಂದ ಆರಂಭಿಸಿ ಈಗ ಪಕ್ಷ ಆರೂವರೆ ಕೋಟಿ ಸದಸ್ಯರನ್ನು ಹೊಂದಿದ್ದು ಜಗತ್ತಿನ ಅತಿದೊಡ್ಡ ರಾಜಕೀಯ ಪಕ್ಷವಾಗಿರುವ ಹೆಗ್ಗಳಿಕೆ ಸಾಧಿಸಿದೆ. ಚೀನಾದಲ್ಲಿ ಸಾಮ್ರಾಜ್ಯಶಾಹಿ ವಿರೋಧಿ ಚಳುವಳಿಯಲ್ಲಿ ಧುಮುಕಿದ 'ಪಕ್ಷ, ಆಗ ಸನಾಯಟ್-ಸೆನ್‌ರ ನಾಯಕತ್ವದ 'ರಾಷ್ಟ್ರೀಯವಾದಿ ಪಕ್ಷವಾದ ಕ್ಯುಮಿಂಟಾಂಗ ಜತೆ 'ಸಂಯುಕ್ತ ರಂಗ' ರಚಿಸಿತು. ಸನ್-ಯಾತ್-ಸೆನ್‌ರ ನಂತರ ಚಿಯಾಂಗ್ ಕೈಶೇಕ್ ನಾಯಕತ್ವದ, ಕ್ಯುಮಿಂಟಾಂಗ್‌ನ ದ್ರೋಹದ ಇಬ್ಬಂದಿ ನೀತಿ ಇದ್ದಾಗ್ಯೂ, ಸಾಧ್ಯವಾದಾಗಲೆಲ್ಲ 'ಸಯುಂಕ್ತರಂಗ' ತಂತ್ರ ಮುಂದುವರಿಸಿ ಚೀನಾದ ಸಾಮ್ರಾಜ್ಯಶಾಹಿ- ವಿರೋಧಿ ಹೋರಾಟದಲ್ಲಿ ಮುಂಚೂಣಿಯ ಸ್ಥಾನ ಪಡೆಯಿತು. 'ಸಂಯುಕ್ತ ರಂಗ' ತಂತ್ರದಲ್ಲಿ ಪರಿಣತಿ ಚೀನಾ ಕಮ್ಯುನಿಸ್ಟ್ ಪಕ್ಷದ ವಿಶಿಷ್ಟತೆಗಳಲ್ಲೊಂದು.

ಇದಲ್ಲದೆ ಮಾರ್ಕ್ಸ್‌ವಾದ-ಲೆನಿನ್‌ವಾದವನ್ನು ಹಿಂದುಳಿದ ಕೃಷಿ-ಪ್ರಧಾನ ದೇಶವಾದ ಚೀನಾದಲ್ಲಿ ಅಳವಡಿಸಿ ಕಾರ್ಯಯೋಜನೆ-ತಂತ್ರಗಳನ್ನು ರೂಪಿಸಿದ್ದು ಪಕ್ಷದ ವಿಶಿಷ್ಟತೆಗಳಲ್ಲೊಂದು. ಇದಕ್ಕಾಗಿ ಪಕ್ಷದೊಳಗೆ ಹಲವು ಹೋರಾಟಗಳು, ತಾಕಲಾಟಗಳು ನಡೆದವು. ಇಂತಹ ಎಲ್ಲಾ ಹೋರಾಟ, ತಾಕಲಾಟಗಳಿಂದ ಹೆಚ್ಚಿನ ಬಾರಿ ಸರಿಯಾದ ಹಾದಿ ಕಂಡುಕೊಂಡು ಮುನ್ನಡೆದದ್ದು, ರಶ್ಯಾ ಪಕ್ಷದ 'ಮಾದರಿ'ಯನ್ನು ಕಣ್ಣು ಮುಚ್ಚಿ ಕಾಪಿ ಮಾಡದೆ ತಮ್ಮ ದೇಶಕ್ಕೆ ತಕ್ಕ 'ಮಾದರಿ' ಬೆಳೆಸಿದ್ದು - ಇವೂ ಚೀನಾ ಕಮ್ಯುನಿಸ್ಟ್ ಪಕ್ಷದ ವಿಶಿಷ್ಟತೆಗಳು. ಹಲವು ಇತರ ಪಕ್ಷಗಳು ರಶ್ಯಾ ಪಕ್ಷದ 'ಮಾದರಿ' ಕಾಪಿ ಮಾಡಿವೆಯೋ ಅಥವಾ ಆಂತರಿಕ ತಾಕಲಾಟ/ಹೋರಾಟಗಳನ್ನು ನಿಭಾಯಿಸಲಾಗದೆ ಬಹಳಷ್ಟು ಬಲಹೀನವಾದ್ದು ಇದೆ. ಪ್ರತಿ ದೇಶದ ಕ್ರಾಂತಿಗೆ ಅಲ್ಲಿನ ಕಮ್ಯುನಿಸ್ಟ್ ಪಕ್ಷದ ತನ್ನದೇ ಆದ ಕಾರ್ಯಯೋಜನೆ-ತಂತ್ರ ರೂಪಿಸಬೇಕು. ಇದಕ್ಕೆ ಯಾವುದೇ ಸಾಮಾನ್ಯ ಮಾದರಿಯಿಲ್ಲ ಎಂದು ತೋರಿಸಿದ ಹೆಗ್ಗಳಿಕೆ ಈ ಪಕ್ಷದ್ದು. 'ಸಾಂಸ್ಕೃತಿಕ ಕ್ರಾಂತಿ' ಮತ್ತು 70 ರ ದಶಕದಲ್ಲಿ 'ಚೀನಾ ದ ಹಾದಿಯಲ್ಲೇ ಕ್ರಾಂತಿ' ಎಲ್ಲಾ ದೇಶದಲ್ಲಿ ಸಾಧ್ಯ ಎಂದು ನಂಬಿದ 'ಮಾವೋವಾದಿ' ಗುಂಪುಗಳಿಗೆ ಪ್ರೋತ್ಸಾಹ - ಇದಕ್ಕೆ ಅಪವಾದಗಳಾದರೂ, ಈ ತಪ್ಪು ಹಾದಿ/ನೀತಿಗಳಿಂದ ಹೊರಬಂದದ್ದು ಪಕ್ಷದ ವಿಶಿಷ್ಟತೆ.

ಕಾರ್ಮಿಕವರ್ಗದ ಅಂತರ್‌ರಾಷ್ಟ್ರೀಯತೆಯ ನೀತಿಯನ್ನು ರೂಪಿಸಿ, ಸರಿಯಾಗಿ ಜಾರಿ ಮಾಡಿದ್ದು ಪಕ್ಷದ ಇನ್ನೊಂದು ವಿಶಿಷ್ಟತೆ. ಚೀನಾದ ಸಮಾಜವಾದಿ ಬೆಳವಣಿಗೆಯಲ್ಲಿ ಸೋವಿಯತ್ ಒಕ್ಕೂಟದ ನೆರವು ತೆಗೆದುಕೊಂಡದ್ದು, ಕೊರಿಯಾ-ವಿಯೆಟ್ನಾಮ್‌ಗಳ ಕ್ರಾಂತಿಯಲ್ಲಿ ನೆರವು-ಇವುಗಳ ಮೂಲಕ ಚೀನಾ ಅಂತರ್‌ರಾಷ್ಟ್ರೀಯ ಕಾರ್ಮಿಕವರ್ಗದ ಚಳುವಳಿಗೆ ತನ್ನ ಕಾಣಿಕೆ ನೀಡಿದೆ.

ಸಾಂಸ್ಕೃತಿಕ ಕ್ರಾಂತಿಯ ತಪ್ಪುಗಳನ್ನು ಸರಿಪಡಿಸಿ, 1978 ರ ನಂತರ ಆಗಿನ ಕಾಲಘಟ್ಟಕ್ಕೆ ಸರಿಯಾದ ನೀತಿಯನ್ನು ರೂಪಿಸುವ ಮೂಲಕ ಪಕ್ಷ ಪುನಃ ತನ್ನ ಬಲ ಪ್ರದರ್ಶಿಸಿದೆ. ಚೀನಾ ಸಮಾಜವಾದಿ ಬೆಳವಣಿಗೆಯ ಪ್ರಾಥಮಿಕ ಹಂತದಲ್ಲಿದೆ. ಇದು 50 ವರ್ಷಗಳಷ್ಟು ದೀರ್ಘವಾಗಿರಬಹುದು. ಈ ಹಂತಕ್ಕೆ ಸರಿಯಾದ ನಾಲ್ಕು ಆಧುನೀಕರಣದ ಸಮಾಜವಾದಿ ಮಾರುಕಟ್ಟೆ ಆರ್ಥಿಕ ನೀತಿ -ಯನ್ನು ಡೆಂಗ್‌ರ ನಾಯಕತ್ವದಲ್ಲಿ ಅಂಗೀಕರಿಸುವ ಮೂಲಕ ಚೀನಾ ಕಮ್ಯುನಿಸ್ಟ್ ಪಕ್ಷ ಚೀನಾದ ಸಮಾಜವಾದಿ ಆಧುನೀಕರಣಕ್ಕೆ ಭದ್ರ ಬುನಾದಿ ಹಾಕಿತು. ಚೀನಾ ಕಳೆದ ಎರಡು ವರ್ಷಗಳಲ್ಲಿ ಸಾಧಿಸಿದ ಅದ್ಬುತ ಆರ್ಥಿಕ ಪ್ರಗತಿ ಈ ನೀತಿಯ ಫಲ. ರಾಜಕೀಯವಾಗಿಯೂ ಸಮಾಜವಾದ ಕಟ್ಟುವ ಹಂತಗಳ ದೀರ್ಘಕಾಲದ ಪ್ರಕ್ರಿಯೆ ಗುರುತಿಸುವಲ್ಲಿ, ನಾಲ್ಕು ಆಧುನೀಕರಣದ ನೀತಿಗಳು (ಸಮಾಜವಾದಿ ಹಾದಿ, ಜನತಾ ಪ್ರಜಾಪ್ರಭುತ್ವ ಸರ್ವಾಧಿಕಾರ, ಕಮ್ಯುನಿಸ್ಟ್ ಪಕ್ಷದ ನಾಯಕತ್ವ, ಮಾರ್ಕ್ಸ್‌ವಾದ-ಲೆನಿನ್‌ವಾದ-ಮಾವೋವಾದ) ಜಗತ್ತಿನ ಕಾರ್ಮಿಕವರ್ಗ, ಸಮಾಜವಾದಿ ಚಳುವಳಿಗೂ ಅತ್ಯುತ್ತಮ ಕಾಣಿಕೆಯಾಗಿತ್ತು.



ಅಕ್ಟೋಬರ್ 1, 1949 ಮಾವೋರಿಂದ 'ಪೀಪಲ್ಸ್ ರಿಪಬ್ಲಿಕ್ ಆಫ್ ಚೀನಾ'

ಚೀನಾ ಕಮ್ಯುನಿಸ್ಟ್ ಪಕ್ಷ ಆರಂಭದಿಂದಲೇ ಚೀನಾ ಅತ್ಯಂತ ಅಭಿವೃದ್ಧ ಉತ್ಪಾದಕ ಶಕ್ತಿಗಳನ್ನು ಪ್ರತಿನಿಧಿಸಿತ್ತು. ಪ್ರತಿಯೊಂದು ಹಂತದಲ್ಲಿ ಉತ್ಪಾದಕ ಶಕ್ತಿಗಳ ಬೆಳವಣಿಗೆಗೆ ಅನುಗುಣ ವಾದ ಯೋಜನೆ, ಕಾರ್ಯತಂತ್ರ ಗಳನ್ನು ರೂಪಿಸುವುದು ಪಕ್ಷದ ಕರ್ತವ್ಯವಾಗಬೇಕು. ಚೀನಾದ ಕಾರ್ಮಿಕವರ್ಗ, ಬುದ್ದಿಜೀವಿಗಳು, ರೈತರು ಈ ಪ್ರಮುಖ ಉತ್ಪಾದಕ ಶಕ್ತಿಗಳು. ಅವರ ವೈಜ್ಞಾನಿಕ, ಸಾಂಸ್ಕೃತಿಕ ಮಟ್ಟ ಎತ್ತರಿಸುವುದು, ಅವರ ಸ್ವಯಂಘೋಷಿತ ಸೃಜನಶೀಲತೆಗೆ ಪ್ರೋತ್ಸಾಹ ನೀಡುವುದು-ಇದು ಪಕ್ಷದ ಕೆಲಸದ ಪ್ರಮುಖ ಗುರಿಯಾಗಬೇಕು. ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಪ್ರಮುಖ ಉತ್ಪಾದಕ ಶಕ್ತಿಯಾಗಿ ಬೆಳೆಸುವುದೂ ಇದರ ಭಾಗ. ಉತ್ಪಾದಕ ಶಕ್ತಿಗಳನ್ನು ಅಭಿವೃದ್ಧಿ ಪಡಿಸಿ ಅತ್ಯಂತ ಉನ್ನತ ಮಟ್ಟಕ್ಕೆ ಏರಿಸುವುದು, ಸಮಾಜವಾದಿ ಬೆಳವಣಿಗೆಯ ಪ್ರಾಥಮಿಕ ಹಂತದಲ್ಲಿರುವ ಚೀನಾದಲ್ಲಿ ಇನ್ನು ದೀರ್ಘ ಅವಧಿಯವರೆಗೆ ಪಕ್ಷದ ಪ್ರಾಥಮಿಕ ಕರ್ತವ್ಯವಾಗಿರುತ್ತದೆ. ಇದು ಝುಮಿನ್ ಮುಂದಿಟ್ಟ ಮೊದಲ ಪ್ರತಿನಿಧಿತ್ವದ ಅರ್ಥ.

ಸಮಾಜವಾದಿ ಸಮಾಜ ಸಮಗ್ರ ಬೆಳವಣಿಗೆ ಮತ್ತು ಪ್ರಗತಿಯನ್ನು ಪ್ರತಿನಿಧಿಸುವುದಕ್ಕೆ ಉತ್ತಮ ಭೌತಿಕ ಜೀವನದ ಜತೆ, ಸಮಾಜವಾದಿ ನೈತಿಕತೆ ಮತ್ತು ಮೌಲ್ಯಗಳನ್ನು ಬೆಳೆಸುವುದು ಚೀನಾದ ಸಮಗ್ರ ಸಮಾಜವಾದಿ ಆಧುನೀಕರಣದ ಅತ್ಯಂತ ಅವಶ್ಯಕವಾಗಿದೆ. ಸಮಾಜದ ನಾಯಕತ್ವ ವಹಿಸಿದ ಪಕ್ಷದ ಸೈದ್ಧಾಂತಿಕ, ನೈತಿಕ ಮತ್ತು ಸಾಂಸ್ಕೃತಿಕ ನಿಲುವು ಸಮಾಜದ ಸಾಂಸ್ಕೃತಿಕ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಈಗಾಗಲೇ ಇರುವ ಸಮಾಜವಾದಿ ಸಂಸ್ಕೃತಿಯನ್ನು ಬೆಳೆಸುವುದು, ಚೀನಾದ ಪರಂಪರೆಯಲ್ಲಿರುವ ಉತ್ತಮ ಅಂಶಗಳನ್ನು ಉಳಿಸಿ ಬೆಳೆಸುವುದು, ಚೀನಾದ ಪರಂಪರೆಯಲ್ಲಿರುವ ಪಾಳೆಯಗಾರಿ ಸಂಸ್ಕೃತಿಯ ಜೊಳ್ಳನ್ನು ಕಿತ್ತು ಬಿಸಾಕುವುದು, ಜಗತ್ತಿನ ಎಲ್ಲಾ ಭಾಗಗಳ ಉನ್ನತ ಸಂಸ್ಕೃತಿಯ ಅಂಶಗಳನ್ನು ಅರಗಿಸಿಕೊಳ್ಳುವುದು, ಪಕ್ಷದ ಕ್ರಾಂತಿಕಾರಿ ಸಾಂಸ್ಕೃತಿಕ ಪರಂಪರೆಯನ್ನು ಮುಂದುವರೆಸುವುದು - ಇವು ಪಕ್ಷದ ಕೆಲಸವಾಗಬೇಕು. ಇದು ಝುಮಿನ್ ಪ್ರತಿಪಾದಿಸಿದ ಪಕ್ಷ ವಹಿಸಬೇಕಾದ 'ಎರಡನೇ ಪ್ರತಿನಿಧಿತ್ವ'

ಚೀನಾ ಕಮ್ಯುನಿಸ್ಟ್ ಪಕ್ಷ ಯಾವಾಗಲೂ ಚೀನಿ ಜನತೆಯ ಹಿತಾಸಕ್ತಿಯ ಪ್ರತಿನಿಧಿಸಿದೆ. ಚೀನಿಯರ ಹಿತಾಸಕ್ತಿಯನ್ನು ಎಲ್ಲಕ್ಕಿಂತಲೂ ಮಿಗಿಲಾಗಿ ಕಂಡಿದೆ. ಪಕ್ಷ ಸರ್ಕಾರ ನಡೆಸುತ್ತಿರುವುದು ಚೀನಿಯರ ಹಿತಾಸಕ್ತಿಯನ್ನು ಎತ್ತಿ ಹಿಡಿಯಲು. ಚೀನಿಯರ ಹಿತಾಸಕ್ತಿ ಬಿಟ್ಟರೆ ಪಕ್ಷಕ್ಕೆ ತನ್ನದೇ ಯಾವುದೇ ಹಿತಾಸಕ್ತಿ ಇಲ್ಲ. ಈ ನೀತಿಯನ್ನು ಸದಾ ನೆನಪಿನಲ್ಲಿಟ್ಟುಕೊಂಡವರು, ಅದನ್ನು ಅಳವಡಿಸಿದ್ದರಿಂದ ಪಕ್ಷ ಅಧಿಕಾರದಲ್ಲಿದೆ. ಈಗಿನ ಸಂದರ್ಭದಲ್ಲಿ ಈ ನೀತಿಯನ್ನು ನೆನಪಿನಲ್ಲಿಟ್ಟುಕೊಂಡು ಸತತವಾಗಿ ಜಾರಿ ಮಾಡುವುದು ಪಕ್ಷದ ಮೂರನೇ ಕರ್ತವ್ಯ ಎನ್ನುತ್ತಾರೆ ಝುಮಿನ್. ಬಹುಸಂಖ್ಯಾತ ಜನರ ಹಿತಾಸಕ್ತಿಗೆ ಪ್ರಾಮುಖ್ಯತೆ, ಎಲ್ಲಾ ವಿಭಾಗಗಳ ಹಿತಾಸಕ್ತಿಗಳಿಗೆ ಗಮನ ಈ ಕರ್ತವ್ಯದ ಮುಖ್ಯಭಾಗ.

ಈ 'ಮೂರು ಪ್ರತಿನಿಧಿತ್ವ'ದ ಕರ್ತವ್ಯಗಳು ಪರಸ್ಪರ ಸಂಬಂಧ ಇರುವವು ಮತ್ತು ಒಂದು ಸಮಗ್ರ ಕರ್ತವ್ಯ. ಮುಂದಿನ ಅವಧಿಯಲ್ಲಿ ಪಕ್ಷದ ಕರ್ತವ್ಯ ಈ 'ಮೂರು ಪ್ರತಿನಿಧಿತ್ವ'ವನ್ನು ಸಮರ್ಥವಾಗಿ ಸಮಗ್ರವಾಗಿ ನಿರ್ವಹಿಸುವುದು. ಇದು ಝುಮಿನ್ ಪಕ್ಷದ, ದೇಶದ, ಜಗತ್ತಿನ ಮುಂದಿಟ್ಟ ದಿಟ್ಟ ದೂರದರ್ಶಿತ್ವ.

ಈ 'ಮೂರು ಪ್ರತಿನಿಧಿತ್ವ'ಗಳ ಜವಾಬ್ದಾರಿ ನಿರ್ವಹಿಸಲು ಪಕ್ಷವನ್ನು ಕಟ್ಟುವುದು, ಪುನರ್ರಚಿಸುವ ಬಗ್ಗೆ ಝುಮಿನ್ ಪಕ್ಷದ ಮುಂದೆ ಹಲವು ವಿಚಾರಗಳನ್ನು ಮುಂದಿಸಿದರು. ಆಧುನೀಕರಣದ ನಾಲ್ಕು ನೀತಿಗಳನ್ನು ಪಕ್ಷದ ಆಧಾರ ಸ್ತಂಭಗಳೆಂದು ಪುನಃ ಪ್ರತಿಪಾದಿಸಿದ ಝುಮಿನ್‌ರ ಭಾಷಣ ಜಗತ್ತಿನ ಎಲ್ಲಾ ಶಾಂತಿ, ಪ್ರಗತಿಪರ ಜನತೆಗೆ ಸ್ಫೂರ್ತಿದಾಯಕ. ಎಲ್ಲರೂ ಚೀನಾದತ್ತ ನೋಡುತ್ತಿದ್ದಾರೆ


ಝುಮಿನ್‌ರ ಭಾಷಣ

ಚೀನಾ ಮತ್ತು ಚೀನಾದ ಕಮ್ಯುನಿಸ್ಟ್ ಪಕ್ಷದತ್ತ ಕಳೆದ ಅರ್ಧ ಶತಕದಿಂದ ಇಡೀ ಜಗತ್ತಿನ ಶಾಂತಿ, ಪ್ರಗತಿಪರ ಜನತೆ ನೋಡುತ್ತಿದ್ದಾರೆ. ಅವರ ಸಾಧನೆ, ಸೋಲು-ಗೆಲುವು, ಕನಸುಗಳನ್ನು ಎಚ್ಚರಿಕೆಯಿಂದ ಗಮನಿಸುತ್ತಿದ್ದಾರೆ. ನಾಲ್ವರಲ್ಲಿ ಒಬ್ಬ ಜಗತ್ತಿನ ನಾಗರಿಕ ಚೀನಾದಲ್ಲಿದ್ದಾನೆ ಎಂದು ಮಾತ್ರವಲ್ಲ ಚೀನಾದ ಪ್ರಾಮುಖ್ಯತೆ. ಸಮಾನತೆಯ ಜತೆ ಸಮೃದ್ಧಿಯ ಮಹಾನ್ ಪ್ರಯೋಗ ಚೀನಾದಲ್ಲಿ ನಡೆಯುತ್ತಿದೆ. ಈ ಪ್ರಯೋಗದ ನೇತಾರ ಚೀನಾ ಕಮ್ಯುನಿಸ್ಟ್ ಪಕ್ಷ.

ಈ ಪ್ರಯೋಗ ಇನ್ನೆಲ್ಲಕ್ಕಿಂತಲೂ ಭಾರತದ ಜನತೆಗೆ, ಎಡ ಪ್ರಗತಿಪರ ಚಳುವಳಿಗೆ ಅತ್ಯಂತ ಪ್ರಸ್ತುತ. ಝುಮಿನ್‌ರ ಚೀನಾ ಕಮ್ಯುನಿಸ್ಟ್ ಪಕ್ಷ ಮುಂದಿಟ್ಟಿರುವ ಮೂರು ಪ್ರತಿನಿಧಿತ್ವ ಸೇರಿದಂತೆ ಎಲ್ಲಾ ಕನಸು, ಯೋಜನೆಗಳನ್ನು ಅಭ್ಯಾಸ ಮಾಡುವ ಮೂಲಕ ಅದರ ಎಂಬತ್ತನೇ ವಾರ್ಷಿಕೋತ್ಸವದಲ್ಲಿ ಭಾಗಿಯಾಗೋಣ.

ಭಾಗಿಯಾಗೋಣ. ○

ಬಿಡುವಿರದ ಕಾರ್ಯಕ್ರಮಗಳು....

ಪುಟ 7ರಿಂದ

'ಮಾನವೀಯತೆ'ಯ ವಿಶಾಲ ವ್ಯಾಪ್ತಿಯಲ್ಲಿ ಚರ್ಚಿಸುವೆವು ಎಂದು ಘೋಷಿಸಿದರು. ಆದರೆ ಕಾಶ್ಮೀರದ ವಿಧಾನಸಭೆ ಸ್ವಾಯತ್ತತೆ ಕುರಿತು, ಕನಿಷ್ಠ ಕ್ರಮಗಳ ಕುರಿತು ಒಂದು ನಿರ್ಣಯ ಅಂಗೀಕರಿಸಿದಾಗ ಅದರತ್ತ ಒಂದು ನೋಟವನ್ನು ಬೀರಲಿಲ್ಲ. ಏನೆಂದು ಓದಲೂ ಇಲ್ಲ. ಆದರೆ ಒಂದೇ ಏಟಿಗೆ ವಿಧಾನಸಭೆ ಅಂಗೀಕರಿಸಿದ 'ಸ್ವಾಯತ್ತತೆ'ಯ ಪ್ರಶ್ನೆಯನ್ನು ಏಕಾಏಕಿ ತಿರಸ್ಕರಿಸಿ, ಫರ್ಮಾನು ಹೊರಡಿಸಿದರು. ಕನಿಷ್ಠ ಆ ಕುರಿತು ಚರ್ಚಿಸಬೇಕಿತ್ತು. ಈ ವರ್ತನೆಗಳು ಕಾಶ್ಮೀರದ ಜನತೆಯಲ್ಲಿ ಪರಕೀಯ ಭಾವನೆಗಳನ್ನು ಬಲಗೊಳಿಸುತ್ತಿವೆ. ಸೈನ್ಯಕ್ಕೆ, ಪೋಲೀಸರಿಗೆ ಬೇಕಾದಷ್ಟು ಹಣವನ್ನು ಸರ್ಕಾರ ಖರ್ಚು ಮಾಡುತ್ತಿದೆ. ಆದರೆ ಸರ್ಕಾರ ಈ ಪ್ರದೇಶದ ಅಭಿವೃದ್ಧಿಯ ಸಲುವಾಗಿ ಏನೊಂದು ಬಿಡಿಗಾಸು ಖರ್ಚು ಮಾಡುತ್ತಿಲ್ಲ. ಈ ದಿಶೆಯಲ್ಲಿ ಅಭಿವೃದ್ಧಿ ಕಾರ್ಯ ಕೈಗೊಂಡರೆ ಕಾಶ್ಮೀರದ ಜನತೆಯಲ್ಲಿ ವಿಶ್ವಾಸ ತುಂಬಿ, ಉದ್ಯೋಗ ಸಿಗುವುದು. ಅಭಿವೃದ್ಧಿ ಸಾಧ್ಯವೆಂದು ದೃಢತೆ ಬರುತ್ತದೆ.

ಇತ್ತೀಚಿನ ದಿನಗಳಲ್ಲಿ 16 ರಿಂದ 21 ರೊಳಗಿನ ವಯಸ್ಸಿನ ತರುಣ-ತರುಣಿಯರು ಭಯೋತ್ಪಾದಕರ ತಂಡವನ್ನು ಸೇರುತ್ತಿರುವುದು ನಮಗೆ ಅಪಾರ ಚಿಂತೆಯಾಗಿದೆ. ಇತ್ತ ಉದ್ಯೋಗವಿಲ್ಲ, ಅತ್ತ ಭದ್ರತಾಪಡೆಗಳ ಕಿರುಕುಳ. ಹೀಗಾಗಿ ಭಯೋತ್ಪಾದಕರ ತಂಡಕ್ಕೆ, ಅವರು ನೀಡುವ ಅಲ್ಪಹಣಕ್ಕೆ ಮಾರುಹೋಗುತ್ತಿದ್ದಾರೆ. ಹೇಗೋ ಎಲ್ಲಾದರೂ ಸಾಯುವುದಲ್ಲವೇ ಎಂಬ ಭಾವನೆ ಅವರಲ್ಲಿ ಹೆಪ್ಪುಗಟ್ಟುತ್ತಿದೆ.

ದಿನ ಬೆಳಗಾದರೆ ಅನೇಕ ಪತ್ರಿಕೆಗಳು, ಛಾನೆಲ್ ಟಿ.ವಿ.ಗಳು ಹಿಂದೂಗಳು ಸತ್ತರು, ಮುಸ್ಲಿಮರು ಸತ್ತರು ಎಂದು ಬರೆಯುತ್ತಿವೆ. ಆದರೆ ಭಾರತೀಯರು ಸತ್ತರು, ಮನುಷ್ಯರು ಸತ್ತರು ಎಂದು ಹೇಳುತ್ತಿಲ್ಲ. ನೋಡಿ 1990 ರಲ್ಲಿ ಕಾಶ್ಮೀರದ ಖ್ಯಾತ ವಿದ್ವಾಂಸರಾಗಿದ್ದ ಮೀರ್ ಫೈಜ್, ಮೌಲ್ವಿ ಫರೂಕ್ ಕೊಲೆಯಾದರು. ಸಾವಿನ ಹಾಸಿಗೆಯಲ್ಲಿದ್ದ ಮೌಲಾನಾ ಮಸೂದಿಯವರನ್ನು ಬಿಡಲಿಲ್ಲ. ಸೇಡಿನಿಂದ ಭಯೋತ್ಪಾದಕರು ಕೊಂದರು. ಮೀರ್ ಫೈಜ್ ಆಫ್ ಕಾಶ್ಮೀರ್ ಆಗಿದ್ದ ಪಾಸಿ ನಿಸಾರ್ ಅವರನ್ನು ಬರ್ಬರವಾಗಿ ಹಿಂಸಿಸಿ ಕೊಂದರು. ನನ್ನ ಮಾವನನ್ನೇ ನಾವು ಕಳೆದುಕೊಂಡೆವು. ಇಂತಹವು ಅನೇಕ. ಇವರೆಲ್ಲಾ ಕೊಲೆಯಾದದ್ದು ಮುಸ್ಲಿಂ ಮೂಲಭೂತವಾದಿ ಭಯೋತ್ಪಾದಕರಿಂದ. ಇಂತಹ ಶಕ್ತಿಗಳು ತಮ್ಮ ಹಿತಾಸಕ್ತಿ ಸಾಧಿಸಲು ಧರ್ಮದ ಗಡಿ ಮೀರಿ ವರ್ತಿಸುತ್ತಿವೆ, ಸಾಯಿಸುತ್ತಿವೆ. ಆದ್ದರಿಂದ ಇದು ಮುಸ್ಲಿಮರದು, ಹಿಂದುಗಳೆಂದು ಅಲ್ಲ. ಮುಸ್ಲಿಂ ಮೂಲಭೂತವಾದಿಗಳು, ಹಿಂದೂ ಮೂಲಭೂತವಾದಿಗಳೂ ಬೇರೆ ಬೇರೆಯಾಗಿ ವರ್ತಿಸಿದರೂ ಅವರ ಕಾರ್ಯಾಚರಣೆ ಒಂದೇ, ಒಬ್ಬರು ಇನ್ನೊಬ್ಬರನ್ನು ಬಲಪಡಿಸುತ್ತಿದ್ದಾರಷ್ಟೆ!

ಕಾಶ್ಮೀರದ ಸಮಸ್ಯೆ ಇಂದು ನಿನ್ನೆಯದಲ್ಲ. ಅದಕ್ಕೊಂದು ದೀರ್ಘ ಇತಿಹಾಸವಿದೆ. ಅದನ್ನು ವಸ್ತುನಿಷ್ಠವಾಗಿ, ವೈಜ್ಞಾನಿಕವಾಗಿ ಅರಿಯಬೇಕು. ಅಂದರೆ ಪರಿಹಾರ ಸಾಧ್ಯ

- ಜೀ.

ಅಡಿಕೆ ರೈತ-ದಂಪತಿಗಳ ಆತ್ಮಹತ್ಯೆ....

ಪುಟ 7 ರಿಂದ

ಪ್ರತಿನಿಧಿಗಳು, ಸರ್ಕಾರ ಇವರ್‍ಯಾರೂ ಸಹಾಯಕ್ಕೆ ಬರದಿರುವ ಸಂದರ್ಭದಲ್ಲಿ ಮಾನ ಉಳಿಸಿಕೊಳ್ಳಲು ಅವರಿಗಿರುವ ಮಾರ್ಗ ಇದ್ದ ಭೂಮಿಯನ್ನೆಲ್ಲ ಮಾರಾಟ ಮಾಡುವುದು ಯಾ ಸಾವಿಗೆ ಶರಣಾಗುವುದು. ರೈತ ಎರಡನೆಯದನ್ನೇ ಆಯ್ಕೆ ಮಾಡಿಕೊಂಡ.

ಉದ್ಯೋಗವಿಲ್ಲದ ಅನೇಕ ಜನ ಯುವಕರು ಬದುಕಿಗಾಗಿ ಸಣ್ಣ ಪುಟ್ಟ ಪ್ರಮಾಣದ ವ್ಯಾಪಾರವನ್ನು ಆಯ್ಕೆ ಮಾಡಿಕೊಂಡರು. ಸಾಲ ಮಾಡಿದ ಬಂಡವಾಳವನ್ನು ಅಡಿಕೆ ವ್ಯಾಪಾರಕ್ಕೆ ತೊಡಗಿಸಿದರು. ಇವರ ವ್ಯಾಪಾರವನ್ನೇ ನಂಬಿದ ಕುಟುಂಬ, ಹೆಂಡತಿ, ಮಕ್ಕಳು ಬದುಕಿನ ಬಗ್ಗೆ ಕನಸು ಕಾಣುತ್ತಿದ್ದಾಗ ಅಡಿಕೆ ಬೆಲೆ ಪಾತಾಳಕ್ಕೆ ಬಂತು. ವ್ಯಾಪಾರಿ ದಿವಾಳಿ ಆದ. ಸ್ವಯಂ ಉದ್ಯೋಗ ಮಾಡುವ ಉತ್ಸಾಹ ಕಳೆದುಕೊಂಡ. ಮೊದಲು ನಿರುದ್ಯೋಗಿ ಆಗಿದ್ದ ಈಗ ಸಾಲಗಾರ ನಿರುದ್ಯೋಗಿ ಆಗಿದ್ದಾನೆ.

ಸರಣಿ ಸಾವಿಗೆ ನಾಂದಿಯಾದೀತೆ?

ಉ.ಕ. ಸ್ಥಿತಿ ನೋಡಿದರೆ ಈ ಆತ್ಮಹತ್ಯೆ ಮೊದಲ ಉದಾಹರಣೆ ಮಾತ್ರ. ಬಹುಶಃ ಇದು ಸರಣಿ ಸಾವಿಗೆ ನಾಂದಿ. ಇನ್ನೂ ದೊಡ್ಡ ಸಾಲಗಾರರು ಇದ್ದಾರೆ. ಅವರು ಅಡಿಕೆ ಬೆಲೆ ಏರಬಹುದೆಂದು ಇನ್ನೂ ಕಾಯುತ್ತಿದ್ದಾರೆ. ನಮ್ಮ ಹಿತರಕ್ಷಣೆಗೆ ಸರಕಾರ ಬರಬಹುದೆಂದು ಕಾಯುತ್ತಿದ್ದಾರೆ. ಈ ಎರಡೂ ಸರಕಾರ ತನ್ನದೇ ಅವ್ಯವಹಾರದಲ್ಲಿ ತೊಡಗಿಕೊಂಡು, ವಿದೇಶದಿಂದ ಮತ್ತಷ್ಟು ಸಾಲ ಎತ್ತುತ್ತಾ ವಿಶ್ವ ಬ್ಯಾಂಕುಗಳಿಗೆ ನಡು ಬಗ್ಗಿಸುತ್ತಾ ಜೀ.. ಹುಜೂರ್ ಎನ್ನುತ್ತಿರುವಾಗ ಬಡರೈತರ ಪರವಾಗಿ ನಿಲ್ಲಬಹುದೆಂದು ನಿರೀಕ್ಷಿಸಿದರೆ ಅದಕ್ಕಿಂತ ದೊಡ್ಡ ಮೂರ್ಖತನ ಬೇರೊಂದಿಲ್ಲ.

ಪರಿಹಾರ ಸಾವಲ್ಲ

ರೈತರ ಸಮಸ್ಯೆಗಳಿಗೆ ಸಾವು ಪರಿಹಾರವಲ್ಲ. ಗಟ್ಟಿಯಾದ ಸಂಘಟನೆ ಅವರನ್ನು ಮೇಲೆತ್ತಬಹುದು. ಬೆಂಬಲ ಬೆಲೆ ನಿಗದಿ ಮಾಡುವವರೆಗೆ ನಿರಂತರ ಹೋರಾಟ ಮಾಡಬೇಕಾಗಿದೆ. ವಿಧಾನಸಭೆ, ಪಾರ್ಲಿಮೆಂಟಿನಲ್ಲಿ ಬಾಯ್ಮುಚ್ಚಿ ಕುಳಿತು ಇಲ್ಲಿ ರೈತರ ಪರ ಅಣಿಮುತ್ತು ಉದುರಿಸುವ, ಸರಕಾರಗಳ ಪರ ವಕಾಲತ್ತು ವಹಿಸುವವರನ್ನು ಪಕ್ಕಕ್ಕಿಟ್ಟು ರೈತರೇ ಹೋರಾಟದ ಪಂಜನ್ನು ಹಚ್ಚಬೇಕಾಗಿದೆ. ಬೀದಿಗಿಳಿಯಬೇಕಾಗಿದೆ. ತಮ್ಮ ರಾಜಕೀಯ ಭಿನ್ನತೆಯನ್ನು ಬದಿಗಿಟ್ಟು ಎಲ್ಲರೂ ರೈತರನ್ನು ಅವರ ಹೋರಾಟವನ್ನು ಬೆಂಬಲಿಸಬೇಕಾಗಿದೆ.

ಉತ್ತರ ಕನ್ನಡದಲ್ಲಿ ನಡೆದ ಈ ಆತ್ಮಹತ್ಯೆ, ಇಲ್ಲಿಯ ರೈತರನ್ನು ಎಚ್ಚರಿಸುವ ಕರೆಗಂಟೆಯಾಗಲಿ, ಹೋರಾಟಕ್ಕೆ ಇಳಿಯಲು ಒಂದು ಪ್ರೇರಣೆ, ಕಾರಣವಾಗಲಿ.

ಸಾಲದ ಕುಣಿಕೆಯಲ್ಲಿ ಸಾವಿನಕದ ತಟ್ಟಿದವರು

(ಕಳೆದ ಎರಡು ವಾರದಲ್ಲಿ)

1. ಹೊನ್ನಾವರ ತಾಲೂಕಿನ ಚಿಕ್ಕನಕೋಡ ಗ್ರಾಮದಲ್ಲಿ ಹೆರಾವಲಿ ಮಜಿರೆಯ ಅಡಿಕೆ ಬೆಳೆಗಾರನಾದ ಈಶ್ವರ ನಾರಾಯಣ ಭಟ್ (35) ಮತ್ತು ಪತ್ನಿ ನೇತ್ರಾವತಿ (27) ಸಾವಿಗೀಡಾದ ದುರ್ದೈವಿಗಳು ಇವರಿಗೆ ಸುಮಾರು 2 ಎಕರೆ ಅಡಿಕೆ ತೋಟವಿದ್ದು, ಮಧ್ಯಮವರ್ಗದ ಕುಟುಂಬದಲ್ಲಿ 10 ಜನ ಸದಸ್ಯರು ಈಶ್ವರ ಅವರೇ, ಹಿರಿಯ ಮಗನಾಗಿದ್ದಾರೆ. ಕಳೆದ ಎರಡು ವರ್ಷಗಳಿಂದ ಅಡಿಕೆ ಧಾರಣೆ ಕುಸಿತ ಕಂಡಿರುವುದರಿಂದ 10 ಲಕ್ಷರೂ ಸಾಲ ಮಾಡಿಕೊಂಡು ತೀರಿಸಲಾಗದೆ, ಸಾವನ್ನಪ್ಪಿದ್ದಾರೆ.

2. ಶಿಡ್ಲಘಟ್ಟ ತಾಲೂಕಿನ ಗುರು ಮಡುಕು ಗ್ರಾಮದಲ್ಲಿ ಪ್ರಕಾಶ (28) ನಾಗರತ್ನ (20) ಸಾವಿಗೀಡಾಗಿರುವ ದಂಪತಿಗಳು. ಬಡತನವನ್ನು ತಾಳಲಾರದೆ, ಕಿವಿಯೋಲೆಯನ್ನು ಅಡವಿಟ್ಟು ಕ್ರಿಮಿನಾಶಕವನ್ನು ಸೇವಿಸಿ ಸಾವಿಗೀಡಾಗಿದ್ದಾರೆ.

3. ಸಾಲ ತೀರಿಸಲಾಗದೇ ಒಂದೇ ಮನೆಯವರು ಆತ್ಮಹತ್ಯೆಯ ಮಾಡಿಕೊಂಡ ದಾರುಣ ಘಟನೆ ವರದಿಯಾಗಿದೆ. ಚಿಂತಾಮಣಿಯ ಡೈಮೆಂಡ್ ರಸ್ತೆಯಲ್ಲಿನ ಮನೆಯಲ್ಲಿ ವ್ಯಾಪಾರ ಮಾಡುವ ಲಕ್ಷ್ಮಿನಾರಾಯಣ ಹಾಗೂ ಅವರ ಕುಟುಂಬವೇ ವಿಷ ಸೇವಿಸಿ ಆತ್ಮಹತ್ಯೆಗೆ ಪ್ರಯತ್ನಪಟ್ಟಿದೆ. ಸುದ್ದಿ ತಿಳಿದ ಅಕ್ಕಪಕ್ಕದ ಮನೆಯವರು ಆಸ್ಪತ್ರೆಗೆ ಸೇರಿಸಿದರೂ ಸದರಿ ವ್ಯಕ್ತಿ ತುಂಬ ಸಾಲ ಮಾಡಿಕೊಂಡಿದ್ದನೆಂದು ಅದನ್ನು ತೀರಿಸಲು ಸಾಧ್ಯವಾಗದ ಕಾರಣ ಸಾವಿನಲ್ಲಿ ಅಂತ್ಯ ಕಾಣಲು ಪ್ರಯತ್ನಿಸಿದ್ದಾರೆ.

1. ಬಡತನದ ಬೇಗೆ ತಾಳಲಾಗದೆ ಬಳ್ಳಾರಿ ಜಿಲ್ಲೆಯ ಹೊಸಪೇಟೆಯ ರೈತರ ಒಂದೇ ಕುಟುಂಬದ ನಾಲ್ವರು ತುಂಗಭದ್ರಾ ಕಾಲುವೆಗೆ ಹಾರಿ ಪ್ರಾಣ ಕಳೆದುಕೊಂಡಿದ್ದಾರೆ, ಪಟೇಲ ನಗರದ ನಿವಾಸಿ. ಎ.ಆರ್. ಸೂರ್ಯನಾರಾಯಣ (52) ಪತ್ನಿ ಪುಷ್ಪಾವತಿ(45) ಹಾಗೂ ಇಬ್ಬರು ಮಕ್ಕಳಾದ ಅನಂತನಾರಾಯಣ(25) ರವಿಕುಮಾರ್(23). ಇವರುಗಳಲ್ಲಿ ಬಿ. ಕಾಂ. ಪದವೀಧರನಾದ ಸೂರ್ಯನಾರಾಯಣ ಕೆಲಸಕ್ಕಾಗಿ ಅಲೆಯುತ್ತಿದ್ದ ಎನ್ನಲಾಗಿದೆ. ಸಂಸಾರ ನಡೆಸಲು ಸಾಲಮಾಡಿ ಮಾಡಿದ ಸಾಲ ತೀರಿಸಲಾಗದೆ ಎಲ್ಲ ಕಷ್ಟಗಳಿಗೂ ಒಂದೇ ಪರಿಹಾರವೆಂಬಂತೆ ಆತ್ಮಹತ್ಯೆಯಲ್ಲಿ ಕೊನೆಕಂಡಿದೆ ಇವರ ಜೀವನ.

ಅದೇ ಊರಿನ ಬಡೇಕರ ಬಾಷುಸಾಬ(60) ಎನ್ನುವ ರೈತ ಸಾಲದ ಬಲೆಯಿಂದ ಹೊರಬರಲಾಗದೆ ಕಾಲುವೆಗೆ ಹಾರಿ ಪ್ರಾಣ ಕಳೆದುಕೊಂಡಿದ್ದಾನೆ.

6. ಕೋಲಾರ ತಾಲೂಕಿನ ಕಲ್ಲಂಡೂರು ಗ್ರಾಮದಲ್ಲಿ ಸಾಲಗಾರರ ಕಾಟ ತಾಳಲಾರದೆ ಕೃಷಿ ಕಾರ್ಮಿಕ ನಾರಾಯಣ ಸ್ವಾಮಿ (37) 29-7-01ರಂದು ಪ್ರಾಣ ಕಳೆದುಕೊಂಡಿದ್ದಾನೆ, ಇವರೂ ಗ್ರಾಮದ ಸರ್ವೆನಂಬರ್ 87ರಲ್ಲಿ 2 ಎಕರೆ, ಜಮೀನನ್ನು ಹೊಂದಿದ್ದಾರೆ. ಈ ಜಮಿನಿನಲ್ಲಿ ಬೆಳೆ ಬಂದರೂ ಮಾರುವಾಗ ಬೆಲೆಸಿಗದೆ, ಸಾಲಗಾರರ ಕಾಟ ತಾಳಲಾಗದೆ ಸಾವನ್ನಪ್ಪಿದ್ದಾರೆ.

7. ರಾಯಚೂರು ಜಿಲ್ಲೆಯಿಂದ ಕೈಕೊಟ್ಟ ಬೆಳೆ, ಹಾಗೂ ಸರಿಯಾದ ಬೆಲೆ ಸಿಗದ ರೈತನೊಬ್ಬ ಸಾಲದ ಬಾಧೆ ತಾಳಲಾಗದೆ ಕ್ರಿಮಿನಾಶಕ ಔಷಧಿ ಸೇವಿಸಿ, ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಜಿಲ್ಲೆಯ ಸಿಂಧನೂರ ತಾಲೂಕಿನ ಬಳಗಾನೂರು ವ್ಯಾಪ್ತಿಯಲ್ಲಿ ಬರುವ ಗೋನಾಳ ಗ್ರಾಮದಲ್ಲಿ ವಾಸವಾಗಿರುವ ಶಿವರಾಯಪ್ಪ (45) ಪ್ರಾಣ ತೆತ್ತ ರೈತ.

9. ಗುಲ್ಬರ್ಗಾ ಜಿಲ್ಲೆಯಲ್ಲಿ ಮಳೆಗಾಗಿ ಆಗಸನೋಡುತ್ತ ಕುಳಿತಿರುವ ರೈತರು ಬಾರೋ ಬಾರೋ ಮಳೆರಾಯ ಬಾಳೆತೋಟಕೆ ನೀರಿಲ್ಲ ಸುರಿಯೋ ಸುರಿಯೋ ಮಳೆರಾಯ ಗಿಡವೆಲ್ಲಾ ಬಾಡ್ಯಾವೆ ಎಂದು ಹೇಳುವ ಹಾಗೆ, ಒಂದು ಕಡೆ ಹೊಲಗದ್ದೆ ಒಣಗಿವೆ. ಇನ್ನೊಂದು ಕಡೆ ಧನಕರುಗಳು ಕುಡಿಯಲು ನೀರಿಲ್ಲದೆ ಸಾಯುತ್ತಿವೆ. ಇದನ್ನು ನೋಡಿ ರೈತಾಪಿ ಜನ ಕಂಗಾಲಾಗಿದ್ದಾರೆ. ಕೃಷಿಕೂಲಿಕಾರರು ಗೋಳೆ ಹೊರಟಾರೆ, ಈ ಪರಿಸ್ಥಿತಿ ಹೇಗಿದೆ ಎಂದರೆ 1972ರಲ್ಲಿ ಉಂಟಾಗಿದ್ದ ಭೀಕರ ಬರಗಾಲದ ನಗ್ನ ದೃಶ್ಯ ಗುಲ್ಬರ್ಗಾ ಜಿಲ್ಲೆಯಲ್ಲಿ ಪಾಲಿಗೆ ಪುನರಾವರ್ತನೆಯಾಗಿದೆ. ಇದರಿಂದ ಬೇಸತ್ತು ಕಟ್ಟು ಪಟ್ಟಣ ಸೇರು ಎನ್ನುವ ಹಾಗೆ ಜನ ಪಟ್ಟಣ ಸೇರುತ್ತಾ ಇದ್ದಾರೆ.

ಸುಮಾರು 300 ಕೋಟಿ ರೂ. ಆಸ್ತಿ ಹಾನಿಯಾಗಿದೆ. ಎಂದು ವರದಿಯಾಗಿದೆ. ರೈತರು "ಇನ್ನು ನಾಲ್ಕು ದಿನ ಇಲ್ಲಿದ್ರೆ ಸಂಸಾರ ಸಮೇತ ಸತ್ತು ಹೋಕ್ತೀವ್ರಿ" ಎಂದು ಹೇಳುತ್ತಾರೆ. ಇದು ಬದುಕಿಯೂ ಸತ್ತವರ ಸಾಯುತ್ತಿರುವವರ ಕಥೆ ಇದು. ಇವು ಪತ್ರಿಕೆಗಳಲ್ಲಿ ಬಂದವುಗಳಷ್ಟೇ ಬಾರದಿರುವುದು ಅನೇಕಾನೇಕ.

- ಧನರಾಜ್

ಹೋರಾಟದ ರಾಜಧಾನಿಗೆ ಹೃದಯ ಸ್ಪರ್ಶಿ ಬೀಳ್ಕೊಡುಗೆ

ಆಗಸ್ಟ್ 8 ರಿಂದ 15ರವರೆಗೆ 15ನೇ ವಿಶ್ವ ಯುವಜನ ವಿದ್ಯಾರ್ಥಿ ಉತ್ಸವ ಅಲ್ಜೀರಿಯಾದ ಅಲ್ಜೀರ್ಸ್‌ನಲ್ಲಿ ನಡೆಯಲಿದೆ. ಈ ಉತ್ಸವದಲ್ಲಿ ಕರ್ನಾಟಕದ ವಿದ್ಯಾರ್ಥಿ ಯುವಜನ ಚಳುವಳಿಯನ್ನು ಪ್ರತಿನಿಧಿಸಿ ಸಂಗಾತಿಗಳಾದ ಉಮೇಶ್ ಮಹಂತೇಶ್ ಮತ್ತು ಕೃಷ್ಣಪ್ಪ ಕೊಂಚಾಡಿಯವರು ಭಾಗವಹಿಸಲಿದ್ದು ಅವರನ್ನು ಬೆಂಗಳೂರು ರೈಲ್ವೆ ನಿಲ್ದಾಣದಲ್ಲಿ ಹೋರಾಟಗಳ ರಾಜಧಾನಿ ಅಲ್ಜೀರಿಯಾಕ್ಕೆ ಹಾರ್ಧಿಕವಾಗಿ ಬೀಳ್ಕೊಡಲಾಯಿತು.



ವಿಶ್ವದ 3ನೇ ಜಗತ್ತಿನ ರಾಷ್ಟ್ರಗಳು ಹಾಗೂ ಬಡರಾಷ್ಟ್ರಗಳ ಮೇಲೆ ಸಾಮ್ರಾಜ್ಯಶಾಹಿ ಆಕ್ರಮಣಗಳು ದಿನೇ ದಿನೇ ತೀವ್ರಗೊಳ್ಳುತ್ತಿದೆ. ಅದೇ ಸಂದರ್ಭದಲ್ಲಿ ಜಾಗತೀಕರಣ, ಉದಾರೀಕರಣ ಖಾಸಗೀಕರಣ ಜರ್ಜರಿತರಾಗಿರುವ ಜನತೆಯ ಪ್ರತಿರೋಧವು ತೀವ್ರಗೊಳ್ಳುತ್ತಿದೆ. ಶತ-ಶತಮಾನಗಳಿಂದ ಸಾಮ್ರಾಜ್ಯಶಾಹಿಗಳ ಧಾಳಿಗೆ ತತ್ತರಿಸಿರುವ ಆಫ್ರಿಕಾ ಖಂಡದ ದೇಶಗಳು ಅದರಲ್ಲೂ ಹೋರಾಟದ ರಾಜಧಾನಿ ಅಲ್ಜೀರಿಯಾದಲ್ಲಿ ಈ ಉತ್ಸವ ನಡೆಯುತ್ತಿದೆ. ಈ ಉತ್ಸವದಲ್ಲಿ ವಿಶ್ವದ 150ಕ್ಕೂ ಹೆಚ್ಚು ದೇಶಗಳ 20 ಸಾವಿರದಷ್ಟು ವಿದ್ಯಾರ್ಥಿ ಯುವಜನ ಮುಖಂಡರುಗಳು ಭಾಗವಹಿಸುತ್ತಿದ್ದಾರೆ. ಈ ಉತ್ಸವದಲ್ಲಿ ಪಾಲ್ಗೊಳ್ಳಲಿರುವ ಸಂಗಾತಿಗಳು ನಮ್ಮ ದೇಶದ ಸರ್ಕಾರಗಳ ಜನವಿರೋಧಿ ನೀತಿಗಳಂದ ಉಂಟಾಗಿರುವ ಗಂಭೀರ ಪರಿಸ್ಥಿಯನ್ನು ಹಂಚಿಕೊಳ್ಳಲು ಸಾಧ್ಯವಾಗಬೇಕು. ವಿಶ್ವದ ವಿವಿಧ ದೇಶಗಳ ಜನತೆಯ ವಿಶಿಷ್ಟ ಹೋರಾಟಗಳನ್ನು ಬೆಸೆಯುವ ಪ್ರಯತ್ನ ಯಶಸ್ವಿಯಾಗುವ ನಿಮ್ಮ ಅನುಭವವನ್ನು ಪಡೆದು ನಮ್ಮ ಹೋರಾಟಗಳಿಗೆ ಮೊನಚು ತರಲಿ. ಶಾಂತಿ ಮತ್ತು ಅಭಿವೃದ್ಧಿಗಾಗಿ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟವನ್ನು ಜಾಗತೀಕರಿಸೋಣ ಎಂಬ ಘೋಷಣೆಯೊಂದಿಗೆ ನಡೆಯುತ್ತಿರುವ ಈ ಉತ್ಸವದಲ್ಲಿ ಜಾಗತೀಕರಣ ವಿರೋಧಿ ಹೋರಾಟಕ್ಕೆ ಸ್ಪಷ್ಟ ಸ್ವರೂಪ ನೀಡುವ ಪ್ರಯತ್ನ ಯಶಸ್ವಿಯಾಗಲಿ ಎಂದು 13ನೇ ಉತ್ತರ ಕೋರಿಯಾದ ಪ್ಯಾಂಗ್ ಯಾಂಗ್ ಮತ್ತು 14ನೇ ಕ್ಯೂಬಾ ಉತ್ಸವದಲ್ಲಿ ಪ್ರತಿನಿಧಿಯಾಗಿದ್ದ, ದುಡಿಯುವ ಜನರ ದನಿ 'ಐಕ್ಯರಂಗ' ಪತ್ರಿಕೆಯ ಸಂಪಾದಕರಾದ ಎಸ್.ವೈ. ಗುರುಶಾಂತ್ ಹಾರೈಸಿದರು.

ಆಗಸ್ಟ್ 2 ರಂದು ಸಂಜೆ ಬೆಂಗಳೂರಿನ ರೈಲ್ವೆ ನಿಲ್ದಾಣದಲ್ಲಿ ಸುರಿಯುವ ಮಳೆಯ ಮಧ್ಯೆ 15ನೇ ವಿಶ್ವ ವಿದ್ಯಾರ್ಥಿ ಯುವಜನ ಉತ್ಸವ ಯಶಸ್ವಿಯಾಗಲಿ, ಸಾಮ್ರಾಜ್ಯಶಾಹಿಗೆ ದಿಕ್ಕಾರ, ಜಾಗತೀಕರಣ, ಉದಾರೀಕರಣ, ಖಾಸಗೀಕರಣ ನೀತಿಗಳಿಗೆ ಧಿಕ್ಕಾರ, ಸ್ವಾತಂತ್ರ ಪ್ರಜಾಪ್ರಭುತ್ವ ಸಮಾಜವಾದ ಚಿರಾಯುವಾಗಲಿ ಘೋಷಣೆಗಳು ಚಿಮ್ಮಿದುವು. ವಿವಿಧ ಊರುಗಳಿಗೆ ತೆರಳಲು ಆಗಮಿಸಿದ್ದ ಬೇರೆ ಬೇರೆ ಊರುಗಳಿಂದ ಬರುತ್ತಿದ್ದ ನೂರಾರು ನಾಗರೀಕರು ನಿಂತು ಕಾರ್ಯಕ್ರಮ ವೀಕ್ಷಿಸುತ್ತಿದ್ದರು. ವಿವಿಧ ಸಾಮೂಹಿಕ ಸಂಘಟನೆಗಳ ಮುಖಂಡರು ಸಭೆಯಲ್ಲಿ ಹಾಜರಿದ್ದರು. ಡಿವೈಎಫ್ಐ ನ ಜಿಲ್ಲಾಧ್ಯಕ್ಷರಾದ ಕಾಂ। ಲಕ್ಷ್ಮಣ್ ಕುಮಾರ್ ಸ್ವಾಗತಿಸಿದರು. ಎಸ್.ಎಫ್.ಐ.ನ ರಾಜ್ಯ ಮುಖಂಡರಾದ ಕಾಂ। ಯುವರಾಜ್ ಕಂಬಾಳಿಮಠ್ ವಂದಿಸಿದರು.

ವಿಶ್ವ ವಿದ್ಯಾರ್ಥಿ-ಯುವಜನ ಮೇಳ ಅಂದರೆ ಸಾಮ್ರಾಜ್ಯಶಾಹಿ ಅಮೆರಿಕಾದ ವಿರುದ್ಧ ಸಾಕ್ಷಿ ಹೇಳಲು ವಿಶ್ವ ಕಟಕಟೆ

ಸಾಮ್ರಾಜ್ಯಶಾಹಿ ಅಮೆರಿಕಾದ ವಿರುದ್ಧ "ಅಮೇರಿಕಾವೇ ನೀವು ಜಗತ್ತಿನ ಜನರ ಕಣ್ಣಲ್ಲಿ ದೋಷಿ ಎಂದು ಸಾಕ್ಷಿ ನುಡಿಯುವ ಅಂತರ್ರಾಷ್ಟ್ರೀಯ ಕಟಕಟೆಯೇ ವಿಶ್ವ ವಿದ್ಯಾರ್ಥಿ-ಯುವಜನ ಮೇಳ ಎಂದು ಖ್ಯಾತ ಪತ್ರಕರ್ತರೂ, 14ನೇ ಕ್ಯೂಬಾ ವಿಶ್ವ ವಿದ್ಯಾರ್ಥಿ ಯುವಜನ ಮೇಳದಲ್ಲಿ ಪ್ರತಿನಿಧಿಯಾಗಿ ಭಾಗವಹಿಸಿದ ಜಿ.ಎನ್.ಮೋಹನ್‌ರವರು ಮಂಗಳೂರಲ್ಲಿ ನಡೆದ ಸಮಾರಂಭವೊಂದರಲ್ಲಿ ಹೇಳಿದರು.

ಆಗಸ್ಟ್ 8-16 ರವರೆಗೆ ಅಲ್ಜೀರಿಯಾದಲ್ಲಿ ನಡೆಯಲಿರುವ ವಿಶ್ವ ವಿದ್ಯಾರ್ಥಿ-ಯುವಜನ ಉತ್ಸವದ ಬಗ್ಗೆ ಡಿವೈಎಫ್ಐ ದ.ಕ-ಉಡುಪಿ ಜಿಲ್ಲಾ ಸಮಿತಿ ಆಯೋಜಿಸಿದ್ದ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ ಅವರು ವಿದ್ಯಾರ್ಥಿ ಯುವಜನ ಉತ್ಸವದ ಪರಂಪರೆಯೇ ಸಾಮ್ರಾಜ್ಯಶಾಹಿ-ವಿರೋಧಿ ಹೋರಾಟದ ಪರಂಪರೆ ಎಂದು ಹೇಳಿದರು.

ಕಳೆದ ಸಮಾವೇಶದ ವಿವಿಧ ಆಯಾಮಗಳ ಬಗ್ಗೆ ಸಮಗ್ರ ಮಾಹಿತಿ ನೀಡಿದ ಜಿ.ಎನ್.ಮೋಹನ್‌ರವರು ಭಾಷಣ ಮಾಡಿದ ಪ್ರತಿಯೋರ್ವರೂ ಸಾಮ್ರಾಜ್ಯಶಾಹಿಯ ಅಮಾನುಷ ವರ್ತನೆಯ ವಿವಿಧ ಸ್ವರೂಪಗಳನ್ನು ತೆರೆದಿಟ್ಟು ವಿವರಿಸಿದಾಗ ಇಡೀ ವಿಶ್ವದ ಯುವ ಸಮುದಾಯವೇ "ಅಮೆರಿಕಾ ನೀನು ದೋಷಿ' ಎಂದು ತೀರ್ಪು ನೀಡಿತ್ತು ಎಂದರು. ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಕೆ.ಆರ್.ಶ್ರೀಯಾನ್ ರವರು ಜಾಗತೀಕರಣದ ಅಪಾಯಗಳ ವಿರುದ್ಧ ನಡೆಯುತ್ತಿರುವ ಚಳುವಳಿಯ ಬಗ್ಗೆ ವಿವರಿಸಿದರು.

ಇನ್ನೋರ್ವ ಅತಿಥಿ ಅಖಿಲ ಭಾರತ ವಕೀಲರ ಸಂಘದ ಜಿಲ್ಲಾಧ್ಯಕ್ಷರಾದ ಯಶವಂತ ಪರೂಕಿ, ಡಿವೈಎಫ್ಐ ದ.ಕ-ಉಡುಪಿ ಜಿಲ್ಲಾ ಸಮಿತಿ ಉಪಾಧ್ಯಕ್ಷ ರಾದ ವಸಂತ ಆಚಾರಿಯವರೂ ಮಾತನಾಡಿದರು. ಈ ಬಾರಿಯ ಉತ್ಸವದ ಪ್ರತಿನಿಧಿಗಳಲ್ಲಿ ಓರ್ವರಾದ ಕೃಷ್ಣಪ್ಪ ಕೊಂಚಾಡಿ, ಸಮಾರಂಭದ ಅಧ್ಯಕ್ಷರಾಗಿದ್ದ ಕೆ.ಯಾದವಶೆಟ್ಟಿ ಮಾತನಾಡಿದರು. ಪ್ರಾರಂಭದಲ್ಲಿ ನಗರ ಸಮಿತಿ ಕಾರ್ಯದರ್ಶಿ ಅಶೋಕ ಕೊಂಚಾಡಿ ಸ್ವಾಗತಿಸಿದರೆ ಜಿಲ್ಲಾ ಕಾರ್ಯದರ್ಶಿ ಸುನೀಲ್ ಕುಮಾರ್ ಬಜಾಲ್ ಕಾರ್ಯಕ್ರಮ ನಿರ್ವಹಿಸಿದರು. ಅರುಣ್ ಕುಮಾರ್ ಉಲ್ಲಾಳ ವಂದಿಸಿದರು.

ಎಡದಿಂದ ಬಲಕ್ಕೆ ವಸಂತಆಚಾರಿ, ಕೃಷ್ಣಪ್ಪ ಕೊಂಚಾಡಿ, ಜಿ.ಎನ್.ಮೋಹನ್,ಯಾದವಶೆಟ್ಟಿ, ಕೆ.ಆರ್.ಶ್ರೀಯಾನ್, ಯಶವಂತ ಮರೊಳ




ತರುಣ ಮಾರ್ಕ್ಸ್‌ವಾದಿ, ಕೇಂದ್ರ ಸಮಿತಿ ಸದಸ್ಯ

ಶೈಲೇಂದ್ರ ಶೈಲಿ ನಿಧನ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಕೇಂದ್ರ ಸಮಿತಿ ಸದಸ್ಯ, ಮಧ್ಯಪ್ರದೇಶದ ರಾಜ್ಯ ಸಮಿತಿ ಕಾರ್ಯದರ್ಶಿ 44 ವರ್ಷದ ಕಾಮ್ರೇಡ್ ಶೈಲೇಂದ್ರ ಶೈಲಿ ಆಗಸ್ಟ್ 7ನೇ ತಾರೀಖಿನಂದು ಭೂಪಾಲ್‌ನಲ್ಲಿ ಅಘಾತಕಾರಿಯಾಗಿ ನಿಧನ ಹೊಂದಿರುತ್ತಾರೆ.

1975 ರಲ್ಲಿ ವಿದ್ಯಾರ್ಥಿ ಚಳುವಳಿಯ ಮೂಲಕ ಸಕ್ರಿಯ ಕಾರ್ಯಕರ್ತರಾಗಿ ಎಡಚಿಂತನೆಗೆ ತೊಡಗಿಸಿಕೊಂಡ ಕಾಮ್ರೇಡ್ ಶೈಲೇಂದ್ರ ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದರು. ಎಸ್‌ಎಫ್‌ಐನ ಮಧ್ಯ ಪ್ರದೇಶದ ರಾಜ್ಯದ ಕಾರ್ಯದರ್ಶಿಯಾಗಿ, ಅಖಿಲ ಭಾರತ



ಜಂಟಿ ಕಾರ್ಯದರ್ಶಿಯಾಗಿದ್ದ ಅವರು 1997 ರಲ್ಲಿ ಪಕ್ಷವನ್ನು ಸೇರಿದ್ದರು.

ತನ್ನ 34ನೇ ವಯಸ್ಸಿನಲ್ಲೇ, ಅಂದರೆ 1991 ರಲ್ಲಿ ಮಧ್ಯಪ್ರದೇಶ ರಾಜ್ಯ ಸಮಿತಿಯ ಕಾರ್ಯದರ್ಶಿಯಾಗಿ ಆಯ್ಕೆಯಾದ ಶೈಲೇಂದ್ರ ಶೈಲಿ, 1995 ರಲ್ಲಿ ನಡೆದ 15ನೇ ಪಕ್ಷದ ಅಧಿವೇಶನದಲ್ಲಿ ಕೇಂದ್ರ ಸಮಿತಿಗೆ ಆಯ್ಕೆಯಾಗಿದ್ದರು. ಈ ಅವಧಿಯಲ್ಲಿ ತನ್ನ ಸ್ವಂತ ಆಸ್ತಿಯನ್ನು ಮಾರಾಟ ಮಾಡಿ, ಪಕ್ಷದ ರಾಜ್ಯ ಸಮಿತಿ ಕಛೇರಿಯನ್ನು ಕಟ್ಟುವಲ್ಲಿ ಪ್ರಮುಖ ಪಾತ್ರವಹಿಸಿದ್ದರು.

ಹಿಂದಿಯಲ್ಲಿ ಉತ್ತಮ ಭಾಷಣಕಾರರಾಗಿದ್ದ ಅವರು ಅನೇಕ ಲೇಖನಗಳನ್ನು ಬರೆದಿದ್ದರು. ಮಾರ್ಕ್ಸ್‌ವಾದವನ್ನು ಸಾಕಷ್ಟು ಅರಗಿಸಿಕೊಂಡಿದ್ದ ಕಾಂ. ಶೈಲಿ ಅದನ್ನು ಪಸರಿಸುವಲ್ಲಿ ಶ್ರಮವಹಿಸಿದರು.

ಕಾಮ್ರೇಡ್ ಶೈಲೇಂದ್ರ ಶೈಲಿಯವರ ಪತ್ನಿ ಸಂಧ್ಯಾ ಕೂಡಾ ಪಕ್ಷದ್ದ ಸಾಮೂಹಿಕ ಸಂಘಟನೆಗಳಲ್ಲಿ ತೊಡಗಿಸಿಕೊಂಡಿರುತ್ತಾರೆ. ಕೆನರಾ ಬ್ಯಾಂಕಿನಲ್ಲಿ ಕೆಲಸ ಮಾಡುತ್ತಿದ್ದು ಇತ್ತೀಚೆಗೆ ಸ್ವಯಂ ನಿವೃತ್ತಿ ಹೊಂದಿದ ಅವರು ಅಲ್ಲಿನ ನೌಕರ ಸಂಘಟನೆಯ ಅಖಿಲ ಭಾರತ ಕಾರ್ಯಕಾರಿ ಸಮಿತಿ ಸದಸ್ಯರಾಗಿದ್ದರು. ಮಧ್ಯಪ್ರದೇಶ ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಕಾರ್ಯದರ್ಶಿಯೂ ಆಗಿರುತ್ತಾರೆ.

ಪತ್ನಿ ಸಂಧ್ಯಾ, ತಾಯಿ ಮತ್ತು ಒಬ್ಬಳೇ ಮಗಳನ್ನು ಅಗಲಿದ ಶೈಲೇಂದ್ರ ಶೈಲಿ ಅಪಾರ ಸಂಗಾತಿಗಳನ್ನು, ಬೆಂಬಲಿಗರನ್ನು ಬಿಟ್ಟು ಹೋಗಿದ್ದಾರೆ.

ಶೈಲೇಂದ್ರ ಶೈಲಿಯವರ ಅಕಾಲಿಕ ಮರಣ ಅತೀವ ದುಃಖ ಮತ್ತು ದಿಗ್ಭ್ರಮೆ ಮೂಡಿಸಿದೆ ಎಂದು ಪಾಲಿಟ್‌ಬ್ಯೂರೋ ಬಣ್ಣಿಸಿದೆ.

ಬೆಂಗಳೂರಿನಲ್ಲಿ ಶ್ರದ್ಧಾಂಜಲಿ ಸಭೆ: ತರುಣ ಮಾರ್ಕ್ಸ್‌ವಾದಿಯ ನಿಧನದ ಸುದ್ದಿ ತಿಳಿಯುತ್ತಲೇ ಆಘಾತಗೊಂಡ ರಾಜ್ಯ ಕಾರ್ಯದರ್ಶಿ ಮಂಡಳಿ ಪರವಾಗಿ ಕಾಂ. ಸೂರ್ಯನಾರಾಯಣ ರಾವ್ ಮಧ್ಯ ಪ್ರದೇಶದ ರಾಜ್ಯಸಮಿತಿಗೆ ಸಂತಾಪವನ್ನು ಫ್ಯಾಕ್ಸ್ ಮೂಲಕ ಕಳಿಸಿದ್ದರು. ಅವರ ಸಂತಾಪಸೂಚಕ ಸಂದೇಶದಲ್ಲಿ ಕಾಮ್ರೇಡ್ ಶೈಲಿಯವರ ನಿಧನ, ಮಧ್ಯಪ್ರದೇಶ ರಾಜ್ಯ ಸಮಿತಿಗೆ ಅತೀವ ನಷ್ಟ ಎಂದು ಹೇಳಿದ್ದಾರೆ.

ಸಂಜೆ ಬೆಂಗಳೂರಿನ ಬಬ್ಬೂರು ಗಿಡ್ಡಣ್ಣ ಹಾಲ್‌ನಲ್ಲಿ ನಡೆದ ಸಭೆಯಲ್ಲಿ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಿ.ಸಿ.ಬಯ್ಯಾರೆಡ್ಡಿ ಶ್ರದ್ಧಾಂಜಲಿ ಗೊತ್ತುವಳಿಯನ್ನು ಮಂಡಿಸಿದರು. ರಾಜ್ಯ ಕಾರ್ಯದರ್ಶಿ ಮತ್ತು ಕೇಂದ್ರ ಸಮಿತಿ ಸದಸ್ಯ ಎಸ್.ಸೂರ್ಯನಾರಾಯಣ ರಾವ್, ಜಮ್ಮು ಕಾಶ್ಮೀರದ ಕಾರ್ಯದರ್ಶಿ ಮಹಮ್ಮದ್ ಯೂಸುಫ್ ತರಿಗಾಮಿ ತಮ್ಮ ಸಂತಾಪವನ್ನು ಸೂಚಿಸಿ ಕಾಂ. ಶೈಲಿಯವರ ಸರಳತೆ, ತ್ಯಾಗಬುದ್ದಿಯನ್ನು ಎಲ್ಲಾ ಸಂಗಾತಿಗಳು ಅನುಸರಿಸಬೇಕೆಂದು ಕರೆ ನೀಡಿದರು. ನಂತರ ಇಡೀ ಸಭೆ ಎದ್ದು ನಿಂತು ಗೌರವ ಸಲ್ಲಿಸಿತು.

PRBDECR 319-79/79 AIKYARANGA WEEKLY Reg. No. 17015/64 KRNM/BGS-405 MAG(2)

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.

Communist Party of India(Marxist), Karnataka State Committee. Editor : S.Y.GURUSHANTH